ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಶಾಲಾ ಶಿಕ್ಷಣ ಇಲಾಖೆ

# ಉತ್ತರ ಉನ್ನತಿ-2

## ತೃತೀಯ ಭಾಷೆ-ಕನ್ನಡ

2024 ನೇ ಸಾಲಿನ ಎಸ್.ಎಸ್.ಎಲ್.ಸಿ
ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ
ಹೆಚ್ಚಿಸುವ ನಿಟ್ಟಿನಲ್ಲಿ ರಚಿಸಲಾಗಿರುವ
ಅಭ್ಯಾಸ ಪ್ರಶ್ನೆಪತ್ರಿಕೆಗಳ ಕೈಪಿಡಿ
ಮಾದರಿ ಉತ್ತರಗಳೊಂದಿಗೆ



## ಉಪನಿರ್ದೇಶಕರು (ಆಡಳಿತ)ರವರ ಕಛೇರಿ

ಬೆಂಗಳೂರು ಉತ್ತರ ಜಿಲ್ಲೆ ಕೆ.ಜಿ.ರಸ್ತೆ, ಬೆಂಗಳೂರು

ಶಾಲಾ ಶಿಕ್ಷಣ ಇಲಾಖೆ

ಉಪನಿರ್ದೇಶಕರು(ಆಡಳಿತ)ರವರ ಕಚೇರಿ

ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು

# ಉತ್ತರ ಉನ್ನತಿ -2

# ತೃತೀಯ ಭಾಷೆ-ಕನ್ನಡ

**2024ರ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳ ಕೈಪಿಡಿ**

**ಮಾದರಿ ಉತ್ತರಗಳೊಂದಿಗೆ**



ಶ್ರೀ ಕಾಂತರಾಜು ಪಿ ಎಸ್ ಭಾ.ಆ.ಸೇ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿ
ಎಸ್ ಕರಿಯಪ್ಪ ರಸ್ತೆ
ಬನಶಂಕರಿ
ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಬೆಂಗಳೂರು

## :: ಅಭಿನಂದನಾ ನುಡಿ ::

ಶಾಲಾ ಶಿಕ್ಷಣವು ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಂತ ಮಹತ್ವದ ಘಟ್ಟವಾಗಿದ್ದು, ಅದರಲ್ಲೂ ಎಸ್.ಎಸ್.ಎಲ್.ಸಿ ಎನ್ನುವುದು ಅತ್ಯಂತ ಪ್ರಮುಖವಾದ ಮೈಲಿಗಲ್ಲಾಗಿದೆ. ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ವಿದ್ಯಾರ್ಥಿಗಳು ವಿಶ್ವಾಸಪೂರ್ವಕವಾಗಿ ಬರೆಯುವಂತಾಗಲೂ ಮತ್ತು ಶಿಕ್ಷಕರು ವಿದ್ಯಾರ್ಥಿಗಳನ್ನು ಈ ದೆಸೆಯಲ್ಲಿ ಸಿದ್ಧಗೊಳಿಸಲು ಅನುವಾಗುವಂತೆ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರ ಕಚೇರಿಯಿಂದ ಉತ್ತರ ಉನ್ನತಿ–2 ಎನ್ನುವ ಅಭ್ಯಾಸ ಪತ್ರಿಕೆಗಳ ಕೈಪಿಡಿಯನ್ನು ಮಾದರಿ ಉತ್ತರಗಳ ಸಮೇತ ನೀಡುತ್ತಿರುವುದು ಹರ್ಷದಾಯಕ ವಿಷಯವಾಗಿದೆ. ಪರೀಕ್ಷೆಗೆ ಉಳಿಕೆ ಇರುವ ದಿನಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸದರಿ ಕೈಪಿಡಿಯನ್ನು ಆಧರಿಸಿ ತಮ್ಮ ಹಂತದಲ್ಲಿ ಕ್ರಿಯಾಯೋಜನೆ ರಚಿಸಿಕೊಂಡು ಸದರಿ ಹೊತ್ತಿಗೆಯನ್ನು ಪರಿಣಾಮಕಾರಿ ಬಳಸಿಕೊಂಡು ಉತ್ತಮ ಫಲಿತಾಂಶ ಪಡೆಯಲು ಸಹಕಾರಿಯಾಗಲೀ ಎಂದು ಆಶಿಸುತ್ತಾ, ವಿದ್ಯಾರ್ಥಿಗಳ ಫಲಿತಾಂಶವು ಕೇವಲ ವಿದ್ಯಾರ್ಥಿಗೆ ಸಂಬಂಧಿಸಿದ ಫಲಿತಾಂಶವಾಗಿರದೇ, ಬೆಂಗಳೂರು ನಗರ ಜಿಲ್ಲೆಯ ಫಲಿತಾಂಶವೂ ಆಗಿರುವುದರಿಂದ ಜಿಲ್ಲೆಯ ಫಲಿತಾಂಶವನ್ನು ಪರಿಮಾಣಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಈ ಪುಸ್ತಿಕೆಯು ದಾರಿದೀಪವಾಗಲೀ ಎಂದು ಹಾರೈಸುತ್ತಾ, ಈ ಹೊತ್ತಿಗೆಯನ್ನು ಹೊರತರುವಲ್ಲಿ ಶ್ರಮಿಸಿದ ಎಲ್ಲಾ ಅಧಿಕಾರಿಗಳು ಮತ್ತು ಸಂಪನ್ಮೂಲ ಶಿಕ್ಷಕರಿಗೆ ತುಂಬು ಹೃದಯದ ಅಭಿನಂದನೆಗಳು.

ಕಾಂತರಾಜು
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**01.01.2024**

ಬೆಂಗಳೂರು



**ಲೋಹಿತೇಶ್ವರ ರೆಡ್ಡಿ ಕೆ ಪಿ**
**ಉಪನಿರ್ದೇಶಕರು (ಆಡಳಿತ)**


**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ**
**ಬೆಂಗಳೂರು ಉತ್ತರ ಜಿಲ್ಲೆ**
**ಬೆಂಗಳೂರು – 560009**
**ದೂರವಾಣಿ ಸಂಖ್ಯೆ – 080 22215312**
**ಇಮೇಲ್ ವಿಳಾಸ –**
**ddpinorth@gmail.com**


# ಸಂದೇಶ

ಪ್ರತಿಯೊಂದು ವಿದ್ಯಾರ್ಥಿಯ ಜೀವನದಲ್ಲೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವೂ ಮಹತ್ವಪೂರ್ಣವಾಗಿದೆ. ಇಂದಿನ ವಿದ್ಯಾರ್ಥಿಗಳೇ, ಮುಂದಿನ ರಾಷ್ಟ್ರದ ಭವಿಷ್ಯತ್ತಿನ ಸಂಪತ್ತಾಗಿರುವುದರಿಂದ, ಶಿಕ್ಷಣದ ಅಂತಸತ್ವವನ್ನು ಮತ್ತಷ್ಟು ಗಟ್ಟಿಗೊಳಿಸುವ ಮತ್ತು ಗುಣಾತ್ಮಕವಾಗಿಸುವ ನಿಟ್ಟಿನಲ್ಲಿ ನಮ್ಮೆಲ್ಲರ ಜವಾಬ್ದಾರಿ ಇದೆ. ಸಾರ್ವತ್ರಿಕ ಶಿಕ್ಷಣವನ್ನು ಸಾಧಿಸಿದ ನಂತರ, ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಅಣಿಗೊಳಿಸುವಂತಹ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಬೇಕಾದ ಈ ಸಂಧರ್ಭದಲ್ಲಿ ನಮ್ಮ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಲೇ ಬರಲಾಗಿದೆ. ಈ ನಿಟ್ಟಿನಲ್ಲಿ ಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರನ್ನು ಶೈಕ್ಷಣಿಕವಾಗಿ ಸಧೃಡರನ್ನಾಗಿ ಮಾಡುವಲ್ಲಿ ನಮ್ಮ ಕಚೇರಿಯ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಸಂಪನ್ಮೂಲ ಶಿಕ್ಷಕರ ತಂಡವನ್ನು ರಚಿಸಿಕೊಂಡು ಕಾರ್ಯೋನ್ಮುಖರಾಗಿದ್ದಾರೆ.

ನಮ್ಮ ಈ ಬೆಂಗಳೂರು ಉತ್ತರ ಜಿಲ್ಲೆಯ ಶೈಕ್ಷಣಿಕ ಪಗ್ರತಿಯ ಒಂದು ಭಾಗವಾದ, ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಪ್ರತಿವರ್ಷ "ಉತ್ತರ ಉತ್ತುಂಗ" ಎಂಬ ಹೊತ್ತಿಗೆಯನ್ನು ಹೊರತರುತ್ತಿದ್ದು ಸದರಿ ವರ್ಷ ಹೊಸ ಶೀರ್ಷಿಕೆಯೊಂದಿಗೆ ಮಾದರಿ ಉತ್ತರಗಳ ಸಮೇತ **'ಉತ್ತರ ಉನ್ನತಿ–2'** ಎಂಬ ಶೀರ್ಷಿಕೆಯಡಿಯಲ್ಲಿ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನೊಳಗೊಂಡ ಕೈಪಿಡಿಯನ್ನು ಹೊರತರಲಾಗುತ್ತಿದ್ದು ಇದರ ಉಪಯೋಗವನ್ನು ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪಡೆಯುವಂತಾಗಲೀ ಎಂದು ಆಶಿಸುತ್ತೇನೆ.

ಕೇವಲ ಉತ್ತೀರ್ಣಗೊಳಿಸುವ ಒಂದೇ ಮಾನದಂಡವನ್ನು ಇಟ್ಟುಗೊಳ್ಳದೇ, ವಿದ್ಯಾರ್ಥಿಯ ಗುಣಾತ್ಮಕ ಫಲಿತಾಂಶಕ್ಕೆ ಇನ್ನೂ ಉಳಿಕೆ ಇರುವ ದಿನಗಳಲ್ಲಿ ಜಿಲ್ಲೆಯ ಎಲ್ಲಾ ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮದೇ ಆದ ಕ್ರಿಯಾ ಯೋಜನೆಯನ್ನು ರಚಿಸಿಕೊಂಡು ಉತ್ತಮ ಸ್ಥಾನ ಪಡೆಯುವಂತಾಗಲೀ ಎಂದು ಶುಭ ಹಾರೈಸುತ್ತೇನೆ.

ಈ ಕೈಪಿಡಿಯನ್ನು ಹೊರತರುವಲ್ಲಿ ನಮ್ಮ ಕಚೇರಿಯ ಶಿಕ್ಷಣಾಧಿಕಾರಿಗಳು ಹಾಗೂ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳಾದ ಶ್ರೀ ರಮೇಶ್ ವಿ ರವರಿಗೂ , ಎಲ್ಲಾ ವಿಷಯ ಪರಿವೀಕ್ಷಕರು ಮತ್ತು ಅವರ ಸಂಪನ್ಮೂಲ ತಂಡಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

01.01.2024
ಬೆಂಗಳೂರು

**ಲೋಹಿತೇಶ್ವರ ರೆಡ್ಡಿ ಕೆ ಪಿ**
ಉಪನಿರ್ದೇಶಕರು (ಆಡಳಿತ)



ರಮೇಶ್ ವಿ
ಶಿಕ್ಷಣಾಧಿಕಾರಿಗಳು &
ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು

ಉಪನಿರ್ದೇಶಕರು (ಆಡಳಿತ)ರವರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ
ಬೆಂಗಳೂರು – **560009**
ದೂರವಾಣಿ ಸಂಖ್ಯೆ – **080 22215312**
ಇಮೇಲ್ ವಿಳಾಸ –
**ddpinorth@gmail.com**

# ಮುನ್ನುಡಿ

ಶಿಕ್ಷಣವು ವಿದ್ಯಾರ್ಥಿಯ ವ್ಯಕ್ತಿತ್ವ ಬೆಳವಣಿಗೆಯಲ್ಲಿ ತನ್ನದೇ ಆದ ಮಹತ್ವವನ್ನು ಹೊಂದಿದೆ. ಅದರಲ್ಲೂ ಮಾಧ್ಯಮಿಕ ಶಿಕ್ಷಣವೂ ವಿದ್ಯಾರ್ಥಿಯ ಮುಂದಿನ ಭವಿಷ್ಯದ ತಳಪಾಯವಾಗಿದ್ದು, ರಾಷ್ಟ್ರದ ಉತ್ತಮ ನಾಗರೀಕ ಪ್ರಜೆಯನ್ನಾಗಿಸುವಲ್ಲಿ ಮಹತ್ತಮ ಘಟ್ಟವಾಗಿದೆ. ಕರ್ನಾಟಕ ಶಿಕ್ಷಣ ಸಂರಚನೆಯ ವ್ಯವಸ್ಥೆಯಲ್ಲಿ ಮಾಧ್ಯಮಿಕ ಶಿಕ್ಷಣದ ಮಹತ್ತರ ಘಟ್ಟವೆಂದೇ ಪರಿಗಣಿತವಾಗಿರುವ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ಆಯ್ಕೆ ಮತ್ತು ವೃತ್ತಿ ಜೀವನ ನಿರ್ಧಾರದ ಕೈಗೊಳ್ಳುವ ಪ್ರಥಮತಃ ಹಂತವಾಗಿದ್ದು, ಈ ತರಗತಿಯ ಫಲಿತಾಂಶವೂ ಅತ್ಯಂತ ಮಹತ್ತರವಾಗಿರುತ್ತದೆ.

ಪ್ರತೀ ವರ್ಷ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ನಡೆಸಲ್ಪಡುವ ಹತ್ತನೇ ತರಗತಿಯ ಪರೀಕ್ಷೆಗೆ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯಿಂದ ಪ್ರಸಕ್ತ ವರ್ಷ **44378** ಶಾಲಾ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದು, ಈ ವಿದ್ಯಾರ್ಥಿಗಳ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಶಾಲಾ ಶಿಕ್ಷಕರಿಂದ ಮೊದಲುಗೊಂಡು, ಮುಖ್ಯ ಶಿಕ್ಷಕರು ಅಲ್ಲದೇ ತಾಲ್ಲೂಕು ಹಂತ, ಜಿಲ್ಲಾ ಹಂತ, ರಾಜ್ಯ ಹಂತದ ಎಲ್ಲಾ ಅಧಿಕಾರಿಗಳು ವಿವಿಧ ಕಾರ್ಯತಂತ್ರಗಳ ಮುಖೇನ ಪ್ರಯತ್ನಿಸುತ್ತಲೇ ಇದ್ದಾರೆ. ಈ ನಿಟ್ಟಿನಲ್ಲಿ ನಮ್ಮ ಕಚೇರಿಯಿಂದಲೂ **22** ಮೇ **2023** ರಂದು ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಭೆ ಕರೆದು ಪ್ರಸಕ್ತ ವರ್ಷದ ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಿಯಾ ಯೋಜನೆಯನ್ನು ರಚಿಸಿ, ವಿವಿಧ ಕಾರ್ಯಚಟುವಟಿಕೆಗಳ ಮೂಲಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಮುಟ್ಟುವಂತಹ ಕೆಲಸವನ್ನು ಜೂನ್ **2023**ರಿಂದಲೂ ಮಾಡುತ್ತಲೇ ಬರುತ್ತಿದೆ.

ಈ ಕಾರ್ಯಚಟುವಟಿಕೆಯ ಒಂದು ಭಾಗವಾಗಿ **"ಉತ್ತರ ಉನ್ನತಿ–2"** ಎಂಬ ಮಾದರಿ ಉತ್ತರಗಳನ್ನು ಒಳಗೊಂಡ ಅಭ್ಯಾಸ ಪತ್ರಿಕೆಗಳ ಸಂಪನ್ಮೂಲ ಸಾಹಿತ್ಯವನ್ನು ರಚಿಸಿ, ಪ್ರಸ್ತುತ ಶಿಕ್ಷಕರಿಗೆ ನೀಡುತ್ತಿದ್ದೇವೆ. ಈ ಸಂಪನ್ಮೂಲ ಸಾಹಿತ್ಯವನ್ನು ಗುಣಾತ್ಮಕ ಫಲಿತಾಂಶದ ಒಂದು ಕಾರ್ಯತಂತ್ರವಾಗಿ ಹೇಗೆ ಬಳಕೆ ಮಾಡಬೇಕೆಂದು ವಿಷಯ ಪರಿವೀಕ್ಷಕರು ಮತ್ತು ವಿಷಯವಾರು ಸಂಪನ್ಮೂಲ ವ್ಯಕ್ತಿಗಳ ಮುಖೇನ ಮಾರ್ಗದರ್ಶನ ಮಾಡಿದ್ದು, ಇದು ಈ ಶೈಕ್ಷಣಿಕ ವರ್ಷದ ಬೆಂಗಳೂರು ಉತ್ತರ ಜಿಲ್ಲೆಯ ಫಲಿತಾಂಶವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುವುದೆಂಬ ಆಶಯದೊಂದಿಗೆ ಈ ಕೈಪಿಡಿಯನ್ನು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕೈಗಿಡಲಾಗುತ್ತಿದೆ. ಇದರ ಸದುಪಯೋಗವನ್ನು ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು ಪಡೆದು, ಉತ್ತಮ ಫಲಿತಾಂಶಕ್ಕಾಗಿ ಶುಭ ಹಾರೈಸುತ್ತೇನೆ.

01.01.2024
ಬೆಂಗಳೂರು

ರಮೇಶ್ ವಿ
ಶಿಕ್ಷಣಾಧಿಕಾರಿಗಳು & ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು



**ಪಂಕಜ ಜಿ ಸಿ**
**ಶಿಕ್ಷಣಾಧಿಕಾರಿ**

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ**
**ಬೆಂಗಳೂರು ಉತ್ತರ ಜಿಲ್ಲೆ**
**ಬೆಂಗಳೂರು – 560009**
**ದೂರವಾಣಿ ಸಂಖ್ಯೆ – 080 22215312**
**ಇಮೇಲ್ ವಿಳಾಸ –**
**ddpinorth@gmail.com**

# ಶುಭ ಹಾರೈಕೆ

ಶಿಕ್ಷಣವು ಜ್ಞಾನವನ್ನು ಕಟ್ಟಿಕೊಳ್ಳುವ, ಜ್ಞಾನವನ್ನು ಸಂರಚಿಸಿಕೊಳ್ಳುವ ಹಾಗೂ ಜ್ಞಾನಾನ್ವೇಷಣೆಯತ್ತ ನಮ್ಮನ್ನು ಪ್ರೇರೇಪಿಸುವ ಒಂದು ಅದ್ಭುತ ಪ್ರಕ್ರಿಯೆ. ಬೋಧನೆ, ಕಲಿಕೆ, ಕಲಿಕೆಯ ದೃಢೀಕರಣ ಹಾಗೂ ಮೌಲ್ಯಮಾಪನ ಕ್ರಿಯೆಗಳು ಈ ಪ್ರಕ್ರಿಯೆಯ ಪ್ರಮುಖ ಭಾಗಗಳಾಗಿವೆ. ಮೌಲ್ಯಮಾಪನವು ವಿದ್ಯಾರ್ಥಿಗಳ ಗುಣಾತ್ಮಕ ಕಲಿಕೆಯನ್ನು ಹಾಗೂ ಕಲಿಕಾಫಲಗಳನ್ನು ಒರೆಹಚ್ಚುವ ಒಂದು ಸಾಧನವಾಗಿದೆ. ಈ ಮೌಲ್ಯಮಾಪನ ಪ್ರಕ್ರಿಯೆಯನ್ನು ಸದೃಢಗೊಳಿಸುವ ಹಿನ್ನೆಲೆಯಲ್ಲಿ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳನ್ನು 2023–24ನೇ ಸಾಲಿನ ಪರೀಕ್ಷೆಗಾಗಿ ಸಿದ್ಧಗೊಳಿಸುವ ನಿಟ್ಟಿನಲ್ಲಿ ಬೆಂಗಳೂರು ಉತ್ತರ ಜಿಲ್ಲೆಯಿಂದ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಒಳಗೊಂಡಿರುವ "**ಉತ್ತರ ಉನ್ನತಿ–2**" ಎಂಬ ಕೈಪಿಡಿಯನ್ನು ಹೊರತರಲಾಗುತ್ತಿದೆ. 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಹೊರತರುತ್ತಿರುವ ಈ ಆವೃತ್ತಿಯು ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಅರ್ಥೈಸಿಕೊಳ್ಳುವ, ವಿಶ್ಲೇಷಿಸುವ ಹಾಗೂ ಸೂಕ್ತ ರೀತಿಯಲ್ಲಿ ಉತ್ತರಿಸುವ ಪ್ರಕ್ರಿಯೆಯನ್ನು ಸದೃಢಗೊಳಿಸುವತ್ತ ಬಹಳ ಪರಿಣಾಮಕಾರಿಯಾಗಿದೆ. ಈ "**ಉತ್ತರ ಉನ್ನತಿ–2**" ನೂತನ ಆವೃತ್ತಿಯು 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ಸಾಮಗ್ರಿಯಾಗಿ ಉಪಯೋಗವಾಗಲಿ ಎಂಬುವುದು ನಮ್ಮ ಆಶಯ. ಈ ಕೈಪಿಡಿಯನ್ನು ಹೊರತರುವಲ್ಲಿ ತಮ್ಮ ಅಮೂಲ್ಯ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಿದ ಉಪನಿರ್ದೇಶಕರು (ಆಡಳಿತ), ಬೆಂಗಳೂರು ಉತ್ತರ ಜಿಲ್ಲೆ, ಇವರಿಗೂ ಹಾಗೂ ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳಿಗೂ ಮತ್ತು ಈ ಕಾರ್ಯಕ್ಕೆ ಶ್ರಮಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳು, ವಿಷಯ ಪರಿವೀಕ್ಷಕರು ಹಾಗೂ ಅಧಿಕಾರಿ ವೃಂದದವರಿಗೂ ಹೃತ್ಪೂರ್ವಕ ಅಭಿನಂದನೆಗಳು. 2023–24ನೇ ಸಾಲಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶುಭ ಹಾರೈಸುತ್ತಾ ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಉತ್ತುಂಗಕ್ಕೆ ಏರಲೆಂದು ಮನದುಂಬಿ ಆಶಿಸುತ್ತೇನೆ.

01.01.2024
**ಬೆಂಗಳೂರು**

**ಪಂಕಜ ಜಿ ಸಿ**
**ಶಿಕ್ಷಣಾಧಿಕಾರಿ**



ಮಂಜುನಾಥ ಎಸ್ ಎಸ್

ವಿಷಯ ಪರಿವೀಕ್ಷಕರು–ಸಮಾಜ ವಿಜ್ಞಾನ & ಕನ್ನಡ(ಹೆ.ಪ್ರ)


ಉಪನಿರ್ದೇಶಕರು (ಆಡಳಿತ)ರವರ ಕಚೇರಿ

ಶಾಲಾ ಶಿಕ್ಷಣ ಇಲಾಖೆ

ಬೆಂಗಳೂರು ಉತ್ತರ ಜಿಲ್ಲೆ

ಬೆಂಗಳೂರು – 560009

ದೂರವಾಣಿ ಸಂಖ್ಯೆ – 080 22215312

ಇಮೇಲ್ ವಿಳಾಸ –

ddpinorth@gmail.com


**2024** ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ನಡೆಸುವ ವಿಧಾನದಲ್ಲಿ ಹಲವಾರು ಬದಲಾವಣೆಗಳನ್ನು ತರಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ಧರಿಸಿರುವುದು ತಮಗೆಲ್ಲಾ ತಿಳಿದಿರುವ ವಿಷಯವೇ ಆಗಿದೆ. ಈ ಬಗ್ಗೆ ಈಗಾಗಲೇ ನಡೆಸಿರುವ ಮುಖ್ಯ ಶಿಕ್ಷಕರ ಮತ್ತು ಶಿಕ್ಷಕರ ಸಭೆಗಳಲ್ಲಿ ವಿಸ್ತೃತವಾಗಿ ತಿಳಿಯಪಡಿಸಿದೆ. ಈ ಬದಲಾವಣೆಗಳೊಂದಿಗೆ ಶಿಕ್ಷಕರನ್ನು ಶೈಕ್ಷಣಿಕವಾಗಿ ಬಲಪಡಿಸಲು ಮತ್ತು ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಬರೆಯುವಂತೆ ಮಾಡಲು ಪ್ರತಿ ವರ್ಷದಂತೆ ಈ ವರ್ಷವೂ 'ಉತ್ತರ ಉನ್ನತಿ–2' ಎಂಬ ಅಭ್ಯಾಸ ಪತ್ರಿಕೆಗಳ ಕೈಪಿಡಿಯನ್ನು ಹಲವಾರು ಬದಲಾವಣೆಗಳೊಂದಿಗೆ ತಮ್ಮ ಮುಂದಿಡಲು ನಾವು ಹರ್ಷಿಸುತ್ತೇವೆ. ಇದು 'ಉತ್ತರ ಉತ್ತುಂಗ'ದ ಹೊಸ ಶೀರ್ಷಿಕೆಯ ಹೊಸ ಆವೃತ್ತಿ ಎಂಬುದನ್ನು ತಿಳಿಸಲು ಖುಷಿ ಎನಿಸುತ್ತದೆ.

ಹಿಂದಿನ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಪ್ರಸ್ತುತ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು **2019-20** ರಲ್ಲಿ ಪ್ರಕಟಿಸಿರುವ "ದೀವಿಗೆ" ಎಂಬ ಪ್ರಶ್ನೆಪತ್ರಿಕೆ ವಿನ್ಯಾಸ ಕೈಪಿಡಿ, ಮಂಡಳಿಯು ಈ ಹಿಂದಿನ ವರ್ಷಗಳಲ್ಲಿ ಪ್ರಕಟಿಸಿರುವ ಮಾದರಿ ಪ್ರಶ್ನೆಪತ್ರಿಕೆಗಳು ಮತ್ತು ಸದರಿ ವರ್ಷ ಮೌಲ್ಯಮಾಪನಕ್ಕೆ ಪರಿಗಣಿಸಿರುವ ಪರಿಷ್ಕೃತ ಅಧ್ಯಾಯಗಳ ಆಧಾರದ ಮೇಲೆ ಈ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಸಂಪನ್ಮೂಲ ಶಿಕ್ಷಕರ ತಂಡದಿಂದ ರಚಿಸಲಾಗಿದ್ದು, ಸದರಿ ಸಾಹಿತ್ಯವು **05** ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಒಳಗೊಂಡಿದೆ. ವಿಶೇಷವಾಗಿ ಈ ವರ್ಷದ ನೂತನ ಆವೃತ್ತಿಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಪ್ರಕಟಿಸಿರುವ ಮಾದರಿ ಉತ್ತರಗಳ ಮಾದರಿಯಲ್ಲಿ ಪ್ರತಿ ಪ್ರಶ್ನೆಪತ್ರಿಕೆಗಳಿಗೂ ಉತ್ತರ ಕೀಲಿಯನ್ನು ನೀಡಲಾಗಿದೆ. ಇದು ವಿದ್ಯಾರ್ಥಿಗಳ ಸ್ವ ಮೌಲ್ಯಮಾಪನಕ್ಕೆ ಹೆಚ್ಚು ಅನುಕೂಲಕರವಾಗಿದೆ.

ಸದರಿ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ವಿವಿಧ ಕಾರ್ಯತಂತ್ರಗಳನ್ನು ಬಳಕೆ ಮಾಡಿ ವಿದ್ಯಾರ್ಥಿಗೆ ಅಭ್ಯಾಸ ಮಾಡಿಸಬಹುದಾಗಿದ್ದು, ಪ್ರತಿ ಅಭ್ಯಾಸ ಪ್ರಶ್ನೆಪತ್ರಿಕೆಯ ಬಳಕೆಯ ನಂತರ ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ನೀಡಿ ಫಲಿತಾಂಶ ಸುಧಾರಣೆಗೆ ಶ್ರಮಿಸುವುದು.

ಸದರಿ "ಉತ್ತರ ಉನ್ನತಿ–2" ನೂತನ ಕೈಪಿಡಿಯು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಪ್ರಕಟಿಸುತ್ತಿರುವ ಅಭ್ಯಾಸ ಪ್ರಶ್ನೆಪತ್ರಿಕೆಗಳಾಗಿದ್ದು, ಈ ಸಾಹಿತ್ಯವನ್ನು ತರಲು ಸೂಕ್ತ ಮಾರ್ಗದರ್ಶನ ನೀಡಿದ ನಮ್ಮ ಜಿಲ್ಲೆಯ ಶೈಕ್ಷಣಿಕ ನಾಯಕರು ಆದಂತಹ ಶ್ರೀ ಲೋಹಿತೇಶ್ವರ ರೆಡ್ಡಿ ಕೆ.ಪಿ ರವರು, ಉಪನಿರ್ದೇಶಕರು (ಆಡಳಿತ)ರವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದರಂತೆ ಈ ಕಾರ್ಯದ ಪ್ರತಿ ಹಂತದಲ್ಲೂ ಅಗತ್ಯ ಸಲಹೆ, ಸಹಕಾರ ನೀಡಿ ಈ ಸುಂದರ ಹೊತ್ತಿಗೆ ಹೊರತರಲು ಪರಿಶ್ರಮಿಸಿದ ನಮ್ಮ ಕಚೇರಿ ಶಿಕ್ಷಣಾಧಿಕಾರಿಗಳು ಹಾಗೂ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು ಆದಂತಹ ಶ್ರೀ ರಮೇಶ ವಿ ರವರಿಗೂ, ಮತ್ತೊಬ್ಬ ಶಿಕ್ಷಣಾಧಿಕಾರಿಗಳಾದ ಪಂಕಜ ಜಿ ಸಿ ರವರಿಗೂ ಧನ್ಯವಾದಗಳು. ಇನ್ನೂ ನಮ್ಮ ಈ ಪರಿಶ್ರಮದಲ್ಲಿ ಜೊತೆಯಲ್ಲಿದ್ದು, ಸಹಕರಿಸಿದ ನಮ್ಮ ಕಚೇರಿಯ ಎಲ್ಲಾ ವಿಷಯ ಪರಿವೀಕ್ಷಕರಿಗೂ ಮುಖ್ಯವಾಗಿ ಕಳೆದ ಐದು ವರ್ಷಗಳಿಂದ ನಮ್ಮ ಕಚೇರಿಯ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕೈ ಜೋಡಿಸುತ್ತಿರುವ ಎಲ್ಲಾ ವಿಷಯ ಸಂಪನ್ಮೂಲ ಶಿಕ್ಷಕರಿಗೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಈ ಸಾಹಿತ್ಯವನ್ನು ತಮ್ಮ ಉಪಯೋಗಕ್ಕೆ ನೀಡಲು ಆನಂದವೆನಿಸುತ್ತದೆ.

ವಂದನೆಗಳೊಂದಿಗೆ,

**01.01.2024**

ಬೆಂಗಳೂರು

Manjunatha. N.S

ಮಂಜುನಾಥ.ಎಸ್.ಎಸ್

❁ <u>ಪರಿಕಲ್ಪನೆ ಮತ್ತು ಮಾರ್ಗದರ್ಶನ</u> ❁

ಶ್ರೀ ಲೋಹಿತೇಶ್ವರ ರೆಡ್ಡಿ ಕೆ ಪಿ
ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

<u>ಸಲಹೆ ಮತು ಸಹಕಾರ</u>

ಶ್ರೀ ರಮೇಶ್ ವಿ
ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು
ಉಪನಿರ್ದೇಶಕರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

ಶ್ರೀಮತಿ ಪಂಕಜ ಜಿ ಸಿ
ಶಿಕ್ಷಣಾಧಿಕಾರಿಗಳು
ಉಪನಿರ್ದೇಶಕರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

<u>ಪರಿಶೀಲನೆ</u>

ಮಂಜುನಾಥ.ಎನ್.ಎಸ್
ವಿಷಯ ಪರಿವೀಕ್ಷಕರು–ಸಮಾಜ ವಿಜ್ಞಾನ & ಕನ್ನಡ (ಹೆ.ಪ್ರ)
ಉಪನಿರ್ದೇಶಕರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

<u>ಸಂಪನ್ಮೂಲ ರಚನಾ ಸಮಿತಿ</u>

1. .ಸತೀಶ್ ಕುಮಾರ್ ಕೆ ಆರ್, ಸಹಶಿಕ್ಷಕರು, ಶೇಷಾದ್ರಿಪುರಂ ಆಂಗ್ಲ ಪ್ರೌಢಶಾಲೆ, ಕುಮಾರ ಪಾರ್ಕ್ ಪಶ್ಚಿಮ ಉತ್ತರ ವಲಯ-೨ ಬೆಂಗಳೂರು – ೫೬೦೦೨೦

<u>ತಾಂತ್ರಿಕ ಸಹಕಾರ</u>

ಶ್ರೀ ಉಸ್ಮೈದ್ ಬೇಗ್, ಶಿಕ್ಷಣ ಸಂಯೋಜಕರು, ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ

# ಉತ್ತರ ಉನ್ನತಿ–2
# ತೃತೀಯ ಭಾಷೆ – ಕನ್ನಡ

**2024ರ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳ ಕೈಪಿಡಿ**

## ಪರಿವಿಡಿ


| ಕ್ರ.ಸಂ | ವಿವರ | ಪುಟ ಸಂಖ್ಯೆ |
|---|---|---|
| 1 | ಅಭ್ಯಾಸ ಪತ್ರಿಕೆ – 01 | 01 – 06 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 01 | 07 – 28 |
| 2 | ಅಭ್ಯಾಸ ಪತ್ರಿಕೆ – 02 | 29 – 34 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 02 | 35 – 56 |
| 3 | ಅಭ್ಯಾಸ ಪತ್ರಿಕೆ – 03 | 57 – 62 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 03 | 63 - 84 |
| 4 | ಅಭ್ಯಾಸ ಪತ್ರಿಕೆ – 04 | 85 - 90 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 04 | 91 – 112 |
| 5 | ಅಭ್ಯಾಸ ಪತ್ರಿಕೆ – 05 | 113 - 118 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 05 | 119 – 140 |

**2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 1**

**Academic Year 2023-24 Bengaluru North Dist. SSLC Practice Paper – 1**

**62K – ತೃತೀಯ ಭಾಷೆ – ಕನ್ನಡ**

| | |
|---|---|
| **ಸಮಯ : 3:00 ಗಂಟೆ** | **Time : 3:00 Hrs** |
| **ಗರಿಷ್ಠ ಅಂಕಗಳು : 80** | **Max. Marks : 80** |
| **ಒಟ್ಟು ಪ್ರಶ್ನೆಗಳು : 38** | **Total No of Questions : 38** |

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : 8 x 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳ ಸಂಖ್ಯೆ

   (ಎ) 50 (ಬಿ) 48

   (ಸಿ) 49 (ಡಿ) 47

2. 'ಆಡಂಬರ' ಈ ಪದದ ವಿರುದ್ಧಾರ್ಥಕ ಪದ

   (ಎ) ನಿರಾಡಂಬರ (ಬಿ) ಅಂಬರ

   (ಸಿ) ವಿಡಂಬನೆ (ಡಿ) ಡಂಬರ

3. ಕೆಳಗಿನವುಗಳಲ್ಲಿ ಗುಣಸಂದಿಗೆ ಉದಾಹರಣೆ

   (ಎ) ಭಾಷ್ಪಾಂಜಲಿ (ಬಿ) ತಿಮಿರದಾಳ

   (ಸಿ) ವಿದ್ಯಾಭ್ಯಾಸ (ಡಿ) ಹರಿಜನೋದ್ಧಾರ

4. ಕೆಳಗಿನವುಗಳಲ್ಲಿ ಜೋಡುನುಡಿಗೆ ಉದಾಹರಣೆಯಾದ ಪದ

   (ಎ) ಬೇಗಬೇಗ (ಬಿ) ಕಪ್ಪಕಾಣಿಕೆ

   (ಸಿ) ಹೌದುಹೌದು (ಡಿ) ನೋಡಿನೋಡಿ

5. ಬರವಣಿಗೆಯಲ್ಲಿ ಪಾರಿಭಾಷಿಕ/ಪ್ರಧಾನ/ವಿಶಿಷ್ಟ ಅರ್ಥಕೊಡುವ ಪದಗಳನ್ನು ಬಳಸುವ ಸಂದರ್ಭದಲ್ಲಿ ಉಪಯೋಗಿಸವ ಲೇಖನಚಿಹ್ನೆ

ಎ) ಅಲ್ಪವಿರಾಮ ಬಿ) ಉದ್ಧರಣ

ಸಿ) ಅರ್ಧವಿರಾಮ ಡಿ) ವಾಕ್ಯವೇಷ್ಟನ

6. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ

(ಎ) ನೀನು (ಬಿ) ನಾನು

(ಸಿ) ಅವನು (ಡಿ) ತನ್ನ

7. ಇಂಗ್ಲೀಷಿನಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಶಬ್ದ

(ಎ) ಲಾಕಪ್ (ಬಿ) ಮೊಸರು

(ಸಿ) ಮರ (ಡಿ) ಹೊಲ

8. 'ಮಗು' ಈ ಪದದ ಬಹುವಚನ ರೂಪ

ಎ) ಮಗಳಿಂದ ಬಿ) ಮಗುಗಳು

ಸಿ) ಮಗುವಿಗೆ ಡಿ) ಮಕ್ಕಳು

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. **4 x 1 = 4**

9. ತಿರುಮಲಾಂಬ : ನಂಜನಗೂಡು :: ತಿರುಮಲೆ ರಾಜಮ್ಮ : ------------

10. ಶರೀಫರ ತಂದೆ : ಹಜರತ್ ಇಮಾಂ ಸಾಹೇಬ :: ಕೊಡಗಿನ ಗೌರಮ್ಮನವರ ತಂದೆ : ------------

11. ಅಕ್ಕಿ : ಬಿಳಿದು :: ರಾಗಿ : -------------

12. ನನ್ನ ಮತಿ : ಮುದುಡಿ ಹೋಗುವುದು :: ನನ್ನ ಅಹಂಕಾರ : --------------

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **4 x 1 = 4**

13. ಬೆಳವಡಿಯ ಸರದಾರ ಶಾಂತಯ್ಯ ಶಿವಾಜಿಯ ಬಳಿಗೆ ಯಾವ ವೇಷದಲ್ಲಿ ಹೋದನು?

14. ಬಯಲಿಗೆ ಎಲ್ಲಿಂದ ಹೊರಬರಬೇಕು?

15. ಧರ್ಮಪದನು ವಿಶುವಿನ ಬಳಿಗೆ ಏಕೆ ಬಂದನು?

16. ಧರ್ಮಪದನ ಮತ್ತೊಂದು ಹೆಸರೇನು?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **8 x 2 = 16**

17. ಗೊರೂರರು ಮಿನಿಪೊಲೀಸ್ ನಗರದಲ್ಲಿ ಕಾರು ಇಳಿದ ಸ್ಥಳದಿಂದ ಏಕೆ ತಪ್ಪಿಸಿಕೊಂಡರು?

18. ಶರೀಫರ ಬಾಲ್ಯ ಹಿಂದೂ ಪರಂಪರೆಯೊಂದಿಗೆ ಬೆರೆತುಹೋದ ಬಗೆ ಹೇಗೆ?

19. ಶರೀಫರು ತಮಗಾದ ದು:ಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿ?

20. ಪುಸ್ತಕ ಪ್ರಪಂಚವು ನನ್ನ ಆತ್ಮಚರಿತ್ರೆಯ ಬಹು ಮುಖ್ಯವಾದ ಭಾಗ ಎಂದು ಬೀಚಿಯವರು ಏಕೆ ಹೇಳಿದ್ದಾರೆ? ವಿವರಿಸಿ.

21. ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?

22. ಪುರಂದರದಾಸರು ಡಾಂಭಿಕ ಭಕ್ತನ ವೈರಾಗ್ಯಶಾಲಿ ಪೂಜೆಯನ್ನು ಹೇಗೆ ವರ್ಣಿಸಿದ್ದಾರೆ?

23. ಕವಿ ಸಿ.ಪಿ.ಕೆ ಯವರು ಗ್ರಂಥಾಲಯದಲ್ಲಿ ಭೀತವಿಸ್ಮಿತರಾಗಿ ನಿಂತಿದ್ದು ಏಕೆ?.

24. ಸಾಮರ್ಥ್ಯಗಳ ಕುರಿತಾಗಿ ಪುಲಿಗೆರೆ ಸೋಮನಾಥನ ಅಭಿಪ್ರಾಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**V.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : **2 x 3 = 6**

25 "ಭಾಳ ಭೇಷ್ ಅದರೀ ಪುಸ್ತಕ. ನೀವು ಓದಬೇಕು ಇದನ್ನೊಮ್ಮೆ"

26. "ಇದೇ ಅಂತರಂಗ ಶುದ್ಧಿ."

**VI.** ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **4 x 3 = 12**

27. ರಾಮ್‌ಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ತಿಳಿಸಿರಿ.

28. ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತಳಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

29. ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಮಾನವೀಯ ಮೌಲ್ಯಗಳನ್ನು ಮೆಚ್ಚುವಂಥದ್ದು, ಏಕೆ?

30. ರೈತನು ಮಳೆದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವ ಸನ್ನಿವೇಶವನ್ನು ಕುರಿತು ಬರೆಯಿರಿ.

**VII.** ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : **2 x 3 = 6**

31. ಗೊರೂರು ರಾಮಸ್ವಾಮಿ ಅಯ್ಯಂಗಾರ್

32. ಎಂ. ಗೋಪಾಲಕೃಷ್ಣ ಅಡಿಗ

**VIII.** ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : **1 x 3 = 3**

33. "ಕೈ ಕೆಸರಾದರೆ ಬಾಯಿ ಮೊಸರು"

ಅಥವಾ

"ಹಾಸಿಗೆ ಇದ್ದಷ್ಟು ಕಾಲು ಚಾಚು"

**IX.** ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **1 x 4 = 4**

34. ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ಬರೆಯಿರಿ.

ಅಥವಾ

'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ಸಮರ್ಥಿಸಿರಿ.

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : **1 x 4 = 4**

35.

ಕಂಚು ಗಾರನ ------------------------------------
---------------------------------------------
---------------------------------------------
------------------------------------ ಮಾಡುವುದು

ಅಥವಾ

ನಾನು ----------------------------------------
---------------------------------------------
---------------------------------------------
---------------------------------- ಕಾರ್ಯಗಳೆಲ್ಲವು

**XI.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **4 x 1 = 4**

ಮಕ್ಕಳೆಂದರೆ ವಿಶ್ವೇಶ್ವರಯ್ಯನವರಿಗೆ ಅಕ್ಕರೆ. ಒಮ್ಮೆ ಅವರು ತಮ್ಮ ಹುಟ್ಟೂರಾದ ಮುದ್ದೇನಹಳ್ಳಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು. ಮಕ್ಕಳೆಲ್ಲ ಅವರನ್ನು ಮುತ್ತಿಕೊಂಡರು. ಆಗ ವಿಶ್ವೇಶ್ವರಯ್ಯನವರು ಉಪಾಧ್ಯಾಯರನ್ನು ಕರೆದು ಅವರಿಗೆ ಹಣಕೊಟ್ಟು ಮಕ್ಕಳಿಗೆಲ್ಲ ಸಿಹಿ ತಿಂಡಿ ತಂದುಕೊಡಲು ಹೇಳಿದರು. ಮಕ್ಕಳಿಗೆ ಎರಡು ಹಿತ ನುಡಿಗಳನ್ನು ಹೇಳಬೇಕೆಂದು ಕೇಳಿದಾಗ ಐದು ನಿಮಿಷ ಮಾತನಾಡಿದರು. ಆದರೆ ಅವರಿಗೆ ತೃಪ್ತಿ ಆಗಲಿಲ್ಲ. ಪೂರ್ವ ಸಿದ್ಧತೆ ಮಾಡಿಕೊಂಡು ಇನ್ನೊಮ್ಮೆ ಶಾಲೆಗೆ ಬಂದು ತಾವು ಬರೆದು ತಂದಿದ್ದ ಭಾಷಣವನ್ನು ಓದಿ ಸಮಾಧಾನ ಪಟ್ಟುಕೊಂಡರು. ವಿಶ್ವೇಶ್ವರಯ್ಯನವರು ಸಾರ್ಥಕ ಜೀವನ ನಡೆಸಿ, ನೂರೊಂದು ವರ್ಷಗಳ ಕಾಲ ಬದುಕಿದ್ದರು. ಶಿಸ್ತು, ಸಂಯಮಗಳಿಂದ ವ್ಯಕ್ತಿ ಕೆಲಸ ಮಾಡುವುದರಲ್ಲಿ ಸದಾ ಸುಖವಿದೆ ಎಂಬುದನ್ನು ತಮ್ಮ ಜೀವನದಲ್ಲಿ ಸಾಧಿಸಿತೋರಿಸಿದ ಸರ್.ಎಂ. ವಿಶ್ವೇಶ್ವರಯ್ಯನವರು ಸ್ಫೂರ್ತಿಯ ಆದರ್ಶಜೀವಿಯಾಗಿ ಇವತ್ತಿಗೂ ಅಜರಾಮರರಾಗಿದ್ದಾರೆ.

36. ಪ್ರಶ್ನೆಗಳು :

ಎ. ವಿಶ್ವೇಶ್ವರಯ್ಯನವರು ಎಲ್ಲಿಗೆ ಭೇಟಿ ನೀಡಿದರು?

ಬಿ. ವಿಶ್ವೇಶ್ವರಯ್ಯನವರು ಹಣವನ್ನು ಉಪಾಧ್ಯಾಯರಿಗೆ ಏಕೆ ಕೊಟ್ಟರು?

ಸಿ. ಸ್ಫೂರ್ತಿಯ ಆದರ್ಶಜೀವಿಯಾಗಿ ವಿಶ್ವೇಶ್ವರಯ್ಯನವರು ಹೇಗೆ ಬದುಕಿದರು?

ಡಿ. ವಿಶ್ವೇಶ್ವರಯ್ಯನವರು ಯಾವಾಗ ಸಮಾಧಾನ ಪಟ್ಟುಕೊಂಡರು?

**XII.** ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : **4 x 1 = 4**

37. ರಾಷ್ಟ್ರೀಯ ಹಬ್ಬಗಳು

ಅಥವಾ

ಸ್ವಚ್ಛಭಾರತ ಅಭಿಯಾನ

**XIII.** ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **5 x 1 = 5**

38. ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸಮರ್ಥ್ ಎಂದು ಭಾವಿಸಿಕೊಂಡು, ವರ್ಗಾವಣೆಪತ್ರವನ್ನು ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ದಾಂಡೇಲಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ರೋಹಿತ್ ಎಂದು ಭಾವಿಸಿಕೊಂಡು, ಪೋಷಕರ ಸಭೆಗೆ ಆಹ್ವಾನಿಸಿ ಹುಬ್ಬಳ್ಳಿಯಲ್ಲಿ ವಾಸವಾಗಿರುವ ಸುಜಾತ ಎಂಬ ಹೆಸರಿನ ನಿಮ್ಮ ತಾಯಿಗೆ ಒಂದು ಪತ್ರವನ್ನು ಬರೆಯಿರಿ.

********************

**2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 1**

**Academic Year 2023-24 Bengaluru North Dist. SSLC Practice Paper – 1**

**62K – ತೃತೀಯ ಭಾಷೆ – ಕನ್ನಡ**

ಸಮಯ : 3:00 ಗಂಟೆ | Time : 3:00 Hrs

ಗರಿಷ್ಠ ಅಂಕಗಳು : 80 | Max. Marks : 80

ಒಟ್ಟು ಪ್ರಶ್ನೆಗಳು : 38 | Total No of Questions : 38

## ಮಾದರಿ ಉತ್ತರಗಳು

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 8 x 1 = 8 |
| 1. | ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳ ಸಂಖ್ಯೆ<br>(ಎ) 50 (ಬಿ) 48<br>(ಸಿ) 49 (ಡಿ) 47<br>ಉತ್ತರ : (ಸಿ) 49 | |
| 2. | 'ಆಡಂಬರ' ಈ ಪದದ ವಿರುದ್ಧಾರ್ಥಕ ಪದ<br>(ಎ) ನಿರಾಡಂಬರ (ಬಿ) ಅಂಬರ<br>(ಸಿ) ವಿಡಂಬನೆ (ಡಿ) ಡಂಬರ<br>ಉತ್ತರ : (ಎ) ನಿರಾಡಂಬರ | |
| 3. | ಕೆಳಗಿನವುಗಳಲ್ಲಿ ಗುಣಸಂಧಿಗೆ ಉದಾಹರಣೆ<br>(ಎ) ಭಾಷ್ಪಾಂಜಲಿ (ಬಿ) ತಿಮಿರದಾಳ<br>(ಸಿ) ವಿದ್ಯಾಭ್ಯಾಸ (ಡಿ) ಹರಿಜನೋದ್ಧಾರ<br>ಉತ್ತರ : (ಡಿ) ಹರಿಜನೋದ್ಧಾರ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 4. | ಕೆಳಗಿನವುಗಳಲ್ಲಿ ಜೋಡುನುಡಿಗೆ ಉದಾಹರಣೆಯಾದ ಪದ<br><br>(ಎ) ಬೇಗಬೇಗ (ಬಿ) ಕಪ್ಪಕಾಣಿಕೆ<br>(ಸಿ) ಹೌದುಹೌದು (ಡಿ) ನೋಡಿನೋಡಿ<br><br>ಉತ್ತರ : (ಬಿ) ಕಪ್ಪಕಾಣಿಕೆ | |
| 5. | ಬರವಣಿಗೆಯಲ್ಲಿ ಪಾರಿಭಾಷಿಕ/ಪ್ರಧಾನ/ವಿಶಿಷ್ಟ ಅರ್ಥಕೊಡುವ ಪದಗಳನ್ನು ಬಳಸುವ ಸಂದರ್ಭದಲ್ಲಿ ಉಪಯೋಗಿಸವ ಲೇಖನಚಿಹ್ನೆ<br><br>ಎ) ಅಲ್ಪವಿರಾಮ ಬಿ) ಉದ್ಧರಣ<br>ಸಿ) ಅರ್ಧವಿರಾಮ ಡಿ) ವಾಕ್ಯವೇಷ್ಟನ<br><br>ಉತ್ತರ : ಡಿ) ವಾಕ್ಯವೇಷ್ಟನ | |
| 6. | ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆ<br><br>(ಎ) ನೀನು (ಬಿ) ನಾನು<br>(ಸಿ) ಅವನು (ಡಿ) ತನ್ನ<br><br>ಉತ್ತರ : (ಡಿ) ತನ್ನ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 7. | ಇಂಗ್ಲೀಷಿನಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಶಬ್ದ<br>(ಎ) ಲಾಕಪ್ (ಬಿ) ಮೊಸರು<br>(ಸಿ) ಮರ (ಡಿ) ಹೊಲ<br>ಉತ್ತರ : (ಎ) ಲಾಕಪ್ | |
| 8. | ‘ಮಗು’ ಈ ಪದದ ಬಹುವಚನ ರೂಪ<br>(ಎ) ಮಗಳಿಂದ (ಬಿ) ಮಗುಗಳು<br>(ಸಿ) ಮಗುವಿಗೆ (ಡಿ) ಮಕ್ಕಳು<br>ಉತ್ತರ : (ಡಿ) ಮಕ್ಕಳು | |
| II. | ಸಂಬಂಧೀ ಪದ ಬರೆಯುವುದು ( ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 4 x 1 = 4 |
| 9. | ತಿರುಮಲಾಂಬ : ನಂಜನಗೂಡು :: ತಿರುಮಲೆ ರಾಜಮ್ಮ : ____________<br>ಉತ್ತರ : ಬೆಂಗಳೂರು | |
| 10. | ಶರೀಫರ ತಂದೆ : ಹಜರತ್ ಇಮಾಂ ಸಾಹೇಬ :: ಕೊಡಗಿನ ಗೌರಮ್ಮನವರ ತಂದೆ : ____________<br>ಉತ್ತರ : ಎನ್. ಎಸ್. ರಾಮಯ್ಯ | |
| 11. | ಅಕ್ಕಿ : ಬಿಳಿದು :: ರಾಗಿ : ____________<br>ಉತ್ತರ : ಕರಿದು | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 12. | ನನ್ನ ಮತಿ : ಮುದುಡಿ ಹೋಗುವುದು :: ನನ್ನ ಅಹಂಕಾರ : ________________<br>ಉತ್ತರ : ನುಚ್ಚು ನೂರಾಗುವುದು | |
| III. | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ.<br>( ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 4 x 1 = 4 |
| 13. | ಬೆಳವಡಿಯ ಮಲ್ಲಮ್ಮಾಜಿಯ ಸರದಾರ ಶಾಂತಯ್ಯ ಶಿವಾಜಿಯ ಬಳಿಗೆ ಯಾವ ವೇಷದಲ್ಲಿ ಹೋದನು?<br>ಉತ್ತರ : ಬೆಳವಡಿಯ ಮಲ್ಲಮ್ಮಾಜಿಯ ಸರದಾರ ಶಾಂತಯ್ಯ ಶಿವಾಜಿಯ ಬಳಿಗೆ ಸಂನ್ಯಾಸಿ ವೇಷದಲ್ಲಿ ಹೋದನು. | |
| 14. | ಬಯಲಿಗೆ ಎಲ್ಲಿಂದ ಹೊರಬರಬೇಕು?<br>ಉತ್ತರ : ಬಯಲಿಗೆ ಜಾತಿಮತಗಳ ಗುಹೆಗಳಿಂದ ಹೊರಬರಬೇಕು. | |
| 15. | ಧರ್ಮಪದನು ವಿಶುವಿನ ಬಳಿಗೆ ಏಕೆ ಬಂದನು?<br>ಉತ್ತರ : ಧರ್ಮಪದನು ವಿಶುವಿನ ಬಳಿಗೆ ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂರಿಸಲು ಹೋದನು. | |
| 16. | ಧರ್ಮಪದನ ಮತ್ತೊಂದು ಹೆಸರೇನು?<br>ಉತ್ತರ : ಧರ್ಮಪದನ ಮತ್ತೊಂದು ಹೆಸರು ಮುಕುಂದ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.<br><br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | 8 x 2 = 16 |
| 17. | ಗೊರೂರರು ಮಿನಿಪೊಲೀಸ್ ನಗರದಲ್ಲಿ ಕಾರು ಇಳಿದ ಸ್ಥಳದಿಂದ ಏಕೆ ತಪ್ಪಿಸಿಕೊಂಡರು?<br><br>ಉತ್ತರ : ಗೊರೂರರು ದೀಪ ಹೊತ್ತಿದ ಮೇಲೆ ಮಿನಿಪೊಲೀಸ್ ನಗರದಲ್ಲಿ ತಮಗೆ ಅರಿವಿಲ್ಲದಂತೆ ಅಲ್ಲಲ್ಲಿ ಸುತ್ತುತ್ತಿದ್ದರು. ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರ ಇವುಗಳನ್ನೆಲ್ಲಾ ನೋಡುತ್ತಾ ಗೊತ್ತು ಮಾಡಿಕೊಂಡಿದ್ದ ಸ್ಥಳದಿಂದ ಆಚೆ ಈಚೆ ಬಂದು ಬಿಟ್ಟರು. ಏನು ಮಾಡಿದರೂ ಆ ಸ್ಥಳ ಸಿಗಲೇ ಇಲ್ಲ, ಹಾಗಾಗಿ ಗೊರೂರರು ಕಾರು ಇಳಿದ ಸ್ಥಳದಿಂದ ತಪ್ಪಿಸಿಕೊಂಡರು. | |
| 18. | ಶರೀಫರ ಬಾಲ್ಯ ಹಿಂದೂ ಪರಂಪರೆಯೊಂದಿಗೆ ಬೆರೆತುಹೋದ ಬಗೆ ಹೇಗೆ?<br><br>ಉತ್ತರ: ಶರೀಫರಿಗೆ ಬಾಲ್ಯದಿಂದಲೇ ರಾಮಾಯಣ, ಮಹಾಭಾರತಗಳ ಬಗ್ಗೆ ತುಂಬಾ ಪ್ರೀತಿ. ರಾಮಾಯಣ, ಮಹಾಭಾರತ, ಅಲ್ಲಮಪ್ರಭು ಬಯಲಾಟಗಳಲ್ಲಿ ಅಭಿನಯಿಸುತ್ತಿದ್ದರು. ಜಾತ್ರೆ, ಉತ್ಸವಗಳಲ್ಲಿ ಸರ್ವಜ್ಞ, ನಿಜಗುಣಯೋಗಿ, ಸರ್ಪಭೂಷಣ ಶಿವಯೋಗಿ ಮೊದಲಾದವರ ಕಾವ್ಯವಾಚನ ಮಾಡುತ್ತಿದ್ದರು. ಈ ರೀತಿ ಶರೀಫರ ಬಾಲ್ಯ ಹಿಂದು ಪರಂಪರೆಯೊಂದಿಗೆ ಬೆರೆತು ಹೋಗಿತ್ತು. | |
| 19. | ಶರೀಫರು ತಮಗಾದ ದು:ಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿ?<br><br>ಉತ್ತರ: ಶರೀಫರು ದು:ಖವನ್ನು ಮರೆಯಲು ಸಾಧು ಸತ್ಪುರುಷರ ಸಹವಾಸವನ್ನು ಮಾಡಿದರು. ದೇವರ ಧ್ಯಾನ–ಪೂಜೆಗಳಿಂದ ತಮ್ಮ ಹೃದಯಕ್ಕಾದ ಪೆಟ್ಟನ್ನು ಮರೆತರು. ಅಧ್ಯಾತ್ಮ–ಸುಬೋಧ, ಧರ್ಮ–ನೀತಿ ಮಾತುಗಳನ್ನು ಬೋಧಿಸುವ ಮೂಲಕ ತಮಗಾದ ದು:ಖವನ್ನು ಕಡಿಮೆಮಾಡಿಕೊಂಡರು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **20.** | ಪುಸ್ತಕ ಪ್ರಪಂಚವು ನನ್ನ ಆತ್ಮಚರಿತ್ರೆಯ ಬಹು ಮುಖ್ಯವಾದ ಭಾಗ ಎಂದು ಬೀಚಿಯವರು ಏಕೆ ಹೇಳಿದ್ದಾರೆ? ವಿವರಿಸಿ.<br><br>ಉತ್ತರ : ಪುಸ್ತಕ ಪ್ರಪಂಚವಿಲ್ಲದ ಬೀಚಿಯವರ ಪ್ರಪಂಚ ಬರಡು. ಸಹರಾ ಮರುಭೂಮಿಯಂತೆ. ಪುಸ್ತಕವಿಲ್ಲದ ಬೀಚಿ ಜೀವವಿಲ್ಲದ ದೇಹವಿದ್ದಂತೆ. ರೆಡಿಮೇಡ್ ಅಂಗಡಿಯ ಮುಂದೆ ಕುಳಿತಿರುವ ಚೆಂದದ ಬೊಂಬೆಯಂತೆ. ಪುಸ್ತಕವೇ ಜೀವಾಳವಾಗಿರುವ ಬೀಚಿಯವರಿಗೆ ಪುಸ್ತಕ ಪ್ರಪಂಚ ಅವರ ಆತ್ಮಚರಿತ್ರೆಯ ಮುಖ್ಯ ಭಾಗವಾಗಿದೆ. | |
| **21.** | ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?<br><br>ಉತ್ತರ : ಆಂಗ್ಲರು ಬಿಳಿಯ ಬಣ್ಣದವರು. ಆಫ್ರಿಕನ್ನರು ಕಪ್ಪು ಬಣ್ಣದವರು. ದೇಹದ ಬಣ್ಣ ಬೇರೆ ಬೇರೆ ಆದರೂ ಅವರಲ್ಲಿ ಹರಿಯುವ ರಕ್ತದ ಬಣ್ಣ ಕೆಂಪು ಬಣ್ಣವೇ ಆಗಿದೆ. ಅಕ್ಕಿ ರಾಗಿಗಳ ಬಣ್ಣ ಬೇರೆ ಬೇರೆ ಆದರೂ ಅವುಗಳ ಹುಲ್ಲು ಬಣ್ಣ ಹಸಿರು ಬಣ್ಣವೇ ಆಗಿದೆ. ಈ ರೀತಿ ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ ಭೂಮಿತಾಯ ಕುಡಿಗಳು ಕವನದಲ್ಲಿ ವ್ಯಕ್ತವಾಗಿದೆ. | |
| **22.** | ಪುರಂದರದಾಸರು ಡಾಂಭಿಕ ಭಕ್ತನ ವೈರಾಗ್ಯಶಾಲಿ ಪೂಜೆಯನ್ನು ಹೇಗೆ ವರ್ಣಿಸಿದ್ದಾರೆ?<br><br>ಉತ್ತರ : ಡಾಂಭಿಕ ಭಕ್ತನು ಕರದಲಿ ಜಪಮಣಿ ಹಿಡಿದು ಬಾಯಲಿ ಮಂತ್ರವನ್ನು ಹೇಳುತ್ತಿರುತ್ತಾನೆ. ಅರಿವೆಯ ಮುಸುಕನ್ನು ಮುಖಕ್ಕೆ ಹಾಕಿರುತ್ತಾನೆ. ಪರಸತಿಯರ ಗುಣವನ್ನು ಮನದಲಿ ಸ್ಮರಿಸುತ್ತಾ ವಂಚನೆಯಿಂದ ಪೂಜೆ ಮಾಡುತ್ತಿರುತ್ತಾನೆ. ಈ ರೀತಿ ಪುರಂದರದಾಸರು ಡಾಂಭಿಕ ಭಕ್ತನ ಪರಮ ವೈರಾಗ್ಯಶಾಲಿ ಪೂಜೆಯನ್ನು ವರ್ಣಿಸಿದ್ದಾರೆ. | |
| **23.** | ಕವಿ ಸಿ.ಪಿ.ಕೆ ಯವರು ಗ್ರಂಥಾಲಯದಲ್ಲಿ ಭೀತವಿಸ್ಮಿತರಾಗಿ ನಿಂತಿದ್ದು ಏಕೆ?.<br><br>ಉತ್ತರ : ಕವಿ ಗ್ರಂಥಾಲಯದಲ್ಲಿ ಬೆಟ್ಟದ ಸಾಲುಗಳಂತೆ ಜೋಡಿಸಿಟ್ಟ ಗ್ರಂಥಗಳ ಸಾಲುಗಳನ್ನು ನೋಡಿ ಬೆರಗಾಗಿ ನಿಂತು ಬಿಟ್ಟರು. ಅಲ್ಲಿರುವ ಅಪಾರವಾದ ಗ್ರಂಥರಾಶಿಗಳ ಮುಂದೆ ಅವರ ಬುದ್ಧಿ ಮುದುಡಿಹೋಗಿ ಅಹಂಕಾರ ನುಚ್ಚುನೂರಾಗುತ್ತದೆ. ಪ್ರಾಚೀನ ಕವಿಗಳ, ಮಹಾತ್ಮರ, ಸಾಧಕರ ಪಳೆಯುಳಿಕೆಯಂತಿರುವ ಗ್ರಂಥಗಳ ಮೂಲವನ್ನು ಹುಡುಕುವ ಪ್ರಯತ್ನ ಮಾಡುತ್ತಾರೆ. ಆಗ ಕುರುಕ್ಷೇತ್ರದಲ್ಲಿ ಅರ್ಜುನನಿಗೆ ಶ್ರೀಕೃಷ್ಣನು ವಿಶ್ವರೂಪವನ್ನು ತೋರಿಸಿದ ಹಾಗೆ ತತ್ತರಿಸಿ, ಭೀತವಿಸ್ಮಿತರಾಗಿ ನಿಲ್ಲುತ್ತಾರೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಸಾಮರ್ಥ್ಯಗಳ ಕುರಿತಾಗಿ ಪುಲಿಗೆರೆ ಸೋಮನಾಥನ ಅಭಿಪ್ರಾಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br><br>ಉತ್ತರ : ಯುದ್ಧ ಮಾಡಲು ಬಲ್ಲವನೇ ಭಟನಾಗಬೇಕು. ನಾನಾ ವಿಧದ ಚಮತ್ಕಾರಗಳನ್ನು ತಿಳಿದವನೇ ಮಂತ್ರಿಯಾಗಬೇಕು. ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವವನೇ ದೊರೆಯಾಗಬೇಕು. ಕಾಮ ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಗೆಲ್ಲುವ ಸಾಮರ್ಥ್ಯವುಳ್ಳವನೇ ಯೋಗಿಯಾಗಬೇಕು. ತನ್ನ ಕೈಯಿಂದ ದಂಡ ತೆರುವ ಸಮಾರ್ಥ್ಯವಿರುವವನು ಮಾತ್ರ ಮತ್ತೊಬ್ಬರು ಮಾಡುವ ಸಾಲಕ್ಕೆ ಹೊಣೆಯಾಗಬೇಕೆಂದು ಪುಲಿಗೆರೆ ಸೋಮನಾಥನು ಹೇಳಿದ್ದಾನೆ. | |
| V. | ಸಂದರ್ಭಸಹಿತ ವಿವರಣೆ : | 2 x 3 = 6 |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು – ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ಭಾಳ ಭೇಷ್ ಅದರೀ ಪುಸ್ತಕ. ನೀವು ಓದಬೇಕು ಇದನ್ನೊಮ್ಮೆ"<br>ಉತ್ತರ :<br><br>ಆಯ್ಕೆ : ಈ ವಾಕ್ಯವನ್ನು ಬೀಚಿಯವರು ಬರೆದಿರುವ 'ನನ್ನ ಪುಸ್ತಕ ಪ್ರಪಂಚ' ಪಾಠದಿಂದ ಆರಿಸಲಾಗಿದೆ.<br><br>ಸಂದರ್ಭ : ಈ ಮಾತನ್ನು ಬೀಚಿಯವರ ಹೆಂಡತಿಯು ಬೀಚಿಯವರಿಗೆ ಹೇಳಿದ್ದಾರೆ. ಬೀಚಿಯವರ ಹೆಂಡತಿಯು ಸಂಧ್ಯಾರಾಗ ಪುಸ್ತಕವನ್ನು ಓದಿ ತಮ್ಮ ಅಭಿಪ್ರಾಯವನ್ನು ಬೀಚಿಯವರಿಗೆ ತಿಳಿಸುವಾಗ ಈ ಮಾತು ಬಂದಿದೆ.<br><br>ಸ್ವಾರಸ್ಯ: ಸಂಧ್ಯಾರಾಗ ಪುಸ್ತಕವು ಬೀಚಿಯವರ ಹೆಂಡತಿಯ ಮೇಲೆ ಬೀರಿದ ಪ್ರಭಾವವನ್ನು ಕಾಣಬಹುದು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | "ಇದೇ ಅಂತರಂಗ ಶುದ್ಧಿ."<br>ಉತ್ತರ :<br><br>ಆಯ್ಕೆ : ಈ ವಾಕ್ಯವನ್ನು ಬಸವಣ್ಣನವರು ಬರೆದಿರುವ 'ಬಸವಣ್ಣನವರ ವಚನಗಳು' ಪದ್ಯಭಾಗದಿಂದ ಆರಿಸಲಾಗಿದೆ.<br><br>ಸಂದರ್ಭ : ಈ ಮಾತನ್ನು ಬಸವಣ್ಣನವರು ಹೇಳಿದ್ದಾರೆ. ಅಂತರಂಗ, ಬಹಿರಂಗ ಹಾಗೂ ನಡೆ ನುಡಿಗಳ ಶುದ್ಧತೆಯನ್ನು ಕುರಿತು ಬಸವಣ್ಣನವರು ತಿಳಿಸುವಾಗ ಈ ಮಾತು ಬಂದಿದೆ.<br><br>ಸ್ವಾರಸ್ಯ : ಆತ್ಮಶುದ್ಧಿಯ ಸರಳ ಮಾರ್ಗಗಳನ್ನು ಕಾಣಬಹುದು. | |
| VI. | ಐದು – ಆರು ವಾಕ್ಯಗಳಲ್ಲಿ ಉತ್ತರಿಸುವುದು : | 4 x 3 =12 |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ರಾಮ್‌ಸಿಂಗ್ ಕುಟುಂಬದವರ ದೇಶಪ್ರೇಮ ಮತ್ತು ತ್ಯಾಗವನ್ನು ತಿಳಿಸಿರಿ.<br><br>ಉತ್ತರ : ರಾಮಸಿಂಗನು ಮೋಹನಪುರದ ಉತ್ಸಾಹಿ ತರುಣ. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ಸರ್ವಸಿದ್ಧತೆ ನಡೆಸಿದ್ದಾನೆ. ಆ ದಿನದ ಬೆಳಗಿನ ಮೆರವಣಿಗೆಯನ್ನು ಮುನ್ನಡೆಸುವ ಅವಕಾಶ ಅವನಿಗೆ ಒದಗಿ ಬಂದಿದೆ. ತುಳಜಾಬಾಯಿ ಒಂದು ವರ್ಷದ ಹಿಂದಷ್ಟೆ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನ ಗಂಡನನ್ನು ಕಳೆದುಕೊಂಡಿದ್ದಳು. ಈಗ ಮಗನು ಬಲಿಯಾಗುವ ಸಾಧ್ಯತೆ ಇದ್ದರೂ ಧೈರ್ಯ ತಂದುಕೊಂಡು ಆಶೀರ್ವದಿಸಿ ಮೋಹನಪುರದ ಹೋರಾಟಕ್ಕೆ ಶುಭಕೋರಿ ಕಳುಹಿಸಿಕೊಟ್ಟಿದ್ದಾಳೆ. ರಾಮಸಿಂಗನು ಕುಲಕರ್ಣಿಯ ಗುಂಡಿಗೆ ಬಲಿಯಾದಾಗ ಇನ್ನೊಂದು ಧ್ವಜವನ್ನು ನೀಡಲು ಮುಂದಾಗುತ್ತಾಳೆ. ಕುಲಕರ್ಣಿಯು ಧ್ವಜವನ್ನು ಕೆಳಗಿಡಲು ಸೂಚಿಸಿದಾಗ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೇ ಬಲಿಕೊಟ್ಟಿರುವೆ. ನನ್ನ ಪ್ರಾಣವನ್ನು ಬಿಡಲು ಸಿದ್ಧಳಿದ್ದೇನೆ. ಈ ಧ್ವಜವನ್ನು ಕೆಳಗಿಡಲಾರೆ ಎಂದು ಹೇಳುತ್ತಾ ಧ್ವಜವನ್ನು ಎತ್ತಿ ಹಿಡಿಯುವಳು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತಳಾದ ಬಗೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br><br>ಉತ್ತರ : ಪೋರ್ಚುಗೀಸರು ಭಾರಿ ನೌಕೆಯಲ್ಲಿ ಬಲಾಢ್ಯ ಪಡೆಯೊಂದಿಗೆ ಉಲ್ಲಾಳದ ಕರಾವಳಿಯಲ್ಲಿ ಲಂಗರು ಹಾಕಿದ್ದರು. ಅಬ್ಬಕ್ಕದೇವಿಯು ಮೊಗೇರು ಮೀನುಗಾರ ಸಾಹಸಿ ಸೈನಿಕರು ಗಾಢ ರಾತ್ರಿಯಲ್ಲಿ ಸದ್ದುಗದ್ದಲವಿಲ್ಲದೆ ನೂರಾರು ಸಣ್ಣ ದೋಣಿಗಳಲ್ಲಿ ಹೋದರು. ಸಾವಿರಾರು ತೆಂಗಿನಗರಿಯ ಉರಿಯುವ ದೀವಟಿಗೆಗಳನ್ನು ಏಕಕಾಲಕ್ಕೆ ನೌಕೆಯ ಮೇಲೆ ಎಸೆದರು. ಧಗಧಗನೆ ಉರಿಯುವ ನೌಕೆಯಿಂದ ದಿಕ್ಕೆಟ್ಟ ಸೈನಿಕರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರಿದರು. ಅದೇ ಸಮಯಕ್ಕಾಗಿ ಕಾಯುತ್ತಿದ್ದ ಅಬ್ಬಕ್ಕದೇವಿಯ ಸೈನಿಕರ ಖಡ್ಗ ಮತ್ತು ಈಟಿಗಳಿಗೆ ಬಲಿಯಾದರು. ಪೋರ್ಚುಗೀಸರ ಸೇನಾಪತಿಗಳಾದ ಮಿರಾಂಡಾ ಮತ್ತು ಡಿ ಮೆಲ್ಲೊ ಓಡಿ ಹೋದರು. ಈ ರೀತಿ ರಾಣಿ ಅಬ್ಬಕ್ಕದೇವಿ ತನ್ನ ಪರಾಕ್ರಮದಿಂದ ಪೋರ್ಚುಗೀಸರ ವಿರುದ್ಧ ಹೋರಾಡಿ ಸಪ್ತ ಸಮುದ್ರದಾಚೆ ವಿಖ್ಯಾತಳಾದಳು. | |
| 29. | ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಮಾನವೀಯ ಮೌಲ್ಯಗಳನ್ನು ಮೆಚ್ಚುವಂಥದ್ದು, ಏಕೆ?<br><br>ಉತ್ತರ : ಕಳ್ಳತನ, ಕೊಲೆಯನ್ನು ಮಾಡಬಾರದು. ಸುಳ್ಳನ್ನು ಹೇಳಬಾರದು, ಯಾರ ಮೇಲೂ ಕೋಪಿಸಿಕೊಳ್ಳಬಾರದು. ಇತರರ ಬಗ್ಗೆ ಅಸಹ್ಯಪಡಬಾರದು. ತನ್ನನ್ನು ಬಣ್ಣಿಸಿಕೊಳ್ಳಬಾರದು, ಬೇರೆಯವರನ್ನು ನಿಂದಿಸಬಾರದು. ಸತ್ಯವನ್ನು ನುಡಿಯುವುದೇ ದೇವಲೋಕ, ಮಿಥ್ಯವನ್ನು ನುಡಿಯುವುದೇ ಮರ್ತ್ಯಲೋಕ ಎಂಬುದನ್ನು ಅರಿತು ನಡೆಯಬೇಕು. ಆಚಾರವೇ ಸ್ವರ್ಗ, ಅನಾಚಾರವೇ ನರಕವೆಂದು ತಿಳಿದು ನಮ್ಮ ಅಂತರಂಗ, ಬಹಿರಂಗ, ನಡೆ, ನುಡಿಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಈ ರೀತಿಯ ಮಾನವೀಯ ಮೌಲ್ಯಗಳಿಂದ ಆತ್ಮಶುದ್ಧಿಯಿಂದ ಕೂಡಿದ ಉತ್ತಮ ಸಮಾಜ ನಿರ್ಮಾಣವಾಗಲು ಸಾಧ್ಯವಾಗುತ್ತದೆ. ಹಾಗಾಗಿ ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ಮಾನವೀಯ ಮೌಲ್ಯಗಳನ್ನು ಮೆಚ್ಚಬಹುದಾಗಿದೆ. | |
| 30. | ರೈತನು ಮಳೆದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವ ಸನ್ನಿವೇಶವನ್ನು ಕುರಿತು ಬರೆಯಿರಿ.<br><br>ಉತ್ತರ : ಮಳೆ ಇಲ್ಲದೆ ಈ ಭೂಮಿ ಬರಡಾಗಿದೆ. ಮೇವು ನೀರಿಲ್ಲದ ದನಕರುಗಳು ಸೊರಗಿ ಹೋಗಿವೆ. ಅಪ್ಪ ಮಳೆರಾಯ ನೀ ಬಂದು ಕರುಣಿಸೋ ಎಂದು ಪ್ರಾರ್ಥಿಸುತ್ತಾನೆ. ಪೂರ್ವ ದಿಕ್ಕಿನ ಮಳೆಯ ಮೋಡದ ಚಂದ ಗೋಡೆಗೆ ಕಪ್ಪು ಬಣ್ಣ ಬಳಿದಂತೆ ಕಂಡು ಬಂದಿದೆ. ಆಕಾಶದಿಂದ ಇಳಿದು ಬರುವ ಮಳೆಹನಿಗಳ ಸದ್ದು ರೈತನಿಗೆ ಸಂತಸವನ್ನು ತಂದಿದೆ. ಪೂರ್ವ ದಿಕ್ಕಿನಿಂದ ಬರುವ ಸೋನೆಮಳೆ ಭೈರವ ಬೆಟ್ಟದ ಮೇಲೆ ಹೆಚ್ಚಾಗಿ ಸುರಿದು ಬರಬೇಕು. ಸ್ವಾತಿಮಳೆ ಸುರಿದು ಸಾವಿರಾರು ಕೆರೆಗಳು ತುಂಬಿತುಳಕಬೇಕು. ಆಗ ಕುಣಿಗಲು ಕೆರೆಯಲ್ಲಿ ಕುಚ್ಚಲು ಮೀನುಗಳ ಸಂತತಿ ಹೆಚ್ಚಾಗಿ ಲಾಭ ಬರುವಂತಾಗಲಿ ಎಂದು ರೈತನು ಮಳೆದೇವರನ್ನು ಪ್ರಾರ್ಥಿಸುತ್ತಾನೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VII. | ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು : | 2 x 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | ಗೊರೂರು ರಾಮಸ್ವಾಮಿ ಅಯ್ಯಂಗಾರ್<br><br>ಉತ್ತರ : ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು 1904 ರಂದು ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ನಮ್ಮ ಊರಿನ ರಸಿಕರು, ಹೇಮಾವತಿ, ಮೆರವಣಿಗೆ, ಅಮೆರಿಕಾದಲ್ಲಿ ಗೊರೂರು, ಹಳ್ಳಿಯ ಹಾಡು, ಗರುಡಗಂಬದ ದಾಸಯ್ಯ, ಬೂತಯ್ಯನ ಮಗ ಅಯ್ಯು ಇತ್ಯಾದಿ ಇವರು ಬರೆದ ಕೃತಿಗಳು. | |
| 32. | ಎಂ. ಗೋಪಾಲಕೃಷ್ಣ ಅಡಿಗ<br><br>ಉತ್ತರ : ಎಂ. ಗೋಪಾಲಕೃಷ್ಣ ಅಡಿಗ ಅವರು 1918 ರಂದು ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿಯಲ್ಲಿ ಜನಿಸಿದರು. ಭಾವತರಂಗ, ಚಂಡೆ ಮದ್ದಳೆ, ಕಟ್ಟುವೆವು ನಾವು, ಚಿಂತಾಮಣಿಯಲ್ಲಿ ಕಂಡ ಮುಖ, ಭೂಮಿಗೀತ, ವರ್ಧಮಾನ, ಇದನ್ನು ಬಯಸಿರಲಿಲ್ಲ, ಮೂಲಕ ಮಹಾಶಯರು, ಬತ್ತಲಾರದ ಗಂಗೆ, ಸುವರ್ಣ ಪುತ್ಥಳಿ ಇತ್ಯಾದಿ ಇವರು ಬರೆದ ಕೃತಿಗಳು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ) | 1 x 3 = 3 |
| 33. | "ಕೈ ಕೆಸರಾದರೆ ಬಾಯಿ ಮೊಸರು"<br>ಅಥವಾ<br>"ಹಾಸಿಗೆ ಇದ್ದಷ್ಟು ಕಾಲು ಚಾಚು" | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| | ಉತ್ತರ : "ಕೈ ಕೆಸರಾದರೆ ಬಾಯಿ ಮೊಸರು"<br><br>ಗಾದೆಯ ಮಹತ್ವ : ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br><br>ಅರ್ಥ ಮತ್ತು ವಿವರಣೆ : 'ಕೈ ಕೆಸರಾದರೆ ಬಾಯಿ ಮೊಸರು' ಇದೊಂದು ಜನಪ್ರಿಯ ಗಾದೆಮಾತಾಗಿದೆ. ಕೈ ಕೆಸರಾದರೆ ಬಾಯಿ ಮೊಸರು ಅಂದರೆ ಕಷ್ಟಪಟ್ಟು ದುಡಿದರೆ ಸುಖ ಉಂಟು ಎಂದರ್ಥ. ಕೈ ಕೆಸರಾಗುವುದು ದುಡಿಮೆಯನ್ನು ಸಂಕೇತಿಸಿದರೆ, ಮೊಸರು ಎಂಬುದು ಅದರ ಪ್ರತಿಫಲವನ್ನು ಬಿಂಬಿಸುತ್ತದೆ. ಸೋಮಾರಿಯಾಗಿ ಸುಮ್ಮನೆ ಕುಳಿತಿರಬಾರದು. ಯಾವುದಾದರೂ ಒಂದು ಕೆಲಸ ಮಾಡುವುದರಿಂದ ಹೊಟ್ಟೆ ತುಂಬುತ್ತದೆ. ಕೈಕೆಸರಾಗುತ್ತದೆಂದು ಯೋಚಿಸುತ್ತಾ ಕುಳಿತರೆ ಯಾವ ಕೆಲಸವನ್ನು ಮಾಡಲು ಸಾಧ್ಯವಾಗುವುದಿಲ್ಲ. ಕೆಲಸ ಮಾಡದಿದ್ದರೆ ಹಣ ಸಂಪಾದನೆಯಾಗುವುದಿಲ್ಲ. ಹೊಟ್ಟೆ ತುಂಬುವುದಿಲ್ಲ. ಜೀವನ ಆನಂದವಾಗಿರಬೇಕಾದರೆ ಕೈ ತುಂಬಾ ಸಂಪಾದಿಸಲೇ ಬೇಕು. ಆಗ ನಮಗೆ ಊಟ, ಆಹಾರ ಎಲ್ಲವೂ ಸಿಗುತ್ತದೆ. ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತು ಮೇಲಿನ ಗಾದೆಯನ್ನು ನೆನಪಿಸುತ್ತದೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅಥವಾ<br>ಉತ್ತರ : "ಹಾಸಿಗೆ ಇದ್ದಷ್ಟು ಕಾಲು ಚಾಚು"<br><br>ಗಾದೆಯ ಮಹತ್ವ : ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br><br>ಅರ್ಥ ಮತ್ತು ವಿವರಣೆ : 'ಹಾಸಿಗೆ ಇದ್ದಷ್ಟು ಕಾಲು ಚಾಚು' ತೃಪ್ತಿ ಮನುಷ್ಯನ ಜೀವನದಲ್ಲಿ ಸಂತೋಷವನ್ನು ನೀಡಬಲ್ಲದು. ಅತೃಪ್ತಿ ದು:ಖವನ್ನು ನೀಡಬಲ್ಲದು ಎಂಬುದನ್ನು ಈ ಗಾದೆ ಸೂಚ್ಯವಾಗಿ ತಿಳಿಸುತ್ತದೆ. ಹಾಸಿಗೆ ಇಲ್ಲಿ ಅವಶ್ಯಕತೆಗಳ ಪೂರೈಕೆಯನ್ನು ಸೂಚಿಸಿದರೆ, ಕಾಲು ಚಾಚುವ ಪ್ರಕ್ರಿಯೆ ತೃಪ್ತ ಜೀವನವನ್ನು ಸೂಚಿಸುತ್ತದೆ. ನಾವು ಹಾಸಿಗೆ ಮೀರಿ ಕಾಲು ಚಾಚಿದಲ್ಲಿ ಹಾಸಿಗೆಯ ಸುಖವನ್ನು ಅನುಭವಿಸುವುದು ಅಸಾಧ್ಯ. ಹಾಗೆಯೇ ಆದಾಯದ ಮಿತಿಯನ್ನು ತಿಳಿಯದೆ ಖರ್ಚು ಮಾಡಿದರೆ ಸಾಲದ ಶೂಲಕ್ಕೆ ಸಿಲುಕ ಬೇಕಾಗುತ್ತದೆ. ಅದೇ ರೀತಿ ಜೀವನದಲ್ಲಿ ನಮ್ಮ ಇತಿಮಿತಿಯನ್ನು ಅರಿತುಕೊಂಡು ಬದುಕಬೇಕು. ಆಗ ಮಾತ್ರ ಸುಖ ಸಂತೋಷಗಳನ್ನು ಅನುಭವಿಸಲು ಸಾಧ್ಯವೆಂದು ಈ ಗಾದೆ ತಿಳಿ ಹೇಳುತ್ತದೆ. | |
| IX. | ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : | 1 x 4 = 4 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 34. | ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ಬರೆಯಿರಿ.<br><br>ಅಥವಾ<br><br>'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ಸಮರ್ಥಿಸಿರಿ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ಕುರಿತು ಬರೆಯಿರಿ.<br><br>ಉತ್ತರ : **1933** ನೇ ವರ್ಷದ ಕೊನೆಯಲ್ಲಿ ಗಾಂಧೀಜಿಯವರು ಕರ್ನಾಟಕ ಪ್ರವಾಸವನ್ನು ಕೈಗೊಂಡರು. ಕೊಡಗಿನಲ್ಲಿ ಎರಡು ದಿನಗಳು ತಂಗುವ ನಿರ್ಧಾರ ಮಾಡಿದ್ದರು. ಅದೇ ಸಮಯದಲ್ಲಿ ಗಾಂಧೀಜಿಯವರು ತಮ್ಮಂತಹ ಸಾಧಾರಣ ಕುಟುಂಬದವರ ಮನೆಗೆ ಬರಬೇಕೆಂದು ಗೌರಮ್ಮನವರು ಉಪವಾಸ ಸತ್ಯಾಗ್ರಹ ಕೈಗೊಂಡಿದ್ದರು. ಆಗ ಗಾಂಧೀಜಿಯವರು ಕೊಡಗಿನ ಕಿತ್ತಲೆ ಹಣ್ಣನ್ನು ನೀಡಿ ಎಳೆ ಚೆಲುವೆಯ ಸತ್ಯಾಗ್ರಹವನ್ನು ಅಂತ್ಯಗೊಳಿಸಿದರು. ಗಾಂಧೀಜಿಯವರು ಅವರಿಗೆ ಕೊಟ್ಟ ಮಾತಿನಂತೆ ಗೌರಮ್ಮನವರ ಮನೆಗೂ ಹೋದರು. ಆಗ ಗೌರಮ್ಮನವರು ಗಾಂಧೀಜಿಯವರು ಸ್ಥಾಪಿಸಿದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ಸಂಬಂಧ ನಿಧಿಗೆ ತನ್ನ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ, ಮೂಗು ಬೊಟ್ಟನ್ನು ಬಿಟ್ಟು ಉಳಿದೆಲ್ಲಾ ಒಡವೆಗಳನ್ನು ಮಹಾತ್ಮರ ಕೈಗೆ ಕೊಟ್ಟಾಗ ಗಾಂಧೀಜಿಯವರು ಬೆರಗಾದರು. ಇದೇ ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಘಟನೆಗಳಾಗಿವೆ.<br><br>ಅಥವಾ<br><br>'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ಸಮರ್ಥಿಸಿರಿ.<br><br>ಉತ್ತರ : ಸುತ್ತಮುತ್ತಲ ಬದುಕಿನಲ್ಲಿ ಕಂಡು ಕೇಳಿದ ಘಟನೆಗಳು, ಮಹಿಳಾಲೋಕದ ಕನಸುಗಳು, ಆದರ್ಶಗಳು, ಮಾನವ ಜೀವಿಗಳ ಸ್ವಾತಂತ್ರ್ಯ, ಸದಭಿರುಚಿ ಹಾಗೂ ಮನದಾಳದ ಅನಿಸಿಕೆಗಳಿಗೆ ಪೂರಕವಾದ ಸಮಾಜ ನಿರ್ಮಾಣದ ಆಶಯ ಗೌರಮ್ಮನವರ ಕಥೆಗಳಲ್ಲಿ ಬಿಂಬಿತವಾಗಿದೆ. ಆರೋಗ್ಯಕರ ನಿಲುವು, ಜಾತ್ಯತೀತ ಮನೋಧರ್ಮ, ಮಾನವೀಯ ವಿಚಾರಗಳು, ಇವುಗಳ ಜೊತೆಗೆ ಜೀವನ ಪ್ರೀತಿಯನ್ನು ಹೊಂದಿದ ಕತೆಗಾರ್ತಿ ಆಗಿದ್ದರು. ಮಹಿಳೆಯರ ಸಮಸ್ಯೆಗಳು, ಶೋಷಣೆ, ಹಿಂಸೆಯ ನಾನಾ ಮುಖಗಳ ಅನಾವರಣವನ್ನು ತಮ್ಮ ಕಥೆಗಳಲ್ಲಿ ಮಾಡಿದರು. ಬದುಕಿನ ಬಗ್ಗೆ ಅಪಾರವಾದಕಾಳಜಿಗಳನ್ನು ಹೊಂದಿದ್ದ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| X.<br><br>35. | ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)<br><br>ಕಂಚು ಗಾರನ ---------------------------------<br>-------------------------------------------<br>-------------------------------------------<br>---------------------------------- ಮಾಡುವುದು<br>ಅಥವಾ<br>ನಾನು ---------------------------------------<br>-------------------------------------------<br>-------------------------------------------<br>-------------------------------- ಕಾರ್ಯಗಳೆಲ್ಲವು<br><br>ಉತ್ತರ :<br><br>ಕಂಚುಗಾರನ ಬಿಡಾರದಂದದಿ<br><br>ಕಂಚು ಹಿತ್ತಾಳೆಯ ಪ್ರತಿಮೆಗಳ ನೆರಹಿ<br><br>ಮಿಂಚಬೇಕೆಂದು ಬಲು ಜ್ಯೋತಿಗಳನು ಹಚ್ಚಿ<br><br>ವಂಚನೆಯಿಂದಲಿ ಪೂಜೆ ಮಾಡುವುದು<br><br>ಅಥವಾ<br><br>ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ<br><br>ಎನಾದರು ಹರಿ ಪ್ರೇರಣೆಯೆಂದು<br><br>ಧ್ಯಾನಿಸಿ ಮೌನದಿ ಪುರಂದರವಿಠಲನ<br><br>ಕಾಣದೆ ಮಾಡಿದ ಕಾರ್ಯಗಳೆಲ್ಲವು | 1 x 4 = 4 |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XI. | ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :<br><br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ)<br><br>ಮಕ್ಕಳೆಂದರೆ ವಿಶ್ವೇಶ್ವರಯ್ಯನವರಿಗೆ ಅಕ್ಕರೆ. ಒಮ್ಮೆ ಅವರು ತಮ್ಮ ಹುಟ್ಟೂರಾದ ಮುದ್ದೇನಹಳ್ಳಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು. ಮಕ್ಕಳೆಲ್ಲ ಅವರನ್ನು ಮುತ್ತಿಕೊಂಡರು. ಆಗ ವಿಶ್ವೇಶ್ವರಯ್ಯನವರು ಉಪಾಧ್ಯಾಯರನ್ನು ಕರೆದು ಅವರಿಗೆ ಹಣಕೊಟ್ಟು ಮಕ್ಕಳಿಗೆಲ್ಲ ಸಿಹಿ ತಿಂಡಿ ತಂದುಕೊಡಲು ಹೇಳಿದರು. ಮಕ್ಕಳಿಗೆ ಎರಡು ಹಿತ ನುಡಿಗಳನ್ನು ಹೇಳಬೇಕೆಂದು ಕೇಳಿದಾಗ ಐದು ನಿಮಿಷ ಮಾತನಾಡಿದರು. ಆದರೆ ಅವರಿಗೆ ತೃಪ್ತಿ ಆಗಲಿಲ್ಲ. ಪೂರ್ವ ಸಿದ್ಧತೆ ಮಾಡಿಕೊಂಡು ಇನ್ನೊಮ್ಮೆ ಶಾಲೆಗೆ ಬಂದು ತಾವು ಬರೆದು ತಂದಿದ್ದ ಭಾಷಣವನ್ನು ಓದಿ ಸಮಾಧಾನ ಪಟ್ಟುಕೊಂಡರು. ವಿಶ್ವೇಶ್ವರಯ್ಯನವರು ಸಾರ್ಥಕ ಜೀವನ ನಡೆಸಿ, ನೂರೊಂದು ವರ್ಷಗಳ ಕಾಲ ಬದುಕಿದ್ದರು. ಶಿಸ್ತು, ಸಂಯಮಗಳಿಂದ ಕೆಲಸ ಮಾಡಿದರೆ ಸದಾ ಸುಖವಿದೆ ಎಂಬುದನ್ನು ತಮ್ಮ ಜೀವನದಲ್ಲಿ ಸಾಧಿಸಿ ತೋರಿಸಿದ ಸರ್.ಎಂ. ವಿಶ್ವೇಶ್ವರಯ್ಯನವರು ಸ್ಫೂರ್ತಿಯ ಆದರ್ಶಜೀವಿಯಾಗಿ ಇವತ್ತಿಗೂ ಅಜರಾಮರರಾಗಿದ್ದಾರೆ. | 4 x 1 = 4 |
| 36. | ಪ್ರಶ್ನೆಗಳು :<br><br>ಎ. ವಿಶ್ವೇಶ್ವರಯ್ಯನವರು ಎಲ್ಲಿಗೆ ಭೇಟಿ ನೀಡಿದರು?<br><br>ಉತ್ತರ : ವಿಶ್ವೇಶ್ವರಯ್ಯನವರು ತಮ್ಮ ಹುಟ್ಟೂರಾದ ಮುದ್ದೇನಹಳ್ಳಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು.<br><br>ಬಿ. ವಿಶ್ವೇಶ್ವರಯ್ಯನವರು ಹಣವನ್ನು ಉಪಾಧ್ಯಾಯರಿಗೆ ಏಕೆ ಕೊಟ್ಟರು?<br><br>ಉತ್ತರ : ವಿಶ್ವೇಶ್ವರಯ್ಯನವರು ಹಣವನ್ನು ಉಪಾಧ್ಯಾಯರಿಗೆ ಮಕ್ಕಳಿಗೆಲ್ಲ ಸಿಹಿ ತಿಂಡಿ ತಂದುಕೊಡಲು ಕೊಟ್ಟರು.<br><br>ಸಿ. ಸ್ಫೂರ್ತಿಯ ಆದರ್ಶಜೀವಿಯಾಗಿ ವಿಶ್ವೇಶ್ವರಯ್ಯನವರು ಹೇಗೆ ಬದುಕಿದರು?<br><br>ಉತ್ತರ : ಶಿಸ್ತು, ಸಂಯಮಗಳಿಂದ ಕೆಲಸ ಮಾಡಿದರೆ ಸದಾ ಸುಖವಿದೆ ಎಂಬುದನ್ನು ತಮ್ಮ ಜೀವನದಲ್ಲಿ ಸಾಧಿಸಿ ತೋರಿಸಿ ಸ್ಫೂರ್ತಿಯ ಆದರ್ಶಜೀವಿಯಾಗಿ ವಿಶ್ವೇಶ್ವರಯ್ಯನವರು ಬದುಕಿದರು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XI. | ಡಿ. ವಿಶ್ವೇಶ್ವರಯ್ಯನವರು ಯಾವಾಗ ಸಮಾಧಾನ ಪಟ್ಟುಕೊಂಡರು?<br><br>ಉತ್ತರ : ವಿಶ್ವೇಶ್ವರಯ್ಯನವರು ಪೂರ್ವ ಸಿದ್ಧತೆ ಮಾಡಿಕೊಂಡು ಇನ್ನೊಮ್ಮೆ ಶಾಲೆಗೆ ಬಂದು ತಾವು ಬರೆದು ತಂದಿದ್ದ ಭಾಷಣವನ್ನು ಓದಿ ಸಮಾಧಾನ ಪಟ್ಟುಕೊಂಡರು. | |
| XII. | ಪ್ರಬಂಧ ಬರವಣಿಗೆ : | 1 x 4 = 4 |
| 37. | ರಾಷ್ಟ್ರೀಯ ಹಬ್ಬಗಳು<br><br>ಅಥವಾ<br><br>ಸ್ವಚ್ಛಭಾರತ ಅಭಿಯಾನ | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಾಷ್ಟ್ರೀಯ ಹಬ್ಬಗಳು :<br><br>ಉತ್ತರ :<br><br>ಪೀಠಿಕೆ : ರಾಷ್ಟ್ರೀಯ ಹಬ್ಬಗಳು ಜನರನ್ನು ಪ್ರೀತಿ ವಿಶ್ವಾಸಗಳಿಂದ ಬಂಧಿಸುತ್ತವೆ. ಹಬ್ಬಗಳ ಸಮಯದಲ್ಲಿ ಜನರು ಎಲ್ಲಾ ಭೇದಭಾವಗಳನ್ನು ಮರೆತು ಒಂದಾಗುತ್ತಾರೆ. ದೇಶದ ಜನರೆಲ್ಲರೂ ಜಾತಿ,ಮತ, ಭೇದಗಳನ್ನು ಮರೆತು ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ಸ್ವಾತಂತ್ರ್ಯ ದಿನಾಚರಣೆ, ಗಾಂಧೀ ಜಯಂತಿ ಮತ್ತು ಗಣ ರಾಜ್ಯೋತ್ಸವಗಳು ರಾಷ್ಟ್ರೀಯ ಹಬ್ಬಗಳಾಗಿವೆ. ಇವು ಸರಕಾರ ಘೋಷಿಸಿರುವ ಹಬ್ಬಗಳಾಗಿವೆ.<br><br>ವಿಷಯ ನಿರೂಪಣೆ : 1947 ಆಗಸ್ಟ್ 15ರಂದು ಭಾರತ ದೇಶವು ಸ್ವತಂತ್ರವಾಯಿತು. ಅಂದು ಭಾರತೀಯರಿಗೆ ಬ್ರಿಟಿಷರು ಅಧಿಕಾರವನ್ನು ಬಿಟ್ಟು ಕೊಟ್ಟರು. ಅರವಿಂದ ಘೋಷ್ ಅವರ ಜನ್ಮದಿನವು ಈ ದಿನವವೇ ಆಗಿದೆ. ಇವೆಲ್ಲದರ ಸವಿನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಅಕ್ಟೋಬರ್ 2 ರಂದು ಮಹಾತ್ಮ ಗಾಂಧೀಜಿಯವರು ಜನಿಸಿದ ದಿನ. ಆ ದಿನವನ್ನು ಗಾಂಧೀ ಜಯಂತಿ ಎಂದು ಆಚರಿಸಲಾಗುತ್ತದೆ. ಅಂದು ಅವರ ತ್ಯಾಗ ಮತ್ತು ಬಲಿದಾನದ ಸೇವೆಯನ್ನು ಜನರು ಸ್ಮರಿಸುತ್ತಾರೆ. ಜನವರಿ 26 ರಂದು ಗಣರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ. ಅಂದು ಭಾರತೀಯ ಸಂವಿಧಾನ ಜಾರಿಗೆ ಬಂದ ದಿನ. ಆ ಸವಿನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ.<br><br>ಉಪಸಂಹಾರ : ರಾಷ್ಟ್ರೀಯ ಹಬ್ಬಗಳನ್ನು ಎಲ್ಲರೂ ಕೂಡಿ ಆಚರಿಸುವುದರಿಂದ ರಾಷ್ಟ್ರೀಯ ಭಾವೈಕ್ಯತೆ ಬೆಳೆಯುತ್ತದೆ. ಅಲ್ಲದೆ ದೇಶಭಕ್ತಿ ಮತ್ತು ದೇಶಪ್ರೇಮ ಹೆಚ್ಚಾಗುತ್ತದೆ. ಧಾರ್ಮಿಕ ಸಾಮರಸ್ಯ ಬೆಳೆಯಲು ಸಹಕಾರಿಯಾಗುತ್ತದೆ. ರಾಷ್ಟ್ರೀಯ ಹಬ್ಬಗಳು ತ್ಯಾಗ ಮತ್ತು ಸೇವಾಮನೋಭಾವವನ್ನು ಬೆಳೆಸುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ.<br><br>ಅಥವಾ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸ್ವಚ್ಛಭಾರತ ಅಭಿಯಾನ :<br><br>ಉತ್ತರ :<br><br>ಸ್ವಚ್ಛಭಾರತ ಅಭಿಯಾನ<br><br>ಪೀಠಿಕೆ : ನಮ್ಮ ಆರೋಗ್ಯದ ದೃಷ್ಟಿಯಿಂದ ನಾವು ವಾಸಿಸುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬರೂ ಸ್ವಯಂ ಪ್ರೇರಣೆಯಿಂದ ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಇದು ನಮ್ಮ ಮನೆಯ ಪರಿಸರದಿಂದಲೇ ಆರಂಭವಾಗಬೇಕಾಗಿದೆ.<br><br>ವಿಷಯ ನಿರೂಪಣೆ : 'ಆರೋಗ್ಯವೇ ಭಾಗ್ಯ' ಎಂಬ ನಾಣ್ನುಡಿ ನಮ್ಮಲ್ಲಿದೆ. ಉತ್ತಮ ಆರೋಗ್ಯಕ್ಕೆ ಉತ್ತಮ ಹಾಗೂ ಸ್ವಚ್ಛವಾದ ಪರಿಸರ ಅಗತ್ಯ. ಹಾಗಾಗಿ ಅಕ್ಟೋಬರ್–2, 2014 ರ ಗಾಂಧೀ ಜಯಂತಿಯಂದು ಮಾನ್ಯ ಪ್ರಧಾನಮಂತ್ರಿಗಳು ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಿದರು. ಗಾಂಧೀಜಿಯವರು ಹುಟ್ಟಿ 150 ವರ್ಷ ಪೂರ್ಣಗೊಳ್ಳುವ 2.10.2019 ಕ್ಕೆ ಈ ಯೋಜನೆಯ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಇಂದಿಗೂ ಇದು ಮುಂದುವರೆಯುತ್ತಿದೆ. ಸಂಪೂರ್ಣವಾಗಿ ಸ್ವಚ್ಛಭಾರತ ನಿರ್ಮಾಣವಾಗಬೇಕು. ಈ ದಿಸೆಯಲ್ಲಿ ಈಗಾಗಲೇ ಹಳ್ಳಿಗಳಲ್ಲಿ, ನಗರಗಳಲ್ಲಿ ತಾವು ವಾಸಿಸುವ ಪ್ರದೇಶಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ ಸ್ವಚ್ಛತಾ ಆಂದೋಲನವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದರಿಂದ ಉತ್ತಮ ಪರಿಸರ ನಿರ್ಮಾಣವಾಗುತ್ತಿದೆ. ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿಯಾಗುತ್ತಿದ್ದು, ಇನ್ನೂ ಉತ್ತಮಗೊಳ್ಳಬೇಕಿದೆ. ಜನರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿದೆ. ಸಮೂಹ ಮಾಧ್ಯಮಗಳು ಇದನ್ನು ಯಶಸ್ವಿಗೊಳಿಸುವಲ್ಲಿ ಪೂರ್ಣ ಸಹಕಾರ ನೀಡುತ್ತಿವೆ. ದೇಶದಾದ್ಯಂತ ಈ ಅಭಿಯಾನವು ಉತ್ತಮವಾಗಿ ಜಾರಿಗೊಳ್ಳುತ್ತಿರುವುದು ಸಂತೋಷದ ವಿಷಯ. ಅದರಲ್ಲೂ ಶಾಲಾ ಕಾಲೇಜು ವಿದ್ಯಾರ್ಥಿಗಳು ಸ್ವಚ್ಛಭಾರತ ಅಭಿಯಾನದ ಭಾಗವಾಗುತ್ತಾ ಈ ಯೋಜನೆಯನ್ನು ಯಶಸ್ವಿಗೊಳಿಸುತ್ತಿದ್ದಾರೆ.<br><br>ಉಪಸಂಹಾರ : ಸ್ವಚ್ಛ ಭಾರತ ನಿರ್ಮಾಣದ ಕನಸನ್ನು ನನಸು ಮಾಡೋಣ. ಈ ಯೋಜನೆಯನ್ನು ಸಾಕಾರಗೊಳಿಸಲು ಪ್ರತಿವಾರ ಎರಡು ಗಂಟೆಗಳ ಅವಧಿಯನ್ನು ಮೀಸಲಿಡೋಣ. ಸ್ವಚ್ಛ ಮನೆ, ಸ್ವಚ್ಛ ಗ್ರಾಮ, ಸ್ವಚ್ಚ ನಗರ, ಸ್ವಚ್ಛ ರಾಜ್ಯ, ಸ್ವಚ್ಛ ದೇಶ ಎಂಬ ಸೂತ್ರದಡಿ ಸ್ವಚ್ಛಭಾರತ ಅಭಿಯಾನವನ್ನು ಕೈಗೊಳ್ಳೋಣ. ಆ ಮೂಲಕ ಸ್ವಚ್ಛಭಾರತ ಅಭಿಯಾನದ ಯಶಸ್ವಿ ನಾಗಾಲೋಟಕ್ಕೆ ಅಡಿಗಲ್ಲು ಆಗೋಣ. ಜೈ ಭಾರತ್ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XII. | ಪತ್ರಲೇಖನ ಬರೆಯುವುದು : | 1 x 5 = 5 |
| 38. | ನಿಮ್ಮನ್ನು ರಾಣಿಬೆನ್ನೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಸಮರ್ಥ್ ಎಂದು ಭಾವಿಸಿಕೊಂಡು, ವರ್ಗಾವಣೆ ಪತ್ರವನ್ನು ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ದಾಂಡೇಲಿಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ರೋಹಿತ್ ಎಂದು ಭಾವಿಸಿಕೊಂಡು, ಪೋಷಕರ ಸಭೆಗೆ ಆಹ್ವಾನಿಸಿ ಹುಬ್ಬಳ್ಳಿಯಲ್ಲಿರುವ ನಿಮ್ಮ ತಾಯಿ ಸುಜಾತರಿಗೆ ಒಂದು ಪತ್ರವನ್ನು ಬರೆಯಿರಿ. | |
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರ : ವ್ಯಾವಹಾರಿಕ ಪತ್ರ :<br><br>ಇವರಿಂದ, ದಿನಾಂಕ : 02/06/2023<br>ಸಮರ್ಥ್, ಸ್ಥಳ : ರಾಣಿಬೆನ್ನೂರು<br>10ನೇ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ರಾಣಿಬೆನ್ನೂರು.<br><br>ಇವರಿಗೆ,<br>ಮಾನ್ಯ ಮುಖ್ಯೋಪಾಧ್ಯಾಯರು,<br>ಸರಕಾರಿ ಪ್ರೌಢಶಾಲೆ,<br>ರಾಣಿಬೆನ್ನೂರು.<br><br>ಮಾನ್ಯರೇ,<br><br>ವಿಷಯ : ವರ್ಗಾವಣೆ ಪತ್ರವನ್ನು ನೀಡುವಂತೆ ಕೋರಿ.<br>* * *<br>ಸಮರ್ಥ್ ಆದ ನಾನು ಇದೇ ಶಾಲೆಯಲ್ಲಿ 10ನೇ ತರಗತಿಯಲ್ಲಿ ಓದಿ 2023 ಏಪ್ರಿಲ್ ತಿಂಗಳಿನಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದೇನೆ. ಪ್ರಥಮ ಪಿ.ಯು.ಸಿ ತರಗತಿಗೆ ಪ್ರವೇಶವನ್ನು ಪಡೆಯಲು ವರ್ಗಾವಣೆಪತ್ರದ ಅವಶ್ಯಕತೆ ಇದೆ. ಆದ್ದರಿಂದ ವರ್ಗಾವಣೆಪತ್ರವನ್ನು ನೀಡಿ ನನ್ನ ಮುಂದಿನ ವ್ಯಾಸಂಗಕ್ಕೆ ಅನುವು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.<br><br>ವಂದನೆಗಳೊಂದಿಗೆ,<br><br>ತಮ್ಮ ವಿಧೇಯ ವಿದ್ಯಾರ್ಥಿ<br>ಸಹಿ/–<br>(ಸಮರ್ಥ್) | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವೈಯಕ್ತಿಕ ಪತ್ರ :** | |
| | ಇಂದ, ವಿಳಾಸ, ಸಂಬೋಧನೆ ದಿನಾಂಕ | **1 ಅಂಕ** |
| | ಪತ್ರದ ಒಡಲು | **2 ಅಂಕಗಳು** |
| | ಗೆ, ವಿಳಾಸ, ಸಹಿಯೊಂದಿಗೆ ಮುಕ್ತಾಯ | **1 ಅಂಕ** |
| | ವಿನ್ಯಾಸ, ಭಾಷಾಶೈಲಿಗೆ | **1 ಅಂಕ** |
| | ಒಟ್ಟು | **5 ಅಂಕಗಳು** |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರ : ವೈಯಕ್ತಿಕ ಪತ್ರ :<br><br>ಕ್ಷೇಮ ಶ್ರೀ ಇವರಿಂದ,<br>ರೋಹಿತ್,<br>10ನೇ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ದಾಂಡೇಲಿ.<br>ದಿನಾಂಕ : 12/12/2023<br><br>ಮಾತೃಶ್ರೀಯವರಿಗೆ ನಿಮ್ಮ ಪ್ರೀತಿಯ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.<br><br>ನಮ್ಮ ಶಾಲೆಯಲ್ಲಿ ಎಲ್ಲಾ ವಿಷಯಗಳಲ್ಲಿ ಪಾಠಗಳನ್ನು ಮುಗಿಸಿ ಪುನರಾವರ್ತನೆಯನ್ನು ಆರಂಭಿಸಿದ್ದಾರೆ. ಅಲ್ಲದೆ ಕಿರುಪರೀಕ್ಷೆ ಹಾಗೂ ಅರ್ಧವಾರ್ಷಿಕ ಪರೀಕ್ಷೆಗಳಲ್ಲಿ ಉತ್ತಮವಾದ ಅಂಕಗಳನ್ನು ಪಡೆದಿರುವುದು ನನ್ನ ಭರವಸೆಯನ್ನು ಹೆಚ್ಚಿಸಿದೆ. ಶಾಲೆಯಲ್ಲಿ ದಿನಾಂಕ 22/12/2023 ರಂದು ಬೆಳಿಗ್ಗೆ 10:00 ಗಂಟೆಗೆ ಹತ್ತನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳ ಪೋಷಕರ ಸಭೆಯನ್ನು ಕರೆದಿರುತ್ತಾರೆ. ತಾವುಗಳು ತಪ್ಪದೆ ಸಭೆಯಲ್ಲಿ ಭಾಗವಹಿಸಬೇಕೆಂದು ಈ ಪತ್ರದ ಮೂಲಕ ತಮ್ಮಲ್ಲಿ ಕೋರಿಕೊಳ್ಳುತ್ತೇನೆ. ಇನ್ನೇನು ವಿಷಯವಿಲ್ಲ.<br><br>ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರವನ್ನು ತಿಳಿಸಿ.<br><br>ಇಂತಿ ನಿಮ್ಮ ಪ್ರೀತಿಯ ಮಗ<br>ಸಹಿ/–<br>(ರೋಹಿತ್)<br><br>ಇವರಿಗೆ,<br>ಶ್ರೀಮತಿ. ಸುಜಾತ,<br>ಮನೆ ಸಂಖ್ಯೆ 68,<br>ಕೆನರಾ ಬ್ಯಾಂಕ್ ರಸ್ತೆ,<br>ಹುಬ್ಬಳ್ಳಿ. | |

**2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 2**

**Academic Year 2023-24 Bengaluru North Dist. SSLC Practice Paper – 2**

**62K – ತೃತೀಯ ಭಾಷೆ – ಕನ್ನಡ**

| | |
|---|---|
| ಸಮಯ : 3:00 ಗಂಟೆ | Time : 3:00 Hrs |
| ಗರಿಷ್ಠ ಅಂಕಗಳು : 80 | Max. Marks : 80 |
| ಒಟ್ಟು ಪ್ರಶ್ನೆಗಳು : 38 | Total No of Questions : 38 |

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **8 x 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ

(ಎ) 6 (ಬಿ) 9

(ಸಿ) 7 (ಡಿ) 2

2. ಕೆಳಗಿನವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರವಿರುವ ಪದ

(ಎ) ವಸ್ತು (ಬಿ) ಆಸಕ್ತಿ

(ಸಿ) ಧ್ವನಿ (ಡಿ) ಅಮ್ಮ

3. ಶರೀಫರು ಗುರುವಿನ ಕೃಪೆಯನ್ನು ಪಡೆಯಲು ಮಂದಿರಗಳಿಗೆ ಹೋಗುತ್ತಿದ್ದರು. – ಇಲ್ಲಿ ದ್ವಿತೀಯಾ ವಿಭಕ್ತಿ ಪ್ರತ್ಯಯದಿಂದ ಕೂಡಿರುವ ಪದ

(ಎ) ಕೃಪೆಯನ್ನು (ಬಿ) ಶರೀಫರು

(ಸಿ) ಗುರುವಿನ (ಡಿ) ಮಂದಿರಗಳಿಗೆ

4. "ಗೌರಿಯ ಮುಖ ಕಮಲದಂತೆ ಅರಳಿತು" ಇಲ್ಲಿರುವ ಅಲಂಕಾರ

(ಎ) ಉಪಮ (ಬಿ) ರೂಪಕ

(ಸಿ) ಯಮಕ (ಡಿ) ದೃಷ್ಟಾಂತ

5. ಕೆಳಗಿನವುಗಳಲ್ಲಿ ಸವರ್ಣದೀರ್ಘ ಸಂಧಿಗೆ ಉದಾಹರಣೆಯಾದ ಪದ

(ಎ) ರಕ್ಷಣೆಯನ್ನು (ಬಿ) ಜೀವವೊಂದು

(ಸಿ) ದೇಶಾಭಿಮಾನ (ಡಿ) ಧರ್ಮದುಸಿರು

6. ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಲೇಖನ ಚಿಹ್ನೆ

(ಎ) ಉದ್ಧರಣ (ಬಿ) ಪ್ರಶ್ನಾರ್ಥಕ

(ಸಿ) ಭಾವಸೂಚಕ (ಡಿ) ಅಲ್ಪವಿರಾಮ

7. ಕೆಳಗಿನವುಗಳಲ್ಲಿ ತತ್ಸಮ ರೂಪಕ್ಕೆ ಉದಾಹರಣೆಯಾಗಿರುವ ಪದ

(ಎ) ದೃಷ್ಟಿ (ಬಿ) ಮೊಗ

(ಸಿ) ಬಣ್ಣ (ಡಿ) ಚಣ

8. ಧಗಧಗನೆ ಉರಿಯುತ್ತಿರುವ ಕಾಡ್ಗಿಚ್ಚಿಗೆ ಪ್ರಾಣಿಗಳು ಭಯದಿಂದ ಚೀರಿಚೀರಿ ಓಡಿಓಡಿ ಹೋದವು – ಈ ವಾಕ್ಯದಲ್ಲಿ ಬಂದಿರುವ ದ್ವಿರುಕ್ತಿ ಪದ

(ಎ) ಧಗಧಗನೆ (ಬಿ) ಚೀರಿಚೀರಿ

(ಸಿ) ಕಾಡ್ಗಿಚ್ಚಿಗೆ (ಡಿ) ಓಡಿಓಡಿ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : **4 x 1 = 4**

9. ರಾಮಸಿಂಗನ ಕೈಯಲ್ಲಿ : ರಾಷ್ಟ್ರಧ್ವಜ :: ಕುಲಕರ್ಣಿಯ ಕೈಯಲ್ಲಿ : ––––––––––

10. ಬೆಳವಡಿಯ ರಾಣಿ : ಮಲ್ಲಮ್ಮಾಜಿ :: ಉಲ್ಲಾಳದ ರಾಣಿ : –––––––––––

11. ಕರದಲಿ : ಜಪಮಣಿ :: ಬಾಯಲಿ : ––––––––––

12. ಅಪ್ಪರಿಲ್ಲದೆ ಸೊಪ್ಪಾದೊ : ಈ ಭೂಮಿ :: ಸಪ್ಪೆ ದಂಟಾದೊ : -----------

**III.** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **4 x 1 = 4**

13. ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗೆಗೆ ಗೊರೂರರಲ್ಲಿ ಯಾವ ವಿಚಾರವನ್ನು ಕೇಳಿ ತಿಳಿದುಕೊಂಡರು?

14. ರೈತನು ಯಾವ ಬೆಟ್ಟದಮೇಲೆ ಹೆಚ್ಚು ಮಳೆ ಸುರಿಯಬೇಕೆಂದು ಮಳೆದೇವರಲ್ಲಿ ಕೇಳುತ್ತಾನೆ?

15. ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ ಇರಬೇಕಾದ ಗುಣ ಯಾವುದು?

16. ಯೋಗಿಯಾಗುವವನು ಏನನ್ನು ಜಯಿಸಬೇಕೆಂದು ಸೋಮೇಶ್ವರ ಶತಕದಲ್ಲಿ ಹೇಳಿದೆ?

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **8 x 2 = 16**

17. ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಉಪಚರಿಸಿದ ಬಗೆ ಹೇಗೆ?

18. ಗಾಂಧೀಜಿಯವರು ಗೌರಮ್ಮನವರ ಮನೆಗೆ ಏಕೆ ಹೋದರು?

19. ಕೆಳದಿಯ ಚೆನ್ನಮ್ಮನು ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಲು ಕಾರಣವಾದ ಸನ್ನಿವೇಶವನ್ನು ವಿವರಿಸಿ.

20. ಹೈಸ್ಕೂಲ್‌ನ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಬೀಚಿಯವರ ಮೇಲೆ ಯಾವ ಪ್ರಭಾವವನ್ನು ಬೀರಲಿಲ್ಲ, ಏಕೆ?

21. ಯುವಜನತೆಯ ಮಂತ್ರವನ್ನು ಗೋಪಾಲಕೃಷ್ಣ ಅಡಿಗರು ಹೇಗೆ ವಿವರಿಸಿದ್ದಾರೆ?

22. ಕವಿಯ ಆಶಯ ಕೆಡದಂತೆ ವಿಲಯರುದ್ರರು ಮಾಡುವ ಕೆಲಸವನ್ನು ವಿವರಿಸಿ.

23. ಗ್ರಂಥಾಲಯವನ್ನು ಹೊಕ್ಕಾಗ ಸಿ.ಪಿ.ಕೆ. ಅವರಿಗಾದ ಅನುಭವವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

24. ಧರ್ಮಪದನು ತನ್ನ ಭಾವನೆಯನ್ನು ಏಕೆ ಹತ್ತಿಕ್ಕಿಕೊಂಡನು?

**V.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : **2 x 3 = 6**

25 "ದೊರಕಿದಾ ಗುರು ದೊರಕಿದಾ ಸದ್ಗುರು"

26. "ಆಚಾರವೇ ಸ್ವರ್ಗ! ಅನಾಚಾರವೇ ನರಕ".

**VI.** ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **4 x 3 = 12**

27. ಶರೀಫರ ತತ್ವಪದಗಳ ವೈಶಿಷ್ಟ್ಯವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

28. ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ವಿವರಿಸಿರಿ.

29. 'ಜನಪದಗೀತೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

30. ಪುರಂದರದಾಸರು ಕಪಟ ಭಕ್ತಿಯ ಆರಾಧಕರನ್ನು ಅಣಕಿಸಿ ಅವಹೇಳನ ಮಾಡಿರುವ ಬಗೆಯನ್ನು ನೀವು ಏಕೆ ಮೆಚ್ಚುತ್ತೀರಿ? ವಿವರಿಸಿರಿ.

**VII.** ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : **2 x 3 = 6**

31. ಬೀಚಿ

32. ಸಿ.ಪಿ. ಕೃಷ್ಣಕುಮಾರ್

**VIII.** ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : **1 x 3 = 3**

33. "ಶಕ್ತಿಗಿಂತ ಯುಕ್ತಿ ಮೇಲು"

ಅಥವಾ

"ಬೆಳೆಯುವ ಪೈರು ಮೊಳಕೆಯಲ್ಲಿ"

**IX.** ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **1 x 4 = 4**

34. ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು? ವಿವರಿಸಿರಿ.

**ಅಥವಾ**

ಕುಲಕರ್ಣಿ ಅವರಿಗೂ ರಾಮಸಿಂಗನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : **1 x 4 = 4**

35.

ನಾವು ------------------------------------
------------------------------------------
------------------------------------------
-------------------------------------- ಇಂದೆ

**ಅಥವಾ**

ಕರ್ನಾಟಕ ---------------------------------
------------------------------------------
------------------------------------------
-------------------------------------- ಒಂದೆ

**XI.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **4 x 1 = 4**

ಅನ್ನ ದೇವರಿಗೆ ಸಮಾನ, ಅನ್ನದಿಂದಲೇ ಮನಷ್ಯನಿಗೆ ಶಕ್ತಿ. ಅನ್ನಕ್ಕಾಗಿ ಮನುಷ್ಯ ದುಡಿಯುವುದು. ಹಾಗಾಗಿಯೇ ದಾಸರು ಹೇಳಿದ್ದಾರೆ "ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂದು. ಪ್ರಪಂಚದಲ್ಲಿ ಹಲವರು ತುತ್ತು ಅನ್ನಕ್ಕಾಗಿ ಹಪಹಪಿಸುತ್ತಾರೆ. ಭಿಕ್ಷೆ ಬೇಡುತ್ತಾರೆ. ಅನ್ನ ಸಿಕ್ಕಿತೆಂದು ನಾಲ್ಕು ಹೊತ್ತಿನದು ಒಂದೇ ಬಾರಿಗೆ ತಿನ್ನಲೂ ಸಾಧ್ಯವಿಲ್ಲ. ಹಸಿದ ಸಮಯಕ್ಕೆ ಉಣ್ಣಬೇಕು. ಹಸಿದಾಗ ಉಂಡರೆ ಅನ್ನ ಅಮೃತವೆನಿಸುವುದು. ರುಚಿಸುವುದು. ಹಿತವೆನಿಸುವುದು. ಆದರೆ ಉಂಡ ನಂತರ ಏನನ್ನಾದರೂ ಒತ್ತಾಯ ಪೂರ್ವಕವಾಗಿ ನೀಡಿದರೆ ಅದು ವಾಕರಿಕೆಯೆನಿಸುತ್ತದೆ. ಬೇಡವೆನಿಸುತ್ತದೆ. ಅದಕ್ಕೆಂದೇ ಜನಪದರು "ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳು" ಎಂದಿದ್ದಾರೆ. ಹಸಿದವರಿಗೆ ಉಣಬಡಿಸಿದರೆ, ಭಿಕ್ಷೆ ನೀಡಿದರೆ ಸಾರ್ಥಕವಾಗುತ್ತದೆ. ಕೆಲವರು ಊಟ ಮಾಡುವ ಆಟವಾಡುತ್ತಾರೆ. ಅನ್ನದೇವತೆಯನ್ನು ತಿಪ್ಪೆಗೆ ಎಸೆಯುವ ನೀಚ ಕಾರ್ಯ ಮಾಡುತ್ತಾರೆ. ಇದು ಅಕ್ಷಮ್ಯ ಅಪರಾಧ. ಪ್ರತಿಯೊಂದು ಅನ್ನದ ಅಗುಳನ್ನು ಗೌರವಿಸೋಣ. ಪ್ರೀತಿಯಿಂದ ತಿನ್ನೋಣ. ಹೊಲದಲ್ಲಿ ಕಷ್ಟಪಟ್ಟು ಬೆಳೆಯನ್ನು ಬೆಳೆಯುವ ರೈತನ ಪರಿಶ್ರಮದ ಋಣವನ್ನು ಹೀಗಾದರೂ ತೀರಿಸೋಣ.

36. ಪ್ರಶ್ನೆಗಳು :

ಎ. ಮನುಷ್ಯರು ಯಾವುದಕ್ಕಾಗಿ ದುಡಿಯುತ್ತಾರೆಂದು ದಾಸರು ಹೇಳಿದ್ದಾರೆ?

ಬಿ. ಅಕ್ಷಮ್ಯ ಅಪರಾಧ ಯಾವುದು?

ಸಿ. ಹಸಿವಾದಾಗಲೇ ಉಣ್ಣ ಬೇಕು, ಏಕೆ?

ಡಿ. 'ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳು' ಎಂದು ಜನಪದರು ಏಕೆ ಹೇಳಿದ್ದಾರೆ?

**XII.** ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : **4 x 1 = 4**

37. ಗ್ರಂಥಾಲಯದ ಮಹತ್ವ

ಅಥವಾ

ಬಾಹ್ಯಾಕಾಶ ವಿಜ್ಞಾನ

**XIII.** ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **5 x 1 = 5**

38. ನಿಮ್ಮನ್ನು ರಾಯಚೂರು ಜಿಲ್ಲೆಯ ದೇವದುರ್ಗದ ನಿವಾಸಿ ನಿಶಾಂತ್ ಎಂದು ಭಾವಿಸಿಕೊಂಡು, ನಿಮ್ಮೂರಿನ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸುವಂತೆ ಕೋರಿ ಜಿಲ್ಲಾಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿನುತ ಎಂದು ಭಾವಿಸಿಕೊಂಡು, ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನೀವು ನಡೆಸುತ್ತಿರುವ ಸಿದ್ಧತೆಯನ್ನು ಕುರಿತು ಹಾನಗಲ್‌ನಲ್ಲಿ ವಾಸವಾಗಿರುವ ಶ್ರೀನಿವಾಸ ಎಂಬ ಹೆಸರಿನ ನಿಮ್ಮ ತಂದೆಯವರಿಗೆ ಒಂದು ಪತ್ರವನ್ನು ಬರೆಯಿರಿ.

********************

# 2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 2

# Academic Year 2023-24 Bengaluru North Dist. SSLC Practice Paper – 2

## 62K – ತೃತೀಯ ಭಾಷೆ – ಕನ್ನಡ

**ಸಮಯ : 3:00 ಗಂಟೆ** | **Time : 3:00 Hrs**

**ಗರಿಷ್ಠ ಅಂಕಗಳು : 80** | **Max. Marks : 80**

**ಒಟ್ಟು ಪ್ರಶ್ನೆಗಳು : 38** | **Total No of Questions : 38**

## ಮಾದರಿ ಉತ್ತರಗಳು

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 8 x 1 = 8 |
| 1. | ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳ ಸಂಖ್ಯೆ<br>(ಎ) 6    (ಬಿ) 9<br>(ಸಿ) 7    (ಡಿ) 2<br>ಉತ್ತರ : (ಬಿ) 9 | |
| 2. | ಕೆಳಗಿನವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ ಪದ<br>(ಎ) ವಸ್ತು    (ಬಿ) ಆಸಕ್ತಿ<br>( ಸಿ) ಧ್ವನಿ    (ಡಿ) ಅಮ್ಮ<br>ಉತ್ತರ : (ಡಿ) ಅಮ್ಮ | |
| 3. | ಶರೀಫರು ಗುರುವಿನ ಕೃಪೆಯನ್ನು ಪಡೆಯಲು ಮಂದಿರಗಳಿಗೆ ಹೋಗುತ್ತಿದ್ದರು. – ಇಲ್ಲಿ ದ್ವಿತೀಯಾ ವಿಭಕ್ತಿ ಪ್ರತ್ಯಯದಿಂದ ಕೂಡಿರುವ ಪದ<br>(ಎ) ಕೃಪೆಯನ್ನು    (ಬಿ) ಶರೀಫರು<br>(ಸಿ) ಗುರುವಿನ    (ಡಿ) ಮಂದಿರಗಳಿಗೆ<br>ಉತ್ತರ : (ಎ) ಕೃಪೆಯನ್ನು | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 4. | "ಗೌರಿಯ ಮುಖ ಕಮಲದಂತೆ ಅರಳಿತು" ಇಲ್ಲಿರುವ ಅಲಂಕಾರ<br>(ಎ) ಯಮಕ (ಬಿ) ರೂಪಕ<br>(ಸಿ) ಉಪಮ (ಡಿ) ದೃಷ್ಟಾಂತ<br>ಉತ್ತರ : (ಸಿ) ಉಪಮ | |
| 5. | ಕೆಳಗಿನವುಗಳಲ್ಲಿ ಸವರ್ಣದೀರ್ಘ ಸಂಧಿಗೆ ಉದಾಹರಣೆಯಾದ ಪದ<br>(ಎ) ರಕ್ಷಣೆಯನ್ನು (ಬಿ) ಜೀವವೊಂದು<br>(ಸಿ) ದೇಶಾಭಿಮಾನ (ಡಿ) ಧರ್ಮದುಸಿರು<br>ಉತ್ತರ : (ಸಿ) ದೇಶಾಭಿಮಾನ | |
| 6. | ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಲೇಖನ ಚಿಹ್ನೆ<br>(ಎ) ಉದ್ಧರಣ (ಬಿ) ಪ್ರಶ್ನಾರ್ಥಕ<br>(ಸಿ) ಭಾವಸೂಚಕ (ಡಿ) ಅಲ್ಪವಿರಾಮ<br>ಉತ್ತರ : (ಎ) ಉದ್ಧರಣ | |
| 7. | ಕೆಳಗಿನವುಗಳಲ್ಲಿ ತತ್ಸಮ ರೂಪಕ್ಕೆ ಉದಾಹರಣೆಯಾಗಿರುವ ಪದ<br>(ಎ) ಮೊಗ ( ಬಿ) ದೃಷ್ಟಿ<br>(ಸಿ) ಬಣ್ಣ (ಡಿ) ಚಣ<br>ಉತ್ತರ : (ಬಿ) ದೃಷ್ಟಿ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಧಗಧಗನೆ ಉರಿಯುತ್ತಿರುವ ಕಾಡ್ಗಿಚ್ಚಿಗೆ ಪ್ರಾಣಿಗಳು ಭಯದಿಂದ ಚೀರಿಚೀರಿ ಓಡಿಓಡಿ ಹೋದವು – ಈ ವಾಕ್ಯದಲ್ಲಿ ಬಂದಿರುವ ದ್ವಿರುಕ್ತಿ ಪದ<br>(ಎ) ಧಗಧಗನೆ (ಬಿ) ಚೀರಿಚೀರಿ<br>(ಸಿ) ಕಾಡ್ಗಿಚ್ಚಿಗೆ (ಡಿ) ಓಡಿಓಡಿ<br>ಉತ್ತರ : (ಡಿ) ಓಡಿಓಡಿ | |
| II. | ಸಂಬಂಧೀ ಪದ ಬರೆಯುವುದು ( ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 4 x 1 = 4 |
| 9. | ರಾಮಸಿಂಗನ ಕೈಯಲ್ಲಿ : ರಾಷ್ಟ್ರಧ್ವಜ :: ಕುಲಕರ್ಣಿಯ ಕೈಯಲ್ಲಿ : ________________<br>ಉತ್ತರ : ಪಿಸ್ತೂಲ್ | |
| 10. | ಬೆಳವಡಿಯ ರಾಣಿ : ಮಲ್ಲಮ್ಮಾಜಿ :: ಉಲ್ಲಾಳದ ರಾಣಿ : ________________<br>ಉತ್ತರ : ಅಬ್ಬಕ್ಕದೇವಿ | |
| 11. | ಕರದಲಿ : ಜಪಮಣಿ :: ಬಾಯಲಿ : ________________<br>ಉತ್ತರ : ಮಂತ್ರವು | |
| 12. | ಅಪ್ಪರಿಲ್ಲದೆ ಸೊಪ್ಪಾದೊ : ಈ ಭೂಮಿ :: ಸಪ್ಪೆ ದಂಟಾದೊ : ________________<br>ಉತ್ತರ : ದನಕರ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ.<br><br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 4 x 1 = 4 |
| 13. | ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗೆಗೆ ಗೊರೂರರಲ್ಲಿ ಯಾವ ವಿಚಾರವನ್ನು ಕೇಳಿ ತಿಳಿದುಕೊಂಡರು?<br><br>ಉತ್ತರ : ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗೆಗೆ ಗೊರೂರರಲ್ಲಿ ಸಂಬಳ ಸಾರಿಗೆ ವಿಚಾರವನ್ನು ಕೇಳಿ ತಿಳಿದುಕೊಂಡರು. | |
| 14. | .ರೈತನು ಯಾವ ಬೆಟ್ಟದಮೇಲೆ ಹೆಚ್ಚು ಮಳೆ ಸುರಿಯಬೇಕೆಂದು ಮಳೆದೇವರಲ್ಲಿ ಕೇಳುತ್ತಾನೆ?<br><br>ಉತ್ತರ : ರೈತನು ಭೈರವ ಬೆಟ್ಟದಮೇಲೆ ಹೆಚ್ಚು ಮಳೆ ಸುರಿಯಬೇಕೆಂದು ಮಳೆದೇವರಲ್ಲಿ ಕೇಳುತ್ತಾನೆ. | |
| 15. | ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ ಇರಬೇಕಾದ ಗುಣ ಯಾವುದು?<br><br>ಉತ್ತರ : ಪುಲಿಗೆರೆ ಸೋಮನಾಥ ಹೇಳಿರುವಂತೆ ಮಗನಾದವನಲ್ಲಿ ಇರಬೇಕಾದ ಗುಣ ವಿನಯ. | |
| 16 | ಯೋಗಿಯಾಗುವವನು ಏನನ್ನು ಜಯಿಸಬೇಕೆಂದು ಸೋಮೇಶ್ವರ ಶತಕದಲ್ಲಿ ಹೇಳಿದೆ?<br><br>ಉತ್ತರ : ಯೋಗಿಯಾಗುವವನು ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಜಯಿಸಬೇಕೆಂದು ಸೋಮೇಶ್ವರ ಶತಕದಲ್ಲಿ ಹೇಳಿದೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.<br><br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | 8 x 2 = 16 |
| 17. | ಮಿನಿಪೋಲೀಸ್ ನಗರದ ಪೋಲೀಸರು ಗೊರೂರರನ್ನು ಉಪಚರಿಸಿದ ಬಗೆ ಹೇಗೆ?<br><br>ಉತ್ತರ : ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಅವರಿಗೆ ರಾತ್ರಿ ಊಟಕ್ಕೆಂದು ಬ್ರೆಡ್, ಹಾಲು, ಹಣ್ಣು, ಬಿಸ್ಕತ್ತುಗಳನ್ನು ನೀಡಿದರು. ಮನೆಯ ಹಾಸಿಗೆಯು ಬಹಳ ದಿನಗಳಿಂದ ಬಳಸದೆ ಧೂಳು ತುಂಬಿತ್ತು. ತಮ್ಮ ವಶದಲ್ಲಿದ್ದ ಗಾಳಿ ಬೆಳಕುಗಳಿಂದ ಕೂಡಿದ ಸ್ವಚ್ಛಂದವಾದ ಲಾಕಪ್ಪಿನಲ್ಲಿ ಮಲಗಲು ಹೇಳಿ ಉಪಚರಿಸಿದರು. | |
| 18. | ಗಾಂಧೀಜಿಯವರು ಗೌರಮ್ಮನವರ ಮನೆಗೆ ಏಕೆ ಹೋದರು?<br><br>ಉತ್ತರ : ಗೌರಮ್ಮನವರು ಗಾಂಧೀಜಿಯವರ ಪರಮ ಅನುಯಾಯಿ ಆಗಿದ್ದರು. ಅವರು ತಮ್ಮ 21ನೆ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ ತಮ್ಮಂತಹ ಸಾಮಾನ್ಯ ಕುಟುಂಬದವರ ಮನೆಗೂ ಗಾಂಧೀಜಿಯವರು ಬರಬೇಕೆಂದು ಹಠವನ್ನು ಹಿಡಿದರು. ಕರ್ನಾಟಕ ಪ್ರವಾಸ ಕೈಕೊಂಡು ಕೊಡಗಿನಲ್ಲಿ ಎರಡು ದಿನಗಳ ಕಾಲ ತಂಗಿದ್ದ ಗಾಂಧೀಜಿಯವರು ಕೊಡಗಿನ ಕಿತ್ತಲೆ ಹಣ್ಣನ್ನು ನೀಡಿ ಉಪವಾಸವನ್ನು ಅಂತ್ಯಗೊಳಿಸಿದರು. ಅವರಿಗೆ ಕೊಟ್ಟ ಮಾತಿನಂತೆ ಗಾಂಧೀಜಿಯವರು ಗೌರಮ್ಮನವರ ಮನೆಗೆ ಹೋದರು. | |
| 19. | ಕೆಳದಿಯ ಚೆನ್ನಮ್ಮನು ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಲು ಕಾರಣವಾದ ಸನ್ನಿವೇಶವನ್ನು ವಿವರಿಸಿ.<br><br>ಉತ್ತರ : ಕೆಳದಿಯ ರಾಣಿ ಚೆನ್ನಮ್ಮ ಮೊಗಲರಿಗೆ ಅಂಜಿ ಓಡಿ ಬಂದ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿದಳು. ಈ ವಿಷಯ ತಿಳಿದ ಔರಂಗಜೇಬನು ತನ್ನ ಮಗ ಅಜಮತಾರನ ಜೊತೆ ದೊಡ್ಡ ಸೈನ್ಯವನ್ನು ಕೆಳದಿಯ ಮೇಲೆ ಧಾಳಿ ಮಾಡಲು ಕಳುಹಿಸಿದನು. ಚಾಣಾಕ್ಷಳಾದ ಚೆನ್ನಮ್ಮಾಜಿಯು ಮೊಗಲರ ಆಕ್ರಮಣದಿಂದ ಪಾರಾಗಲು, ಮೊಗಲ್ ಸೈನಿಕರಿಗೆ ಅನ್ನನೀರು ಸಿಗದಂತೆ ಮಾಡಲು ಬೆಟ್ಟಗುಡ್ಡಗಳ ಪ್ರದೇಶವಾದ ಭುವನಗಿರಿಗೆ ರಾಜಧಾನಿಯನ್ನು ಸ್ಥಳಾಂತರಿಸಿದಳು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಹೈಸ್ಕೂಲ್‌ನ ಗ್ರಂಥಾಲಯದಲ್ಲಿದ್ದ ಪುಸ್ತಕಗಳು ಬೀಚಿಯವರ ಮೇಲೆ ಯಾವ ಪ್ರಭಾವವನ್ನು ಬೀರಲಿಲ್ಲ,ಏಕೆ?<br><br>ಉತ್ತರ : ಹೈಸ್ಕೂಲಿನಲ್ಲಿದ್ದ ಗ್ರಂಥಾಲಯದ ದರ್ಶನ ಬೀಚಿಯವರಿಗೆ ಸರಸ್ವತಿ ಪೂಜೆಯಂದು ಮಾತ್ರವೇ ಆಗುತ್ತಿತ್ತು. ಬೀಗ ಹಾಕಿದ ಆ ಕಪಾಟುಗಳಿಗೆ ಅರಿಶಿನ, ಕುಂಕುಮ ಹಚ್ಚಿ ಪೂಜೆ ಆರತಿ ಮಾಡಿ, ತೆಂಗಿನಕಾಯಿ ಒಡೆದು ಚರುಪು ತಿನ್ನುತ್ತಿದ್ದರು. ಆದರೆ ಪುಸ್ತಕಗಳು ಮಾತ್ರ ಓದಲು ಸಿಗುತ್ತಿರಲಿಲ್ಲ. ಈ ಕಾರಣದಿಂದ ಹೈಸ್ಕೂಲಿನ ಗ್ರಂಥಾಲಯದಲ್ಲಿ ಇದ್ದ ಪುಸ್ತಕಗಳು ಬೀಚಿಯವರ ಮೇಲೆ ಯಾವ ಪ್ರಭಾವವನ್ನು ಬೀರಲಿಲ್ಲ. | |
| 21. | ಯುವಜನತೆಯ ಮಂತ್ರವನ್ನು ಕವಿ ಗೋಪಾಲಕೃಷ್ಣ ಅಡಿಗರು ಹೇಗೆ ವಿವರಿಸಿದ್ದಾರೆ?<br><br>ಉತ್ತರ : ನಡೆಯ ನುಡಿಯ ನೂರು ಗೋಡೆ ನಮ್ಮ ನಡುವೆ ಎದ್ದು ನಿಂತರೂ ನಾವೆಲ್ಲರೂ ಒಂದೇ ತಾಯ ಮಕ್ಕಳೆಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕು. ಜಾತಿಮತಗಳ ಅಂಧಕಾರದ ಗುಹೆಯಿಂದ ಹೊರಬಂದು ಪ್ರೀತಿವಿಶ್ವಾಸದಿಂದ ಮಾನವತೆಯ ವಿಸ್ತಾರದ ಬೆಳಕಿಗೆ ಸೇರಿಕೊಳ್ಳಬೇಕು. ಭೇದಭಾವದ ಅಲ್ಪತೆಯನ್ನು ಬಿಟ್ಟು ನಾವೆಲ್ಲರೂ ಒಂದೆ ಎಂಬ ಒಗ್ಗಟ್ಟಿನ ಮಂತ್ರವನ್ನು ಸಾರಬೇಕೆಂದು ಕವಿ ಹೇಳಿದ್ದಾರೆ. | |
| 22. | ಕವಿಯ ಆಶಯ ಕೆಡದಂತೆ ವಿಲಯರುದ್ರರು ಮಾಡುವ ಕೆಲಸವನ್ನು ವಿವರಿಸಿ.<br><br>ಉತ್ತರ : ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲವೆಂಬ ಭಾವನೆಯನ್ನು ಬೆಳೆಸಿಕೊಂಡು ವಿಶ್ವಮಾನವನಾಗಿ ಬಾಳಬೇಕು. ನಮ್ಮ ನಡುವೆ ಮನುಷ್ಯತ್ವವನ್ನು ಮೀರಿದ ಜಾತಿ ಮತಗಳ ಅಡ್ಡಗೋಡೆಗಳು ಬೆಳೆದು ನಿಂತಿವೆ. ಅವುಗಳನ್ನು ಪ್ರಳಯಕಾಲದ ರುದ್ರನಂತೆ ಇರುವ ಯುವಜನರು ಕುಟ್ಟಿ ಕೆಡುವಿಹಾಕುವ ಕೆಲಸವನ್ನು ಮಾಡುತ್ತಿದ್ದಾರೆ ಕವಿ ಹೇಳಿದ್ದಾರೆ. | |
| 23. | ಕವಿ ಸಿ.ಪಿ.ಕೆ ಯವರು ಗ್ರಂಥಾಲಯದಲ್ಲಿ ಭೀತವಿಸ್ಮಿತರಾಗಿ ನಿಂತಿದ್ದು ಏಕೆ?.<br><br>ಉತ್ತರ : ಕವಿ ಗ್ರಂಥಾಲಯದಲ್ಲಿ ಬೆಟ್ಟದ ಸಾಲುಗಳಂತೆ ಜೋಡಿಸಿಟ್ಟ ಗ್ರಂಥಗಳ ಸಾಲುಗಳನ್ನು ನೋಡಿ ಬೆರಗಾಗಿ ನಿಂತು ಬಿಟ್ಟರು. ಅಲ್ಲಿರುವ ಅಪಾರವಾದ ಗ್ರಂಥರಾಶಿಗಳ ಮುಂದೆ ಅವರ ಬುದ್ಧಿ ಮುದುಡಿಹೋಗಿ ಅಹಂಕಾರ ನುಚ್ಚುನೂರಾಗುತ್ತದೆ. ಪ್ರಾಚೀನ ಕವಿಗಳ, ಮಹಾತ್ಮರ, ಸಾಧಕರ ಪಳೆಯುಳಿಕೆಯಂತಿರುವ ಗ್ರಂಥಗಳ ಮೂಲವನ್ನು ಹುಡುಕವ ಪ್ರಯತ್ನ ಮಾಡುತ್ತಾರೆ. ಆಗ ಕುರುಕ್ಷೇತ್ರದಲ್ಲಿ ಅರ್ಜುನನಿಗೆ ಶ್ರೀಕೃಷ್ಣನು ವಿಶ್ವರೂಪವನ್ನು ತೋರಿಸಿದ ಹಾಗೆ ತತ್ತರಿಸಿ, ಭೀತವಿಸ್ಮಿತರಾಗಿ ನಿಲ್ಲುತ್ತಾರೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಧರ್ಮಪದನು ತನ್ನ ಭಾವನೆಯನ್ನು ಏಕೆ ಹತ್ತಿಕ್ಕಿಕೊಂಡನು?<br><br>ಉತ್ತರ : ತಂದೆಯಾದ ವಿಶುವಿಗೆ ತಾನು ಮಗನೆಂದು ತಿಳಿದರೆ "ಈ ಪೋರ ಏನು ಮಾಡಬಲ್ಲ? ಆತನಿಂದಾಗದು ಎನ್ನುವ ಭಾವನೆ ಬರಬಹುದು. ಮಗನ ಮುಂದೆ ತಾನು ಚಿಕ್ಕವನಾಗಿಬಿಟ್ಟೆನಲ್ಲ ಎಂಬ ನೋವಿನಿಂದ ನರಳಬಹುದು. ಅಮ್ಮ ಹೊರಡುವ ಮುನ್ನ ಕೊಟ್ಟ ಎಚ್ಚರಿಕೆಯ ಮಾತುಗಳು ನೆನಪಿಗೆ ಬಂದು ತನ್ನ ಭಾವನೆಗಳನ್ನು ಧರ್ಮಪದನು ಹತ್ತಿಕ್ಕಿಕೊಂಡನು. | |
| V. | ಸಂದರ್ಭಸಹಿತ ವಿವರಣೆ : | 2 x 3 = 6 |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು – ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ದೊರಕಿದಾ ಗುರು ದೊರಕಿದಾ ಸದ್ಗುರು"<br>ಉತ್ತರ :<br><br>ಆಯ್ಕೆ : ಈ ವಾಕ್ಯವನ್ನು ಆರ್ ಎಸ್ ಸುಂಕದ ಅವರು ಬರೆದಿರುವ 'ಶಿಶುನಾಳ ಶರೀಫ ಸಾಹೇಬರು' ಗದ್ಯದಿಂದ ಆರಿಸಲಾಗಿದೆ.<br><br>ಸಂದರ್ಭ : ಈ ಮಾತನ್ನು ಶರೀಫರು ತಮ್ಮ ಹಾಡಿನಲ್ಲಿ ಹೇಳಿಕೊಂಡಿದ್ದಾರೆ. ಶರೀಫರು ತಮ್ಮ ಗುರುಗಳ ಮಹಿಮೆಯನ್ನು ತಿಳಿಸುವಾಗ ಈ ಮಾತು ಬಂದಿದೆ.<br><br>ಸ್ವಾರಸ್ಯ : ಶರೀಫರ ಗುರು ಭಕ್ತಿಯನ್ನು ಕಾಣಬಹುದು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | "ಆಚಾರವೇ ಸ್ವರ್ಗ! ಅನಾಚಾರವೇ ನರಕ".<br>ಉತ್ತರ :<br>ಆಯ್ಕೆ: ಈ ವಾಕ್ಯವನ್ನು ಬಸವಣ್ಣನವರು ಬರೆದಿರುವ 'ಬಸವಣ್ಣನವರ ವಚನಗಳು' ಪದ್ಯದಿಂದ ಆರಿಸಲಾಗಿದೆ.<br>ಸಂದರ್ಭ: ಈ ಮಾತನ್ನು ಬಸವಣ್ಣನವರು ಹೇಳಿದ್ದಾರೆ. ಒಳ್ಳೆಯ ನಡವಳಿಕೆಯೇ ಸ್ವರ್ಗ ಮತ್ತು ಕೆಟ್ಟ ನಡವಳಿಕೆಯೇ ನರಕವೆಂದು ನಡೆ ನುಡಿಗಳ ಮಹತ್ವವನ್ನು ಕವಿ ತಿಳಿಸುವಾಗ ಈ ಮಾತು ಬಂದಿದೆ.<br>ಸ್ವಾರಸ್ಯ: ಸ್ವರ್ಗ–ನರಕಗಳು ನಮ್ಮ ನಡವಳಿಕೆಯಲ್ಲಿದೆ ಎಂಬುದಾಗಿ ತಿಳಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ. | |
| VI. | ಐದು – ಆರು ವಾಕ್ಯಗಳಲ್ಲಿ ಉತ್ತರಿಸುವುದು : | 4 x 3 = 12 |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ಶರೀಫರ ತತ್ವಪದಗಳ ವೈಶಿಷ್ಟ್ಯವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.<br>ಉತ್ತರ : ಸಂತಕವಿ ಶಿಶುನಾಳ ಶರೀಫರು ಸಾಮಾನ್ಯ ಜನರಿಗೂ ಅರ್ಥವಾಗುವಂತೆ ಮಾನವತೆಯ ತತ್ವಬೋಧನೆ ಮಾಡಿದ್ದಾರೆ. ತತ್ವವಿವೇಚನೆ, ಶಾಸ್ತ್ರಶ್ರವಣ ಉಚ್ಚಜನರ ಸೊತ್ತೆಂಬ ಮಾತನ್ನು ಶರೀಫರ ತತ್ವಪದಗಳು ಹುಸಿಯಾಗಿಸಿವೆ. ಶರೀಫರ ತತ್ವಪದಗಳನ್ನು ವೇದಶಾಸ್ತ್ರಗಳನ್ನ ಅರಿಯದವರೂ ಗುನುಗುಡುತ್ತಿರುತ್ತಾರೆ. ಮನೆಮನೆಗೂ ಅಲೆದಾಡಿ ಜೀವ ಹೊರೆಯುವ ದಾಸಯ್ಯಗಳು, ಭಿಕ್ಷುಕರು ಇಂಥ ತತ್ವಪದಗಳನ್ನು ಹಾಡುತ್ತಾರೆ. ಶ್ರೀಸಾಮಾನ್ಯನು ತನ್ನ ಜೀವನವನ್ನು ಸಾಫಲ್ಯಗೊಳಿಸಿಕೊಳ್ಳುವ ರಹಸ್ಯ ಈ ಹಾಡುಗಳಲ್ಲಿವೆ. ಶರೀಫರ ತತ್ವಪದಗಳ ಗತಿಗತ್ತುಗಳು ಜನಮನವನ್ನು ಗೆದ್ದು ಹತ್ತಿರವಾಗಿವೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಕಿತ್ತೂರು ರಾಣಿ ಚೆನ್ನಮ್ಮನ ಸ್ವಾಭಿಮಾನ ಮತ್ತು ದೇಶಾಭಿಮಾನವನ್ನು ವಿವರಿಸಿರಿ.<br><br>ಉತ್ತರ : ಬೆಳಗಾವಿ ಜಿಲ್ಲೆಯ ಕಿತ್ತೂರಿನ ರಾಣಿ ಚೆನ್ನಮ್ಮ ಬಲಾಢ್ಯ ಬ್ರಿಟಿಷರನ್ನು ಸೋಲಿಸಿದ ವೀರರಾಣಿ. ಸೆರೆಯಾಳುಗಳನ್ನು, ಮಹಿಳೆಯರು ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಂಡ ಕರುಣಾಮಯಿ. ಬ್ರಿಟಿಷರ ಆಡಳಿತವನ್ನು ವಿರೋಧಿಸಿ ತನ್ನ ಸಂಸ್ಥಾನವನ್ನು ಸ್ವತಂತ್ರವಾಗಿ ಮುನ್ನಡೆಸುತ್ತಿದ್ದಳು. ಕೋಪಗೊಂಡ ಬ್ರಿಟಿಷರು ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿ, ಮದ್ದಿನಲ್ಲಿ ಸೆಗಣಿ ಸೇರಿಸಿ ರಾಣಿ ಚೆನ್ನಮ್ಮಳ ತೋಪು ಹಾರದಂತೆ ಮಾಡಿ ಆಕೆಯನ್ನು ಮೋಸದಿಂದ ಸೆರೆಹಿಡಿದರು. ಸೆರೆಮನೆಯಲ್ಲಿ ಭೇಟಿಯಾಗಲು ಬಂದ ರಾಯಣ್ಣನು 'ತಾಯಿ' ಎಂದು ಕರೆದಾಗ ತಾಯಿ ಎಂದು ಕರೆದ ಕನ್ನಡದ ಕಂದ ಯಾರು? ಎಂದು ಕೇಳಿದ ಕೆಚ್ಚೆದೆಯ ರಾಣಿ. ನಿಮ್ಮ ಧಮನಿ ಧಮನಿಗಳಲ್ಲಿ ರಕ್ತದ ಕಣಗಳು ಇರುವವರೆಗೂ ಬ್ರಿಟಿಷರ ವಿರುದ್ಧ ಹೋರಾಡಿ ಎಂದು ಹುರಿದುಂಬಿಸಿದ ದೇಶಾಭಿಮಾನಿ ಕಿತ್ತೂರು ರಾಣಿ ಚೆನ್ನಮ್ಮ. | |
| 29. | 'ಜನಪದಗೀತೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.<br><br>ಉತ್ತರ : ಮಳೆ ಇಲ್ಲದೆ ಈ ಭೂಮಿ ಬರಡಾಗಿದೆ. ಮೇವು ನೀರಿಲ್ಲದ ದನಕರುಗಳು ಸೊರಗಿ ಹೋಗಿವೆ. ಅಪ್ಪ ಮಳೆರಾಯ ನೀ ಬಂದು ಕರುಣಿಸೋ ಎಂದು ಪ್ರಾರ್ಥಿಸುತ್ತಾನೆ. ಪೂರ್ವ ದಿಕ್ಕಿನ ಮಳೆಯ ಮೋಡದ ಚಂದ ಗೋಡೆಗೆ ಕಪ್ಪು ಬಣ್ಣ ಬಳಿದಂತೆ ಕಂಡು ಬಂದಿದೆ. ಆಕಾಶದಿಂದ ಇಳಿದು ಬರುವ ಮಳೆಹನಿಗಳ ಸದ್ದು ರೈತನಿಗೆ ಸಂತಸವನ್ನು ತಂದಿದೆ. ಪೂರ್ವ ದಿಕ್ಕಿನಿಂದ ಬರುವ ಸೋನೆಮಳೆಯು ಭೈರವ ಬೆಟ್ಟದ ಮೇಲೆ ಹೆಚ್ಚಾಗಿ ಸುರಿದು ಬರಬೇಕು. ಸ್ವಾತಿಮಳೆ ಬಂದು ಸಾವಿರಾರು ಕೆರೆಗಳು ತುಂಬಿತುಳಕಬೇಕು. ಆಗ ಕುಣಿಗಲು ಕೆರೆಯಲ್ಲಿ ಕುಚ್ಚಲು ಮೀನುಗಳ ಸಂತತಿ ಹೆಚ್ಚಾಗಿ ಲಾಭ ಬರುವಂತಾಗಲಿ ಎಂದು ರೈತನು ಮಳೆದೇವರನ್ನು ಪ್ರಾರ್ಥಿಸುತ್ತಾನೆ. ಇದೇ ಜನಪದಗೀತೆ ಪದ್ಯದ ಸಾರಾಂಶವಾಗಿದೆ. | |
| 30. | ಪುರಂದರದಾಸರು ಕಪಟ ಭಕ್ತಿಯ ಆರಾಧಕರನ್ನು ಅಣಕಿಸಿ ಅವಹೇಳನ ಮಾಡಿರುವ ಬಗೆಯನ್ನು ನೀವು ಏಕೆ ಮೆಚ್ಚುತ್ತೀರಿ? ವಿವರಿಸಿರಿ.<br><br>ಉತ್ತರ : ಕಪಟ ಭಕ್ತನು ಕೇವಲ ಹೊಟ್ಟೆಪಾಡಿಗಾಗಿ ನಟನೆಯ ಭಕ್ತಿಯನ್ನು ತೋರುತ್ತಾನೆ. ಉದಯಕಾಲದಲ್ಲಿ ಎದ್ದು ಗಡಗಡ ನಡುಗುತ ನದಿಯಲಿ ಮಿಂದೆನೆಂದು ಹಿಗ್ಗುತ್ತಾನೆ. ಮದ ಮತ್ಸರ ಕ್ರೋಧ ಮನಸ್ಸಿನಲ್ಲಿ ತುಂಬಿಕೊಂಡು ವೈರಾಗ್ಯಶಾಲಿಯಂತೆ ನಟಿಸಿ ಅಚ್ಚರಿ ತೋರುತ್ತಾನೆ. ಆತನ ಪೂಜೆ ವ್ಯಾಪಾರದ ಆಕರ್ಷಣೆಗಾಗಿ ದೇವರ ಮೂರ್ತಿಗಳ ಮುಂದೆ ದೀಪಗಳನ್ನು ಹಚ್ಚಿರುವ ಕಂಚುಗಾರನ ಬಿಡಾರಕ್ಕೆ ಸಮಾನ. ಇಂತಹ ಡಾಂಭಿಕ ಭಕ್ತನು ಕರದಲಿ ಜಪಮಣಿ, ಬಾಯಲಿ ಮಂತ್ರವನ್ನು ಹೇಳುತ್ತಾ ಪರಸತಿಯರ ಗುಣಗಾನ ಮಾಡುತ್ತಿರುತ್ತಾನೆ. ಆತನ ಭಕ್ತಿಯು ನಾಟಕ ಸ್ತ್ರೀಯು ತೋರುವ ಉದರ ವೈರಾಗ್ಯದ ಭಕ್ತಿಯಂತಿರುತ್ತದೆ ಎಂದು ದಾಸರು ಡಂಭಾಚಾರದ ಮತ್ತು ಕಪಟಭಕ್ತಿ ಆರಾಧಕರನ್ನು ಅಣಕಿಸುವಮೂಲಕ ಅವರ ತಪ್ಪುಗಳನ್ನು ತಿದ್ದುವ ಪ್ರಯತ್ನ ಮಾಡಿರುವುದರಿಂದ ನಾವು ಮೆಚ್ಚಬಹುದು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VII. | ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು : | 2 x 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | ಬೀಚಿ<br><br>ಉತ್ತರ : ಬೀಚಿ ಅವರು 1913 ರಂದು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಗ್ರಾಮದಲ್ಲಿ ಜನಿಸಿದರು. ಕೆನೆಮೊಸರು, ನೀವು ಕೇಳಿದಿರಿ, ಅಂದನಾ ತಿಂಮ, ತಿಂಮನ ತಲೆ, ಕನ್ನಡ ಎಂಮ್ಮೆ, ನನ್ನ ಭಯಾಗ್ರಫಿ, ಹನ್ನೊಂದನೆಯ ಅವತಾರ, ಬೆಳ್ಳಿ ತಿಂಮ ನೂರೆಂಟು ಹೇಳಿದ, ಸಾಹುಕಾರ ಸುಬ್ಬಮ್ಮ, ಸಂಪನ್ನರಿದ್ದಾರೆ ಎಚ್ಚರಿಕೆ ಇವರು ಬರೆದ ಕೃತಿಗಳು. | |
| 32. | ಸಿ.ಪಿ. ಕೃಷ್ಣಕುಮಾರ್<br><br>ಉತ್ತರ : ಸಿ.ಪಿ. ಕೃಷ್ಣಕುಮಾರ್ ಅವರು 1939 ರಂದು ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲ್ಲೂಕಿನ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದರು. ಅನಂತ ಪೃಥ್ವಿ, ತಾರಾಸಖ, ಸಾಹಿತ್ಯ ಪ್ರವೇಶ, ಕನ್ನಡ ನಾಗಾನಂದ ಬೊಗಸೆ, ವರ್ತಮಾನ, ಕಾವ್ಯಾರಾಧನೆ, ಅಂತರತಮ, ಜನಪದ ಸರಸ್ವತಿ, ಕನ್ನಡ ವೇಣೀಸಂಹಾರ ಇತ್ಯಾದಿ ಇವರು ಬರೆದ ಕೃತಿಗಳು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ) | 1 x 3 = 3 |
| 33. | "ಶಕ್ತಿಗಿಂತ ಯುಕ್ತಿ ಮೇಲು"<br>ಅಥವಾ<br>"ಬೆಳೆಯುವ ಪೈರು ಮೊಳಕೆಯಲ್ಲಿ" | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| | ಉತ್ತರ : "ಶಕ್ತಿಗಿಂತ ಯುಕ್ತಿ ಮೇಲು"<br><br>ಗಾದೆಯ ಮಹತ್ವ : ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br><br>ಅರ್ಥ ಮತ್ತು ವಿವರಣೆ : "ಶಕ್ತಿಗಿಂತ ಯುಕ್ತಿ ಮೇಲು" ಇದೊಂದು ಜನಪ್ರಿಯ ಗಾದೆಮಾತಾಗಿದೆ. 'ಶಕ್ತಿಗಿಂತ ಬುದ್ಧಿಬಲವೇ ಮೇಲು' ಎಂಬುದು ಇದರ ಅರ್ಥ. ಶಕ್ತಿಯಿಂದ ಸಾಧಿಸಲಾರದ್ದನ್ನು ಯುಕ್ತಿಯಿಂದ ಸಾಧಿಸಲು ಸಾಧ್ಯ. ಕೆಳದಿಯ ರಾಣಿ ಚೆನ್ನಮ್ಮ ಮೊಗಲ್ ಚಕ್ರವರ್ತಿ ಔರಂಗಜೇಬನನ್ನು ತನ್ನ ಯುಕ್ತಿಯಿಂದ ಸೋಲಿಸಿದ್ದು ಎಂಬುದು ನಮಗೆಲ್ಲ ತಿಳಿದ ವಿಷಯವೇ ಆಗಿದೆ. ಹಾಗೆಯೆ ಚಿಕ್ಕ ಮೊಲವೊಂದು ತನ್ನ ಯುಕ್ತಿಯಿಂದ ಬಲಶಾಲಿಯಾದ ಸಿಂಹವನ್ನು ಸೋಲಿಸಿದ ಕಥೆಯೊಂದು ಪಂಚತಂತ್ರದಲ್ಲಿದೆ. ಶಕ್ತಿಯ ಜೊತೆ ಯುಕ್ತಿಯು ಇದ್ದರೆ ಬಲಶಾಲಿಗಳನ್ನು ಸುಲಭವಾಗಿ ಗೆಲ್ಲಬಹುದು. ಈ ಹಿನ್ನೆಲೆಯಲ್ಲಿ ದೈಹಿಕ ಶಕ್ತಿಗಿಂತ ಮನಸ್ಸಿನ ಯುಕ್ತಿಯೇ ಶ್ರೇಷ್ಠ ಎಂಬುದೇ ಈ ಗಾದೆಯ ಅರ್ಥವಾಗಿದೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅಥವಾ<br>ಉತ್ತರ : "ಬೆಳೆಯುವ ಪೈರು ಮೊಳಕೆಯಲ್ಲಿ"<br><br>ಗಾದೆಯ ಮಹತ್ವ : ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br><br>ಅರ್ಥ ಮತ್ತು ವಿವರಣೆ : "ಬೆಳೆಯುವ ಪೈರು ಮೊಳಕೆಯಲ್ಲಿ" ಇದೊಂದು ಜನಪ್ರಿಯ ಗಾದೆಮಾತಾಗಿದೆ. ಬೆಳೆಯುವ ಸಸಿಯನ್ನು ನೋಡಿದಾಗಲೇ ಅದು ಮುಂದೆ ಎಂತಹ ಬೆಳೆಯನ್ನು ಕೊಡುತ್ತದೆ ಎಂಬುದು ತಿಳಿಯುತ್ತದೆ. ಹಾಗೆಯೇ ಬಾಲ್ಯದಲ್ಲಿ ಮಕ್ಕಳ ನಡೆನುಡಿಗಳನ್ನು ಗಮನಿಸಿದರೆ ಮುಂದೆ ಅವರು ಏನಾಗುತ್ತಾರೆ ಎಂಬುದನ್ನು ಅರಿಯಬಹುದು. ಕ್ರಿಕೆಟ್ ಆಟಗಾರ ಸಚಿನ್ ಜೀವನವೇ ಇದಕ್ಕೊಂದು ಉತ್ತಮ ಉದಾಹರಣೆ. ಮೊಳಕೆ ಚೆನ್ನಾಗಿದ್ದರೆ ಬೆಳೆ ಚೆನ್ನಾಗಿರುತ್ತದೆ. ಅದೇ ರೀತಿ ಮಕ್ಕಳು ಬಾಲ್ಯದಲ್ಲಿ ಉತ್ತಮ ಗುಣಗಳನ್ನು ಬೆಳೆಸಿಕೊಂಡರೆ ಮುಂದೆ ಅವರು ಉತ್ತಮ ವ್ಯಕ್ತಿಗಳಾಗುತ್ತಾರೆ ಎಂಬುದೇ ಈ ಗಾದೆಯ ಅರ್ಥವಾಗಿದೆ. | |
| IX. | ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : | 1 x 4 = 4 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 34. | ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು? ವಿವರಿಸಿರಿ.<br><br>ಅಥವಾ<br><br>ಕುಲಕರ್ಣಿ ಅವರಿಗೂ ರಾಮಸಿಂಗನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು? ವಿವರಿಸಿರಿ.<br><br>ಉತ್ತರ : ರಾಮಸಿಂಗನು ಮೋಹನಪುರದ ಉತ್ಸಾಹಿ ತರುಣ. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ಸರ್ವಸಿದ್ಧತೆ ನಡೆಸಿದ್ದಾನೆ. ಆ ದಿನದ ಬೆಳಗಿನ ಮೆರವಣಿಗೆಯನ್ನು ಮುನ್ನಡೆಸುವ ಅವಕಾಶ ಅವನಿಗೆ ಒದಗಿ ಬಂದಿದೆ. ಮೋಹನಪುರದ ಎರಡು ರಸ್ತೆಗಳು ಕೂಡುವ ಸ್ಥಳದಲ್ಲಿ ಜನ ಸೇರಿದ್ದಾರೆ. ಸ್ವಯಂ ಸೇವಕರು ಜಯಕಾರ ಕೂಗುತ್ತಾ ಬಂದು ಸೇರುವರು. ಇಬ್ಬರು ಶಿಪಾಯಿಗಳೊಂದಿಗೆ ಬಂದ ಕುಲಕರ್ಣಿ ಹೋರಾಟವನ್ನು ನಿಲ್ಲಿಸಿ ಚದುರಿ ಹೋಗುವಂತೆ ಆದೇಶಿಸುತ್ತಾನೆ. ಕುಲಕರ್ಣಿಯು ಪಿಸ್ತೂಲನ್ನು ತೋರಿಸಿ ರಾಮಸಿಂಗನಿಗೆ ರಾಷ್ಟ್ರಧ್ವಜವನ್ನು ಕೆಳಗಿಡುವಂತೆ ಹೇಳುವನು. ಈ ದೇಹದಲ್ಲಿ ಪ್ರಾಣವಿರುವವರೆಗೆ ಇದನ್ನು ಕೆಳಗಿಡಲಾರೆ ಕುಲಕರ್ಣಿಯೊಂದಿಗೆ ರಾಮಸಿಂಗನು ವಾದವಿವಾದವನ್ನು ಬೆಳೆಸುತ್ತಾನೆ. ಆಗ ಕೋಪಗೊಂಡ ಕುಲಕರ್ಣಿ ತನ್ನ ಅಧಿಕಾರ ದರ್ಪದಿಂದ ರಾಮಸಿಂಗನಮೇಲೆ ಗುಂಡು ಹಾರಿಸುತ್ತಾನೆ. ರಾಮಸಿಂಗನು ಸಾವಿಗೆ ಶರಣಾದರೂ ತನ್ನ ದೇಶಾಭಿಮಾನದಿಂದ ಛಲವನ್ನು ಸಾಧಿಸಿದನು.<br>.<br><br>**ಅಥವಾ**<br><br>ಕುಲಕರ್ಣಿ ಅವರಿಗೂ ರಾಮಸಿಂಗನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.<br><br>ಉತ್ತರ : ಇಬ್ಬರು ಶಿಪಾಯಿಗಳೊಂದಿಗೆ ಬಂದ ಕುಲಕರ್ಣಿ ಇಲ್ಲಿಂದ ಹೊರಟು ಹೋಗಿರಿ. ನನ್ನ ಸಿಟ್ಟು ನೆತ್ತಿಗೇರುತ್ತಿದೆ ಎನ್ನುವನು. ಅದಕ್ಕೆ ರಾಮಸಿಂಗನು ಅದನ್ನು ಇಳಿಸುವ ಮಾಂತ್ರಿಕರು ನಮ್ಮಲ್ಲಿದ್ದಾರೆ ಎಂದು ಹೇಳುವನು. ಕುಲಕರ್ಣಿಯು ಪಿಸ್ತೂಲನ್ನು ತೋರಿಸಿ ಹೆದರಿಸುತ್ತ, ರಾಷ್ಟ್ರಧ್ವಜವನ್ನು ಕೆಳಗಿಡುವಂತೆ ಹೇಳುವನು. ಈ ದೇಹದಲ್ಲಿ ಪ್ರಾಣವಿರುವವರೆಗೆ ಇದನ್ನು ಕೆಳಗಿಡಲಾರೆ ಎಂದು ಕುಲಕರ್ಣಿಯೊಂದಿಗೆ ರಾಮಸಿಂಗನು ವಾದವಿವಾದವನ್ನು ಬೆಳೆಸುತ್ತಾನೆ. ಕುಲಕರ್ಣಿಗೆ ರಾಮಸಿಂಗನು ಪಿಸ್ತೂಲಿನಿಂದ ಹೊಡೆಯುವ ಕ್ರೌರ್ಯವಿದೆಯೇ ನಿಮಗೆ? ಎಂದು ಪ್ರಶ್ನಿಸುವನು. ಕುಲಕರ್ಣಿ ನಮ್ಮದು ಪೊಲೀಸ್ ಡಿಪಾರ್ಟಮೆಂಟ್ ಎಂದಾಗ ರಾಮಸಿಂಗನು ಅದಕ್ಕೆ ಬೆಂಕಿ ಹಚ್ಚುವ ಡಿಪಾರ್ಟಮೆಂಟ್ ನಮ್ಮದು ಎನ್ನುವನು. ಹಟ ಮಾಡದೆ ಇಲ್ಲಿಂದ ಮೊದಲು ಹೊರಟುಹೋಗಿ ಎಂದು ಕುಲಕರ್ಣಿ ಹೇಳಿದಾಗ ಮೋಹನಪುರದಲ್ಲಿ ಒಂದು ಪಿಳ್ಳೆ ಜೀವಂತವಿರುವವರೆಗೆ, ನಿಮ್ಮ ಆಜ್ಞೆ ನಡೆಯಲಾರದು ಇಲ್ಲಿ ಎಂದು ಹೇಳುವ ಮೂಲಕ ರಾಮಸಿಂಗನು ತನ್ನ ಉತ್ಕಟವಾದ ದೇಶಾಭಿಮಾನವನ್ನು ವ್ಯಕ್ತಪಡಿಸುವನು. ಕುಲಕರ್ಣಿ ಅವರಿಗೂ ರಾಮಸಿಂಗನಿಗೂ ನಡೆದ ಸಂಭಾಷಣೆಯಾಗಿದೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| X.<br><br>35. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br><br>ನಾವು ––––––––––––––––––––––––––––––––––––<br>––––––––––––––––––––––––––––––––––––––––<br>––––––––––––––––––––––––––––––––––––––––<br>–––––––––––––––––––––––––––––––––––– ಇಂದೆ<br>ಅಥವಾ<br><br>ಕರ್ನಾಟಕ ––––––––––––––––––––––––––––––––––<br>––––––––––––––––––––––––––––––––––––––––<br>––––––––––––––––––––––––––––––––––––––––<br>–––––––––––––––––––––––––––––––––––– ಒಂದೆ<br><br>ಉತ್ತರ :<br><br>ನಾವು ನೀವು ಅವರು ಇವರು<br>ಒಂದೆ ಒಂದೆ ಒಂದೆ<br>ಭೂಮಿ ತಾಯ ಕುಡಿಗಳೆಂದು<br>ಪಣವ ತೊಡಿರಿ ಇಂದೆ<br><br>ಅಥವಾ<br><br>ಕರ್ನಾಟಕ ವಂಗ ಆಂಧ್ರ<br>ಭಾರತೀಯರೊಂದೆ<br>ಪೂರ್ವೋತ್ತರ ಪಡು ತೆಂಕಣ<br>ಗಾಳಿ ಮುಗಿಲು ಒಂದೆ | 1 x 4 = 4 |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XI.<br><br><br><br><br><br><br><br><br><br><br><br>36. | ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :<br><br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ)<br><br>ಅನ್ನ ದೇವರಿಗೆ ಸಮಾನ, ಅನ್ನದಿಂದಲೇ ಮನಷ್ಯನಿಗೆ ಶಕ್ತಿ. ಅನ್ನಕ್ಕಾಗಿ ಮನುಷ್ಯ ದುಡಿಯುವುದು. ಅದಕ್ಕೆಂದೇ ದಾಸರು ಹೇಳಿದ್ದಾರೆ "ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂದು. ಪ್ರಪಂಚದಲ್ಲಿ ಹಲವರು ತುತ್ತು ಅನ್ನಕ್ಕಾಗಿ ಹಪಹಪಿಸುತ್ತಾರೆ. ಭಿಕ್ಷೆ ಬೇಡುತ್ತಾರೆ. ಅನ್ನ ಸಿಕ್ಕಿತೆಮದು ನಾಲ್ಕು ಹೊತ್ತಿನದು ಒಂದೇ ಬಾರಿಗೆ ತಿನ್ನಲೂ ಸಾಧ್ಯವಿಲ್ಲ. ಹಸಿದ ಸಮಯಕ್ಕೆ ಉಣ್ಣಬೇಕು. ಹಸಿದಾಗ ಉಂಡರೆ ಅನ್ನ ಅಮೃತವೆನಿಸುವುದು. ರುಚಿಸುವುದು. ಹಿತವೆನಿಸುವುದು. ಆದರೆ ಉಂಡ ನಂತರ ಏನನ್ನಾದರೂ ಒತ್ತಾಯ ಪೂರ್ವಕವಾಗಿ ನೀಡಿದರೆ ಅದು ವಾಕರಿಕೆಯೆನಿಸುತ್ತದೆ. ಬೇಡವೆನಿಸುತ್ತದೆ. ಅದಕ್ಕೆಂದೇ ಜನಪದರು "ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳು" ಎಂದಿದ್ದಾರೆ. ಹಸಿದವರಿಗೆ ಉಣಬಡಿಸಿದರೆ, ಭಿಕ್ಷೆ ನೀಡಿದರೆ ಸಾರ್ಥಕವಾಗುತ್ತದೆ. ಕೆಲವರು ಊಟ ಮಾಡುವ ಆಟವಾಡುತ್ತಾರೆ. ಅನ್ನದೇವತೆಯನ್ನು ತಿಪ್ಪೆಗೆ ಎಸೆಯುವ ನೀಚ ಕಾರ್ಯ ಮಾಡುತ್ತಾರೆ. ಇದು ಅಕ್ಷಮ್ಯ ಅಪರಾಧ. ಪ್ರತಿಯೊಂದು ಅನ್ನದ ಅಗುಳನ್ನು ಗೌರವಿಸೋಣ. ಪ್ರೀತಿಯಿಂದ ತಿನ್ನೋಣ. ಹೊಲದಲ್ಲಿ ಕಷ್ಟಪಟ್ಟು ಬೆಳೆಯನ್ನು ಬೆಳೆಯುವ ರೈತನ ಪರಿಶ್ರಮದ ಋಣವನ್ನು ಹೀಗಾದರೂ ತೀರಿಸೋಣ.<br><br>ಪ್ರಶ್ನೆಗಳು :<br><br>ಎ. ಮನುಷ್ಯರು ಯಾವುದಕ್ಕಾಗಿ ದುಡಿಯುತ್ತಾರೆಂದು ದಾಸರು ಹೇಳಿದ್ದಾರೆ?<br>ಉತ್ತರ : ಮನುಷ್ಯರು ಅನ್ನಕ್ಕಾಗಿ ದುಡಿಯುತ್ತಾರೆಂದು ದಾಸರು ಹೇಳಿದ್ದಾರೆ?<br><br>ಬಿ. ಅಕ್ಷಮ್ಯ ಅಪರಾಧ ಯಾವುದು?<br>ಉತ್ತರ : ಅನ್ನದೇವತೆಯನ್ನು ತಿಪ್ಪೆಗೆ ಎಸೆಯುವ ನೀಚ ಕಾರ್ಯ ಮಾಡುತ್ತಾರೆ. ಇದು ಅಕ್ಷಮ್ಯ ಅಪರಾಧ.<br><br>ಸಿ. ಹಸಿವಾದಾಗಲೇ ಉಣ್ಣ ಬೇಕು, ಏಕೆ?<br>ಉತ್ತರ : ಹಸಿದಾಗ ಉಂಡರೆ ಅನ್ನ ಅಮೃತವೆನಿಸುವುದು. ರುಚಿಸುವುದು. ಹಿತವೆನಿಸುವುದು. | 4 x 1 = 4 |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಡಿ. ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳು' ಎಂದು ಜನಪದರು ಏಕೆ ಹೇಳಿದ್ದಾರೆ?<br><br>ಉತ್ತರ : ಉಂಡ ನಂತರ ಏನನ್ನಾದರೂ ಒತ್ತಾಯ ಪೂರ್ವಕವಾಗಿ ನೀಡಿದರೆ ಅದು ವಾಕರಿಕೆಯೆನಿಸುತ್ತದೆ. ಹಾಗಾಗಿ ಜನಪದರು ಹೊಟ್ಟೆ ತುಂಬಿದ ಮೇಲೆ ಹುಗ್ಗಿ ಮುಳ್ಳು ಎಂದಿದ್ದಾರೆ. | |
| XI. | ಪ್ರಬಂಧ ಬರವಣಿಗೆ : | 1x 4 = 4 |
| 37. | ಗ್ರಂಥಾಲಯದ ಮಹತ್ವ<br><br>ಅಥವಾ<br><br>ಬಾಹ್ಯಾಕಾಶ ವಿಜ್ಞಾನ | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಗ್ರಂಥಾಲಯದ ಮಹತ್ವ :<br><br>ಉತ್ತರ :<br><br>ಪೀಠಿಕೆ : ವಿದ್ಯೆ ಎಂಬ ಸಾಗರದಲ್ಲಿ ಮುತ್ತುಗಳಂತೆ ಇರುವುದೇ ಗ್ರಂಥಾಲಯ. ಅನೇಕ ಪುಸ್ತಕಗಳನ್ನು ಒಂದೆಡೆ ಸಂಗ್ರಹಿಸಿಡುವ ಸ್ಥಳವೇ ಗ್ರಂಥಾಲಯ. ಮಾನವನ ದೇಹಕ್ಕೆ ಗಾಳಿ, ನೀರು, ಆಹಾರಗಳು ಅಗತ್ಯವಾಗಿರುವಂತೆ ನಮ್ಮ ಮನಸ್ಸೆಂಬ ಯಂತ್ರಕ್ಕೆ ಜ್ಞಾನ ಬೇಕೇಬೇಕು.<br><br>ವಿಷಯ ನಿರೂಪಣೆ : ಗ್ರಂಥಾಲಯದಲ್ಲಿ ಸಾರ್ವಜನಿಕ ಗ್ರಂಥಾಲಯ, ಶೈಕ್ಷಣಿಕ ಗ್ರಂಥಾಲಯ, ಸಂಚಾರಿ ಗ್ರಂಥಾಲಯ ಮೊದಲಾದ ವಿಧಗಳಿವೆ. ಜನಸಾಮಾನ್ಯರ ಓದಿನ ಅಭಿರುಚಿ ತಕ್ಕಂತೆ ಪುಸ್ತಕಗಳನ್ನು ಒದಗಿಸುವುದೇ ಸಾರ್ವಜನಿಕ ಗ್ರಂಥಾಲಯ. ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿಯೊಂದಿಗೆ ಪುಸ್ತಕಗಳನ್ನು ನೀಡುವುದೇ ಶೈಕ್ಷಣಿಕ ಗ್ರಂಥಾಲಯ. ವಾಹನಗಳ ಮೂಲಕ ಜನರಿಗೆ ಪುಸ್ತಕಗಳನ್ನು ಒದಗಿಸುವ ಗ್ರಂಥಾಲಯಗಳೇ ಸಂಚಾರಿ ಗ್ರಂಥಾಲಯ. ಇಂದು ನಗರ, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಗ್ರಂಥಾಲಯಗಳನ್ನು ಕಾಣಬಹುದು. ಇವು ಎಲ್ಲರಿಗೂ ಉಚಿತವಾಗಿ ಓದುವ ಅವಕಾಶವನ್ನು ಒದಗಿಸಿವೆ. ಜನರಿಗೆ ಜ್ಞಾನವನ್ನು ಹಂಚುತ್ತವೆ. ಶಾಲಾ ಕಾಲೇಜುಗಳಲ್ಲಿ ಮಕ್ಕಳ, ಶಿಕ್ಷಕರ ಪಾಲಿಗೆ ಹಣತೆಯಂತಿದೆ. ಇಲ್ಲಿ ವಿಜ್ಞಾನ, ಇತಿಹಾಸ, ಸಾಹಿತ್ಯ, ಧರ್ಮ, ಕ್ರೀಡೆ, ಸಂಸ್ಕೃತಿ, ಕಾನೂನು ಮೊದಲಾದ ವಿಷಯಗಳ ಪುಸ್ತಕಗಳಿರುತ್ತವೆ. ಜೊತೆಗೆ ದಿನಪತ್ರಿಕೆಗಳು ಇರುತ್ತವೆ.<br><br>ಉಪಸಂಹಾರ : ಗ್ರಂಥಾಲಯಗಳಿಲ್ಲದ ಶಾಲೆಗಳು ದೇವರಿಲ್ಲದ ಗುಡಿಯಂತಿರುತ್ತವೆ. ಈ ಮಾತು ಅಕ್ಷರ ಸಹ ಸತ್ಯವೆಂಬುದನ್ನು ನಾವೆಲ್ಲರೂ ಒಪ್ಪಲೇಬೇಕು. ಅವು ಸಿಹಿನೀರಿನ ಸರೋವರಗಳಂತಿವೆ ಎಂಬುದರಲ್ಲಿ ಎರಡು ಮಾತಿಲ್ಲ.<br><br>**ಅಥವಾ** | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಬಾಹ್ಯಾಕಾಶ ವಿಜ್ಞಾನ :**<br><br>**ಉತ್ತರ :**<br><br>**ಪೀಠಿಕೆ : ಇತ್ತೀಚಿನ ದಿನಗಳಲ್ಲಿ ಭಾರತೀಯ ವಿಜ್ಞಾನಿಗಳು ಅನೇಕ ರೀತಿಯ ಹೊಸ ಹೊಸ ಪ್ರಯೋಗಗಳನ್ನು ನಡೆಸಿ ನಾನಾ ರೀತಿಯ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಚಂದ್ರ ಮತ್ತು ಮಂಗಳ ಗ್ರಹಗಳ ಮೇಲೆ ಉಪಗ್ರಹದ ಮೂಲಕ ಕಾಲಿಟ್ಟಿದ್ದು ಒಂದು ದೊಡ್ಡ ಸಾಧನೆಯೇ ಸರಿ. ಅಲ್ಲಿಯ ವಾತಾವರಣ ಸನ್ನಿವೇಶಗಳ ಬಗ್ಗೆ ವಿವರಣೆಗಳನ್ನು ಉಪಗ್ರಹದ ಮೂಲಕ ತಿಳಿಯಲಾಗುತ್ತಿದೆ. ಇತ್ತೀಚೆಗಷ್ಟೇ ಚಂದ್ರಯಾನ–3 ಯಶಸ್ವಿ ಉಡಾಯನದಿಂದ ಬಾಹ್ಯಾಕಾಶ ವಿಜ್ಞಾನದಲ್ಲಿ ಭಾರತ ದೇಶ ದೊಡ್ಡ ಮೈಲುಗಲ್ಲು ಸಾಧಿಸಿ ಇಡೀ ಪ್ರಪಂಚವೇ ನಮ್ಮ ದೇಶದ ಕಡೆಗೆ ಕಣ್ಣುಬಿಟ್ಟು ನೋಡುವಂತಾಗಿದೆ.**<br><br>**ವಿಷಯ ನಿರೂಪಣೆ : ನಮ್ಮ ವಿಜ್ಞಾನಿಗಳು ಇನ್ನೂ ಸಾಕಷ್ಟು ಇಂತಹ ಆವಿಷ್ಕಾರಗಳನ್ನು ಮಾಡಿ ಇಡೀ ಪ್ರಪಂಚಕ್ಕೆ ಮಾದರಿಯಾಗಬೇಕು. ಪ್ರೊ. ಸಿ.ಎನ್. ಆರ್. ರಾವ್ ಅವರಿಗೆ 'ಭಾರತರತ್ನ' ಎಂಬ ಉನ್ನತ ಪ್ರಶಸ್ತಿಯನ್ನು ಕಳೆದ ವರ್ಷವಷ್ಟೆ ಕೊಟ್ಟು ಭಾರತ ಸರ್ಕಾರ ಅವರನ್ನು ಗೌರವಿಸಿದೆ. ಇತ್ತೀಚಿಗಷ್ಟೆ ಎಸ್.ಜೆ.ಸಿ.ಇಂಜಿನಿಯರಿಂಗ್ ಕಾಲೇಜಿನ ಯುವ ವಿಜ್ಞಾನಿ ಕ್ಷುದ್ರಗ್ರಹ ಒಂದನ್ನು ಕಂಡು ಹಿಡಿದು ಪ್ರಪಂಚವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಾರೆ. ಈ ವಿಜ್ಞಾನಿಗಳು ಮುಂದೆಯೂ ದೇಶದ ಬೆನ್ನೆಲುಬಾಗಿ ನಿಂತು, ಬಾಹ್ಯಾಕಾಶದಲ್ಲಿ ಹೊಸ ಹೊಸ ಆವಿಷ್ಕಾರ ಮಾಡುವಂತಾಗಬೇಕು.**<br><br>**ಉಪಸಂಹಾರ : ಬೆಂಗಳೂರು ಮತ್ತು ಶ್ರೀ ಹರಿಕೋಟಾದಲ್ಲಿ ಎರಡು ಬಾಹ್ಯಾಕಾಶ ಸಂಶೋಧನಾ ಕೇಂದ್ರಗಳು ಮತ್ತು ಹಾಸನದಲ್ಲಿ ನಿಯಂತ್ರಣ ಕೇಂದ್ರವು ಸ್ಥಾಪನೆಯಾಗಿವೆ. ಇಸ್ರೋದ ಅಧ್ಯಕ್ಷರಾಗಿದ್ದ ಡಾ॥ ಯು.ಆರ್.ರಾವ್, ಡಾ॥ ಕೆ.ಕಸ್ತೂರಿ ರಂಗನ್ ಮತ್ತು ಇತ್ತೀಚೆಗೆ ಅಧ್ಯಕ್ಷರಾಗಿ ಬಂದ ಸೋಮನಾಥ್ ಅವರುಗಳು ಪ್ರಪಂಚದ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿಗಳಾಗಿದ್ದಾರೆ. ಅವರ ಸಾಧನೆ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ.** | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XII. | **ಪತ್ರಲೇಖನ ಬರೆಯುವುದು :** | **1 x 5 = 5** |
| 38. | ನಿಮ್ಮನ್ನು ರಾಯಚೂರು ಜಿಲ್ಲೆಯ ದೇವದುರ್ಗದ ನಿವಾಸಿ ನಿಶಾಂತ್ ಎಂದು ಭಾವಿಸಿಕೊಂಡು, ನಿಮ್ಮೂರಿನ ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸುವಂತೆ ಕೋರಿ ಜಿಲ್ಲಾಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.<br>**ಅಥವಾ**<br>ನಿಮ್ಮನ್ನು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿನುತ ಎಂದು ಭಾವಿಸಿಕೊಂಡು, ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನೀವು ನಡೆಸುತ್ತಿರುವ ಸಿದ್ಧತೆಯನ್ನು ಕುರಿತು ಹಾನಗಲ್‌ನಲ್ಲಿ ವಾಸವಾಗಿರುವ ಶ್ರೀನಿವಾಸ ಎಂಬ ಹೆಸರಿನ ನಿಮ್ಮ ತಂದೆಯವರಿಗೆ ಒಂದು ಪತ್ರವನ್ನು ಬರೆಯಿರಿ.<br>**ವ್ಯಾವಹಾರಿಕ ಪತ್ರ :** | |
| | **ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ** | **1 ಅಂಕ** |
| | **ಪತ್ರದ ಒಡಲು** | **2 ಅಂಕಗಳು** |
| | **ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ** | **1 ಅಂಕ** |
| | **ವಿನ್ಯಾಸ, ಭಾಷಾಶೈಲಿಗೆ** | **1 ಅಂಕ** |
| | **ಒಟ್ಟು** | **5ಅಂಕಗಳು** |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರ : ವಾವಹಾರಿಕ ಪತ್ರ :<br><br>ಇವರಿಂದ, ದಿನಾಂಕ : 02/06/2023<br>ನಿಶಾಂತ್, ಸ್ಥಳ : ರಾಯಚೂರು.<br>ದೇವದುರ್ಗ,<br>ರಾಯಚೂರು.<br><br>ಇವರಿಗೆ,<br>ಮಾನ್ಯ ಅಧ್ಯಕ್ಷರು,<br>ಜಿಲ್ಲಾಪಂಚಾಯಿತಿ,<br>ರಾಯಚೂರು.<br><br>ಮಾನ್ಯರೇ,<br><br>ವಿಷಯ : ಒಳಚರಂಡಿ ವ್ಯವಸ್ಥೆಯನ್ನು ಸರಿಪಡಿಸುವಂತೆ ಕೋರಿ.<br>* * *<br>ನಿಶಾಂತ್ ಆದ ನಾನು ದೇವದುರ್ಗದ ನಿವಾಸಿ. ನಮ್ಮ ಗ್ರಾಮದಲ್ಲಿ ಒಳಚರಂಡಿಗಳು ತುಂಬಾ ಹಾಳಾಗಿವೆ. ಚರಂಡಿಯ ಕೊಳಕು ನೀರು ರಸ್ತೆಯ ಮೇಲೆ ಹರಿಯುತ್ತಿದೆ. ಇದರಿಂದ ಅಲ್ಲಲ್ಲಿ ನೀರು ನಿಂತು ಕೆಟ್ಟವಾಸನೆ ಬರುತ್ತಿದೆ. ಅಲ್ಲದೆ ಸೊಳ್ಳೆಗಳು ಹೆಚ್ಚಾಗಿ ಜನರಿಗೆ ರೋಗರುಜಿನಗಳು ಹೆಚ್ಚಾಗುತ್ತಿದೆ. ಸ್ವಚ್ಛ ಪರಿಸರವಿದ್ದಾಗ ಮಾತ್ರ ಉತ್ತಮ ಆರೋಗ್ಯವಿರಲು ಸಾಧ್ಯ. ಹಾಗಾಗಿ ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಹಾಳಾದ ಒಳಚರಂಡಿಯನ್ನು ದುರಸ್ತಿ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.<br><br>ವಂದನೆಗಳೊಂದಿಗೆ,<br><br>ತಮ್ಮ ವಿಶ್ವಾಸಿ<br>ಸಹಿ/–<br>(ನಿಶಾಂತ್) | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವೈಯಕ್ತಿಕ ಪತ್ರ : | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2ಅಂಕಗಳು |
| | ಗೆ, ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರ : ವೈಯಕ್ತಿಕ ಪತ್ರ :<br><br>ಕ್ಷೇಮ ಶ್ರೀ ಇವರಿಂದ,<br>ವಿನುತ,<br>10ನೇ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ಚಳ್ಳಕೆರೆ, ಚಿತ್ರದುರ್ಗ.<br>ದಿನಾಂಕ : 26/12/2023<br><br>ತೀರ್ಥರೂಪರವರಿಗೆ ನಿಮ್ಮ ಪ್ರೀತಿಯ ಮಗಳು ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.<br><br>ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ನಮ್ಮ ಶಾಲೆಯಲ್ಲಿ ಎಲ್ಲಾ ವಿಷಯಗಳಲ್ಲಿ ಪಾಠಗಳನ್ನು ಮುಗಿಸಿ ಪುನರಾವರ್ತನೆಯನ್ನು ಮಾಡುತ್ತಿದ್ದಾರೆ. ಅರ್ಧವಾರ್ಷಿಕ ಪರೀಕ್ಷೆಯಲ್ಲಿ ಉತ್ತಮವಾದ ಅಂಕಗಳನ್ನು ಪಡೆದಿರುವುದು ನನ್ನ ಭರವಸೆಯನ್ನು ಹೆಚ್ಚಿಸಿದೆ. ಶಿಕ್ಷಕರ ಮಾರ್ಗದರ್ಶನದಂತೆ ಓದುವ ವೇಳಾಪಟ್ಟಿ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದೇನೆ. ನನ್ನ ಅನುಮಾನ ಮತ್ತು ಗೊಂದಲಗಳನ್ನು ಶಿಕ್ಷಕರೊಂದಿಗೆ ಚರ್ಚಿಸಿ ಪರಿಹರಿಸಿಕೊಳ್ಳುತ್ತಿದ್ದೇನೆ. ಜನವರಿ ಮತ್ತು ಫೆಬ್ರವರಿಯಲ್ಲಿ ನಡೆಯಲಿರುವ ಪೂರ್ವಸಿದ್ಧತಾ ಪರೀಕ್ಷೆಗಳಿಗೆ ಅಣಿಯಾಗುತ್ತಿದ್ದೇನೆ. ಆತ್ಮವಿಶ್ವಾಸದಿಂದ ಅಂತಿಮ ವಾರ್ಷಿಕ ಪರೀಕ್ಷೆಯನ್ನು ಎದುರಿಸಿ ಉತ್ತಮ ಅಂಕಗಳನ್ನು ಪಡೆಯುತ್ತೇನೆ ಎಂಬ ನಂಬಿಕೆ ನನಗಿದೆ. ಇನ್ನೇನು ವಿಷಯವಿಲ್ಲ.<br><br>ಮನೆಯಲ್ಲಿ ತಾಯಿಯವರಿಗೂ ನನ್ನ ನಮಸ್ಕಾರವನ್ನು ತಿಳಿಸಿ.<br><br>ಇಂತಿ ನಿಮ್ಮ ಪ್ರೀತಿಯ ಮಗ<br>ಸಹಿ/–<br>(ವಿನುತ)<br><br>ಇವರಿಗೆ,<br>ಶ್ರೀನಿವಾಸ<br>ದೇವಾಲಯ ರಸ್ತೆ,<br>ಹಾನಗಲ್. | |

# 2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 3
## Academic Year 2023-24 Bengaluru North Dist. SSLC Practice Paper – 3
## 62K – ತೃತೀಯ ಭಾಷೆ – ಕನ್ನಡ

**ಸಮಯ : 3:00 ಗಂಟೆ** | **Time : 3:00 Hrs**
**ಗರಿಷ್ಠ ಅಂಕಗಳು : 80** | **Max. Marks : 80**
**ಒಟ್ಟು ಪ್ರಶ್ನೆಗಳು : 38** | **Total No of Questions : 38**

---

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **8 x 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳ ಸಂಖ್ಯೆ

   (ಎ) 7 (ಬಿ) 6

   (ಸಿ) 5 (ಡಿ) 9

2. ಒಂದೇ ಕ್ರಿಯಾಪದದೊಡನೆ ಸ್ವತಂತ್ರ ಮತ್ತು ಖಚಿತ ಅರ್ಥಕೊಡುವ ವಾಕ್ಯವೇ

   (ಎ) ಅಧೀನವಾಕ್ಯ (ಬಿ) ಮಿಶ್ರವಾಕ್ಯ

   (ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ

3. ಸರಸರ ಹರಿಯುವ ಹಾವನ್ನು ನೋಡಿದ ಜನರು ಗಾಬರಿಯಿಂದ ಬೇಗಬೇಗ ಸುತ್ತಮುತ್ತ ಓಡೋಡಿ ಹೋದರು – ಈ ವಾಕ್ಯದಲ್ಲಿ ಬಂದಿರುವ ಅನುಕರಣಾವ್ಯಯ ಶಬ್ದ

   (ಎ) ಬೇಗಬೇಗ (ಬಿ) ಸುತ್ತಮುತ್ತ

   (ಸಿ) ಸರಸರ (ಡಿ) ಓಡೋಡಿ

4. 'ಬೆಳಕು' ಪದದ ವಿರುದ್ಧಾರ್ಥಕ ಪದ

   (ಎ) ಹಗಲು (ಬಿ) ಕತ್ತಲು

   (ಸಿ) ಮುಂಜಾನೆ (ಡಿ) ಕಿರಣ

5. ಕೆಳಗಿನವುಗಳಲ್ಲಿ ಕರ್ಮಧಾರೆಯ ಸಮಾಸಕ್ಕೆ ಉದಾಹರಣೆಯಾದ ಪದ

(ಎ) ತತ್ವಪದ (ಬಿ) ಕಾವ್ಯವಾಚನ

(ಸಿ) ಹೆಗ್ಗುರಿ (ಡಿ) ಚಕ್ರಾಕಾರ

6. ಕೆಳಗಿನವುಗಳಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯವಿರುವ ಪದ

(ಎ) ಮಡಿಕೇರಿಯಲ್ಲಿ (ಬಿ) ಮನೆಯ

(ಸಿ) ಮಾತುಗಾರಿಕೆಯನ್ನು (ಡಿ) ಪೀಳಿಗೆಯವರು

7. 'ಕವಿ' ಪದದ ತದ್ಭವ ರೂಪ

(ಎ) ಕಬಿನಿ (ಬಿ) ಕಬ್ಬು

(ಸಿ) ಕಬ್ಬ (ಡಿ) ಕಬ್ಬಿಗ

8. ಕೆಳಗಿನವುಗಳಲ್ಲಿ ಅನ್ವರ್ಥಕನಾಮಕ್ಕೆ ಉದಾಹರಣೆಯಾದ ಪದ

(ಎ) ದೇಶ (ಬಿ) ವಿದ್ವಾಂಸ

(ಸಿ) ಪರ್ವತ (ಡಿ) ಮನುಷ್ಯ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : **4 x 1 = 4**

9. ಭಾರತದ ನಾಣ್ಯ : ರೂಪಾಯಿ :: ಅಮೆರಿಕಾದ ನಾಣ್ಯ : ––––––––––

10. ಬೀಚಿಯವರ ತಿಂಮ : ಬೆಡ್‌ಲ್ಯಾಂಪ್ :: ಗುಂಡಪ್ಪನವರ ತಿಂಮ : –––––––––––

11. ಹಳೆಯ ಕೊಳೆಯ : ಕಳೆವೆವು :: ನವವ ಶುಭವ : –––––––––––

12. ಕಂದ ವೃತ್ತ ತ್ರಿಪದಿ ವಚನ : ರಸಕವಿತ್ವ ಒಂದೆ :: ಬಾಣ ಬಿರುಸು ಕುಂಡ ಹಣತೆ : –––––––––––

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 4 x 1 = 4

13. ಕನ್ನಡದ ದೀಕ್ಷೆಯನ್ನು ಬೀಚಿಯವರು ಸ್ವೀಕರಿಸಿದ ಶುಭಮುಹೂರ್ತ ಯಾವುದು?

14. ರೈತನು ಮಳೆಯನ್ನು ಏನೆಂದು ಕರೆದಿದ್ದಾನೆ?

15. ಧರ್ಮಪದನ ತಂದೆ ಯಾರು?

16. ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 x 2 = 16

17. ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಕಾರಣವೇನು?

18. ಗಾಂಧೀಜಿಯವರು ಅವಾಕ್ಕಾಗಲು ಕಾರಣವಾದ ಘಟನೆಯನ್ನು ಕುರಿತು ಬರೆಯಿರಿ.

19. "ಅರಿಯದ ಬಾಲಕನನ್ನು ಅಡ್ಡದಾರಿಗೆ ಎಳೆದು ಅವರ ಬದುಕನ್ನು ಹಾಳು ಮಾಡಿದಿರಿ" ಎಂದು ಕುಲಕರ್ಣಿಯು ಸೋಮಣ್ಣನಿಗೆ ಹೇಳಿದ ಸನ್ನಿವೇಶವನ್ನು ವಿವರಿಸಿ.

20. 'ವಿಶ್ವಾಮಿತ್ರ ಸೃಷ್ಟಿ' ಬೀಚಿಯವರ ಮೇಲೆ ಹೇಗೆ ಪ್ರಭಾವ ಬೀರಿತು?

21. ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೇ ಎಂದು ನಿಸಾರ್ ಅಹಮದ್ ಅವರು ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ.

22. ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಯಾಗಿಡುವುದು ಹೇಗೆ ಎಂದು ಬಸವಣ್ಣನವರು ಹೇಳಿದ್ದಾರೆ?

23. ದೇವಲೋಕ, ಮರ್ತ್ಯಲೋಕವೆಂಬುದು ಬೇರೆ ಎಲ್ಲೂ ಇಲ್ಲವೆಂಬುದನ್ನು ಬಸವಣ್ಣನವರು ಹೇಗೆ ತಿಳಿಸಿದ್ದಾರೆ?

24. ಸೋಮೇಶ್ವರ ಶತಕದಲ್ಲಿ ಕವಿ ಯಾವ ಗುಣವನ್ನು ಹೊಂದಿದವರು ಯಾವ ಹೆಸರಿಗೆ ಅರ್ಹರಾಗುತ್ತಾರೆ ಎಂಬುದನ್ನು ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ

V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 x 3 = 6

25 "ನೀವು ದಯಮಾಡಿ ಇದನ್ನು ಓದಿ ನಿಮ್ಮ ಅಭಿಪ್ರಾಯವನ್ನು ಹೇಳಿ"

26. "ಪರಸತಿ ಪರಧನಕ್ಕಾಗಿ ಚಿಂತಿಸುತೆ".

VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 x 3 = 12

27. ಮಿನಿಪೊಲೀಸ್ ನಗರದಲ್ಲಿ ಗೊರೂರರಿಗೆ ಎದುರಾದ ಸಮಸ್ಯೆಗಳನ್ನು ವಿವರಿಸಿರಿ.

28. ಶಿವಾಜಿಯು ಮಲ್ಲಮ್ಮಾಜಿಯೊಂದಿಗೆ ರಾಜಿಮಾಡಿಕೊಂಡ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

29. ಜಾತಿ, ಮತ, ಕುಲಗಳ ಗೋಡೆಯನ್ನು ಕೆಡುಹಬೇಕಾದ ಹೊಸತಲೆಮಾರಿನ ಉತ್ಸಾಹವನ್ನು ನೀವು ಏಕೆ ಮೆಚ್ಚುತ್ತೀರಿ? ವಿವರಿಸಿರಿ.

30. ಗ್ರಂಥಾಲಯದ ಬಗ್ಗೆ ಕವಿ ವ್ಯಕ್ತಪಡಿಸಿರುವ ಭಾವನೆಗಳನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : 2 x 3 = 6

31. ಆರ್. ಎಸ್. ಸುಂಕದ

32. ಕೆ. ಎಸ್. ನಿಸಾರ್ ಅಹಮದ್

VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 x 3 = 3

33. "ದೇಶ ಸುತ್ತು : ಕೋಶ ಓದು"

ಅಥವಾ

"ಮಾಡಿದ್ದು ಉಣ್ಣೋ ಮಹಾರಾಯ"

**IX.** ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **1 x 4 = 4**

34. ಶರೀಫರು ಮತ್ತು ಗೋವಿಂದ ಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಕರ್ಬಲಾ ಮತ್ತು ಅಲಾವಿ ಆಚರಣೆಗಳನ್ನು ಕುರಿತು ಬರೆಯಿರಿ.

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : **1 x 4 = 4**

35.

ಕಳಬೇಡ, ಕೊಲಬೇಡ, ---------------------------
-------------------------------------------
-------------------------------------------
-------------------------------------------
--------------------------- ದೇವರನೊಲಿಸುವ ಪರಿ

ಅಥವಾ

ದೇವಲೋಕ, ಮರ್ತ್ಯಲೋಕ ----------------------
-------------------------------------------
-------------------------------------------
-------------------------------- ನೀವೇ ಪ್ರಮಾಣು.

**XI.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **4 x 1 = 4**

ಡಾ.ಎಸ್.ರಾಧಾಕೃಷ್ಣನ್ ಅವರ ಬಾಹ್ಯರೂಪ ಎತ್ತರವಾದ ನಿಲುವು, ಬಿಸ್ಕೆಟ್ ಬಣ್ಣದ ರೇಷ್ಮೆಯ ನಿಲುವಂಗಿ, ಶುಭ್ರವೂ ನಿರಾಡಂಬರವೂ ಆದ ಬಿಳಿಯ ಪಂಚೆ ಮತ್ತು ರುಮಾಲು ಅವರ ವೇಷಭೂಷಣಗಳಾಗಿತ್ತು. ಕೋಪಸೂಚಕವಲ್ಲದ ಹುಬ್ಬು, ಯಾವುದೋ ಸಮಸ್ಯೆಯ ಒಳಹೋಗುವಂತಿರುವ ಕಣ್ಣನೋಟ, ಮುಗುಳುನಗೆಯ ಸುಳಿವು ಇವು ಭಾರತೀಯರೆಲ್ಲರಿಗೂ ಪರಿಚಿತ. ಪ್ರಪಂಚದ ಫ್ಯಾಷನ್ ಎಷ್ಟೇ ಬದಲಾದರೂ ರಾಧಾಕೃಷ್ಣನ್ ತಮ್ಮ ವೇಷಭೂಷಣಗಳನ್ನು ಕೊನೆಯವರೆಗೂ ಜತನವಾಗಿ ಉಳಿಸಿಕೊಂಡರು. ಉಪರಾಷ್ಟ್ರಪತಿಯ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಅನಂತರ ರಾಷ್ಟ್ರಪತಿ ಸ್ಥಾನಕ್ಕೆ ಸರ್ವಾನುಮತದಿಂದ ನಾಮಕರಣ ಮಾಡಲಾಯಿತು. ಅವರಿಗೆ ಬರುತ್ತಿದ್ದ ಹತ್ತುಸಾವಿರ ರೂಪಾಯಿಗಳ ವೇತನದಲ್ಲಿ ಎರಡು ಸಾವಿರದ ಐನೂರು ರೂಪಾಯಿಗಳನ್ನು ಮಾತ್ರ ಪಡೆದು ಉಳಿದ ಹಣವನ್ನು ಪ್ರಧಾನಮಂತ್ರಿಗಳ ಪರಿಹಾರ ನಿಧಿಗೆ ವಂತಿಗೆಯಾಗಿ ನೀಡುತ್ತಿದ್ದರು. ಇವರ ಸ್ಮರಣೀಯ ಸೇವೆಯನ್ನು ಗುರುತಿಸಿ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ'ನೀಡಿ ಗೌರವಿಸಿತು. ಶ್ರೇಷ್ಠ ಶಿಕ್ಷಣ ತಜ್ಞ, ಮಹಾ ತತ್ವಜ್ಞಾನಿ, ಮಾನವತಾವಾದಿಯಾಗಿ ಬಹುಮುಖ ಪ್ರತಿಭೆಯಿಂದ ವಿಶ್ವವಿಖ್ಯಾತರಾದರು.

36. ಪ್ರಶ್ನೆಗಳು :

ಎ. ಡಾ. ರಾಧಾಕೃಷ್ಣನ್ ತಮ್ಮ ವೇತನದ ಹಣವನ್ನು ಏನು ಮಾಡುತ್ತಿದ್ದರು?

ಬಿ. ಡಾ. ರಾಧಾಕೃಷ್ಣನ್ ಅವರ ವೇಷಭೂಷಣ ಯಾವುದಾಗಿತ್ತು?

ಸಿ. ರಾಧಾಕೃಷ್ಣನ್ ಅವರಿಗೆ ಸಂದ ಅತ್ಯುನ್ನತ ಪ್ರಶಸ್ತಿ ಯಾವುದು?

ಡಿ. ರಾಧಾಕೃಷ್ಣನ್ ಅವರು ಯಾವ ಯಾವ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು?

**XII.** ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : **4 x 1 = 4**

37. ಇಂದಿನ ಶಿಕ್ಷಣದಲ್ಲಿ ಗಣಕಯಂತ್ರದ ಪಾತ್ರ

ಅಥವಾ

ದೂರದರ್ಶನದ ಒಳಿತು ಮತ್ತು ಕೆಡುಕುಗಳು

**XIII.** ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **5 x 1 = 5**

38. ನಿಮ್ಮನ್ನು ತಿಪಟೂರಿನ ಶೆಟ್ಟಿಗೆರೆ ಗ್ರಾಮದ ನಿವಾಸಿ ಮನ್ವಿತ್ ಎಂದು ಭಾವಿಸಿಕೊಂಡು, ನಿಮ್ಮ ಊರಿನ ಹಾಳಾದ ರಸ್ತೆಗಳನ್ನು ಸರಿಪಡಿಸುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಕುಮಟಾದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ದಿಯಾ ಎಂದು ಭಾವಿಸಿಕೊಂಡು, ಶಾಲಾ ಪ್ರವಾಸಕ್ಕೆ ಹೋಗಲು 1000 ರೂಪಾಯಿಗಳನ್ನು ನೀಡುವಂತೆ ಕೋರಿ ಹರಿಹರದಲ್ಲಿ ವಾಸವಾಗಿರುವ ವೀರನಾರಾಯಣ ಎಂಬ ಹೆಸರಿನ ನಿಮ್ಮ ತಂದೆಯವರಿಗೆ ಒಂದು ಪತ್ರವನ್ನು ಬರೆಯಿರಿ.

********************

**2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 3**

**Academic Year 2023-24 Bengaluru North Dist. SSLC Practice Paper – 3**

**62K – ತೃತೀಯ ಭಾಷೆ – ಕನ್ನಡ**

ಸಮಯ : 3:00 ಗಂಟೆ — Time : 3:00 Hrs

ಗರಿಷ್ಠ ಅಂಕಗಳು : 80 — Max. Marks : 80

ಒಟ್ಟು ಪ್ರಶ್ನೆಗಳು : 38 — Total No of Questions : 38

## ಮಾದರಿ ಉತ್ತರಗಳು

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 8 x 1 = 8 |
| 1. | ಕನ್ನಡ ವರ್ಣಮಾಲೆಯಲ್ಲಿರುವ ದೀರ್ಘಸ್ವರಗಳ ಸಂಖ್ಯೆ<br>(ಎ) 7 (ಬಿ) 6<br>(ಸಿ) 5 (ಡಿ) 9<br>ಉತ್ತರ : (ಎ) 7 | |
| 2. | ಒಂದೇ ಕ್ರಿಯಾಪದದೊಡನೆ ಸ್ವತಂತ್ರ ಮತ್ತು ಖಚಿತ ಅರ್ಥಕೊಡುವ ವಾಕ್ಯವೇ<br>(ಎ) ಅಧೀನವಾಕ್ಯ (ಬಿ) ಮಿಶ್ರವಾಕ್ಯ<br>(ಸಿ) ಸಂಯೋಜಿತ ವಾಕ್ಯ (ಡಿ) ಸಾಮಾನ್ಯ ವಾಕ್ಯ<br>ಉತ್ತರ : ಡಿ) ಸಾಮಾನ್ಯ ವಾಕ್ಯ | |
| 3. | ಸರಸರ ಹರಿಯುವ ಹಾವನ್ನು ನೋಡಿದ ಜನರು ಗಾಬರಿಯಿಂದ ಬೇಗಬೇಗ ಸುತ್ತಮುತ್ತ ಓಡೋಡಿ ಹೋದರು – ಈ ವಾಕ್ಯದಲ್ಲಿ ಬಂದಿರುವ ಅನುಕರಣಾವ್ಯಯ ಶಬ್ದ<br>(ಎ) ಬೇಗಬೇಗ (ಬಿ) ಸುತ್ತಮುತ್ತ<br>(ಸಿ) ಸರಸರ (ಡಿ) ಓಡೋಡಿ<br>ಉತ್ತರ : (ಸಿ) ಸರಸರ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 4. | 'ಬೆಳಕು' ಪದದ ವಿರುದ್ಧಾರ್ಥಕ ಪದ<br><br>(ಎ) ಹಗಲು (ಬಿ) ಕತ್ತಲು<br>(ಸಿ) ಮುಂಜಾನೆ (ಡಿ) ಕಿರಣ<br><br>ಉತ್ತರ : (ಬಿ) ಕತ್ತಲು | |
| 5. | ಕೆಳಗಿನವುಗಳಲ್ಲಿ ಕರ್ಮಧಾರೆಯ ಸಮಾಸಕ್ಕೆ ಉದಾಹರಣೆಯಾದ ಪದ<br><br>(ಎ) ತತ್ವಪದ (ಬಿ) ಕಾವ್ಯವಾಚನ<br>(ಸಿ) ಹೆಗ್ಗುರಿ (ಡಿ) ಚಕ್ರಾಕಾರ<br><br>ಉತ್ತರ : (ಸಿ) ಹೆಗ್ಗುರಿ | |
| 6. | ಕೆಳಗಿನವುಗಳಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯವಿರುವ ಪದ<br><br>(ಎ) ಮಡಿಕೇರಿಯಲ್ಲಿ (ಬಿ) ಮನೆಯ<br>(ಸಿ) ಮಾತುಗಾರಿಕೆಯನ್ನು (ಡಿ) ಪೀಳಿಗೆಯವರು<br><br>ಉತ್ತರ : (ಎ) ಮಡಿಕೇರಿಯಲ್ಲಿ | |
| 7. | 'ಕವಿ' ಪದದ ತದ್ಭವ ರೂಪ<br><br>(ಎ) ಕಬಿನಿ (ಬಿ) ಕಬ್ಬು<br>(ಸಿ) ಕಬ್ಬ (ಡಿ) ಕಬ್ಬಿಗ<br><br>ಉತ್ತರ : (ಡಿ) ಕಬ್ಬಿಗ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಕೆಳಗಿನವುಗಳಲ್ಲಿ ಅನ್ವರ್ಥಕನಾಮಕ್ಕೆ ಉದಾಹರಣೆಯಾದ ಪದ<br>(ಎ) ದೇಶ (ಬಿ) ವಿದ್ವಾಂಸ<br>(ಸಿ) ಪರ್ವತ (ಡಿ) ಮನುಷ್ಯ<br>ಉತ್ತರ : (ಬಿ) ವಿದ್ವಾಂಸ | 4 x 1 = 4 |
| II. | ಸಂಬಂಧೀ ಪದ ಬರೆಯುವುದು ( ಪ್ರತಿ ಸರಿ ಉತ್ತರಕ್ಕೆ 1 ಅಂಕ) : | |
| 9. | ಭಾರತದ ನಾಣ್ಯ : ರೂಪಾಯಿ :: ಅಮೆರಿಕಾದ ನಾಣ್ಯ : ________<br>ಉತ್ತರ : ಡಾಲರು | |
| 10. | ಬೀಚಿಯವರ ತಿಂಮ : ಬೆಡ್‌ಲ್ಯಾಂಪ್ :: ಗುಂಡಪ್ಪನವರ ತಿಂಮ : ________<br>ಉತ್ತರ : ಸೂರ್ಯ | |
| 11. | ಹಳೆಯ ಕೊಳೆಯ : ಕಳೆವೆವು :: ನವವ ಶುಭವ : ________<br>ಉತ್ತರ : ಬೆಳೆವೆವು | |
| 12. | ಕಂದ ವೃತ್ತ ತ್ರಿಪದಿ ವಚನ : ರಸಕವಿತ್ವ ಒಂದೆ :: ಬಾಣ ಬಿರುಸು ಕುಂಡ ಹಣತೆ : ________<br>ಉತ್ತರ : ಬೆಳಕ ಸತ್ವ ಒಂದೆ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ.<br>( ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 4 x 1 = 4 |
| 13. | ಕನ್ನಡದ ದೀಕ್ಷೆಯನ್ನು ಬೀಚಿಯವರು ಸ್ವೀಕರಿಸಿದ ಶುಭಮುಹೂರ್ತ ಯಾವುದು?<br>ಉತ್ತರ : ಅ.ನ.ಕೃ ರವರ ಸಂಧ್ಯಾರಾಗ ಪುಸ್ತಕವನ್ನು ಓದಿದಾಗ ಕನ್ನಡದಲ್ಲಿಯೂ ಒಳ್ಳೊಳ್ಳೆ ಬರಹರಾಗಿದ್ದಾರೆ ತಿಳಿದು ಕನ್ನಡದ ದೀಕ್ಷೆಯನ್ನು ಬೀಚಿಯವರು ಸ್ವೀಕರಿಸಿದರು. | |
| 14. | ರೈತನು ಮಳೆಯನ್ನು ಏನೆಂದು ಕರೆದಿದ್ದಾನೆ?<br>ಉತ್ತರ : ರೈತನು ಮಳೆಯನ್ನು ಅಪ್ಪನೆಂದು ಕರೆದಿದ್ದಾನೆ. | |
| 15. | ಧರ್ಮಪದನ ತಂದೆ ಯಾರು?<br>ಉತ್ತರ : ಧರ್ಮಪದನ ತಂದೆ ವಿಶು. | |
| 16 | ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ ಯಾವುದು?<br>ಉತ್ತರ : ವಿಶುವಿನ ಎದೆಯಲ್ಲಿ ತನ್ನ ಮಗ ಮಹಾಶಿಲ್ಪಿ ಎಂಬ ಪದ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿತ್ತು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.<br><br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | 4 x 1 = 4 |
| 17. | ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಕಾರಣವೇನು?<br><br>ಉತ್ತರ : ಪೊಲೀಸರ ಮನೆಯ ಹಾಸಿಗೆ ಬಹಳ ದಿನಗಳಿಂದ ಬಳಸದೆ ಧೂಳಾಗಿತ್ತು. ಅವರ ವಶದಲ್ಲಿದ್ದ ಲಾಕಪ್ ಗಾಳಿ ಬೆಳಕು ಕ್ರಿಮಿನಾಶಕ ಸಾರಣೆಯಿಂದ ಸ್ವಚ್ಛಂದವಾಗಿತ್ತು. ಅಲ್ಲದೆ ಅಲೆಮಾರಿ ಖೈದಿಯನ್ನು ಮನೆಯಲ್ಲಿ ಇರಿಸಿಕೊಳ್ಳುವುದು ಅಲ್ಲಿನ ಕಾನೂನಿನ ಪ್ರಕಾರ ಅಪರಾಧ. ಹಾಗಾಗಿ ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಿದರು. | |
| 18. | ಗಾಂಧೀಜಿಯವರು ಅವಾಕ್ಕಾಗಲು ಕಾರಣವಾದ ಘಟನೆಯನ್ನು ಕುರಿತು ಬರೆಯಿರಿ.<br><br>ಉತ್ತರ : ಗೌರಮ್ಮನವರು ಗಾಂಧೀಜಿಯವರು ಸ್ಥಾಪಿಸಿದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ನಿಧಿಗೆ ತಮ್ಮ ಮಂಗಳಸೂತ್ರ, ಕಿವಿಯ ಓಲೆ ಹಾಗೂ ಮೂಗು ಬೊಟ್ಟಿನ ಹೊರತಾಗಿ ಉಳಿದೆಲ್ಲಾ ಒಡವೆಗಳನ್ನು ಗಾಂಧೀಜಿಯವರ ಕೈಗೆ ಕೊಟ್ಟಾಗ ಅವರು ಅವಾಕ್ಕಾದರು. | |
| 19. | "ಅರಿಯದ ಬಾಲಕನನ್ನು ಅಡ್ಡದಾರಿಗೆ ಎಳೆದು ಅವರ ಬದುಕನ್ನು ಹಾಳು ಮಾಡಿದಿರಿ" ಎಂದು ಕುಲಕರ್ಣಿಯು ಸೋಮಣ್ಣನಿಗೆ ಹೇಳಿದ ಸನ್ನಿವೇಶವನ್ನು ವಿವರಿಸಿ.<br><br>ಉತ್ತರ : ಕುಲಕರ್ಣಿಯ ಆಜ್ಞೆಯನ್ನು ವಿರೋಧಿಸಿ, ಮಾತಿಗೆ ಪ್ರತಿ ಮಾತುಗಳನ್ನು ಆಡಿದ ರಾಮಸಿಂಗನನ್ನು ಕುಲಕರ್ಣಿಯು ಗುಂಡಿಕ್ಕಿ ಕೊಂದನು. ಅಲ್ಲಿಗೆ ಬಂದ ಸೋಮಣ್ಣನು ಆ ಕೃತ್ಯವನ್ನು ಖಂಡಿಸುವನು. ಕುಲಕರ್ಣಿಯು ನನ್ನ ಆಜ್ಞೆಯನ್ನು ಮೀರಿದ್ದಕ್ಕಾಗಿ ಅವನನ್ನು ಕೊಲ್ಲಬೇಕಾಯಿತು ಎಂದು ಹೇಳುವನು. ಆಗ ಸೋಮಣ್ಣನು ದುಶ್ಚಟಗಳಿಂದ ದೂರವಿರುವ, ಸ್ವಚ್ಛತೆಯನ್ನು ಪಾಲಿಸುವ ಆಜ್ಞೆ ಮಾಡಿದರೆ ಅಕ್ಷರಶ: ಪಾಲಿಸುತ್ತೇವೆ. ಅದು ಬಿಟ್ಟು ಪಾರತಂತ್ರ್ಯದ ಕೆಸರಿನಲ್ಲಿ ಕೊಳೆಯುತ್ತಲಿರಿ ಎಂದು ಆಜ್ಞೆ ಮಾಡಿದರೆ ಹಿತಕರ ಆಜ್ಞೆಯಲ್ಲವೆಂದು ಹೇಳುವನು. ಆಗ ಕುಲಕರ್ಣಿಯು ಅರಿಯದ ಬಾಲಕನನ್ನು ಅಡ್ಡದಾರಿಗೆಳೆದು ಅವರ ಬದುಕನ್ನು ಹಾಳು ಮಾಡದಿರಿ ಎಂದು ಹೇಳಿದನು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ‘ವಿಶ್ವಾಮಿತ್ರ ಸೃಷ್ಟಿ’ ಬೀಚಿಯವರ ಮೇಲೆ ಹೇಗೆ ಪ್ರಭಾವ ಬೀರಿತು?<br><br>ಉತ್ತರ : ಬೀಚಿಯವರ ಅಣ್ಣ ಪ್ರೊ. ಜಹಗೀರದಾರರ (ಆದ್ಯ ರಂಗಾಚಾರ್ಯರ) ವಿಶ್ವಾಮಿತ್ರ ಸೃಷ್ಟಿಯ ಎರಡು ಸಂಪುಟಗಳನ್ನು ತಂದುಕೊಟ್ಟರು. ಅವು ಬೀಚಿಯವರನ್ನು ಬಹು ಬೇಗ ಸೆರೆಹಿಡಿದವು. ಆಚಾರ್ಯರ ಮಾತಿನ ಚಮತ್ಕಾರ, ವಿಚಾರ ಮಂಡನೆ, ಕಲಾಕುಶಲತೆಗೆ ಬೀಚಿಯವರು ಮಾರು ಹೋದರು. ಒಂದೇ ಮಾತಿನಲ್ಲಿ ಹೇಳುವುದಾದರೆ ವಿಶ್ವಾಮಿತ್ರ ಸೃಷ್ಟಿ ಬೀಚಿಯವರ ತಲೆಯನ್ನೇ ಗೆದ್ದಿತು. | |
| 21. | ಭೌಗೋಳಿಕವಾಗಿ ಭಾರತೀಯರೆಲ್ಲಾ ಒಂದೇ ಎಂದು ನಿಸಾರ್ ಅಹಮದ್ ಅವರು ಹೇಗೆ ನಿರೂಪಿಸಿದ್ದಾರೆ?<br><br>ವಿವರಿಸಿರಿ.<br><br>ಉತ್ತರ : ಕರ್ನಾಟಕ, ವಂಗ, ಆಂಧ್ರ ಇವು ಭಾರತ ದೇಶದ ಬೇರೆ ಬೇರೆ ರಾಜ್ಯಗಳೇ ಆದರೂ ಅಲ್ಲಿರುವ ಜನರೆಲ್ಲರೂ ಭಾರತೀಯರೇ ಆಗಿದ್ದಾರೆ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಈ ಎಲ್ಲಾ ದಿಕ್ಕುಗಳಿಗೂ ಪಂಚಭೂತಗಳಾದ ಗಾಳಿ, ಮುಗಿಲು ಒಂದೆ ಎನ್ನುವ ಮೂಲಕ ಭೌಗೋಳಿಕವಾಗಿ ಭಾರತೀಯರೆಲ್ಲ ಒಂದೇ ಎಂದು ನಿಸಾರ್ ಅಹಮದ್ ನಿರೂಪಿಸಿದ್ದಾರೆ. | |
| 22. | ಅಂತರಂಗ ಮತ್ತು ಬಹಿರಂಗವನ್ನು ಶುದ್ಧಿಯಾಗಿಡುವುದು ಹೇಗೆ ಎಂದು ಬಸವಣ್ಣನವರು ಹೇಳಿದ್ದಾರೆ?<br><br>ಉತ್ತರ : ಕಳ್ಳತನ, ಕೊಲೆಯನ್ನು ಮಾಡಬಾರದು. ಸುಳ್ಳನ್ನು ಹೇಳಬಾರದು, ಯಾರ ಮೇಲೂ ಕೋಪಿಸಿಕೊಳ್ಳಬಾರದು. ಇತರರ ಬಗ್ಗೆ ಅಸಹ್ಯಪಡಬಾರದು. ತನ್ನನ್ನು ಬಣ್ಣಿಸಿಕೊಳ್ಳಬಾರದು, ಬೇರೆಯವರನ್ನು ನಿಂದಿಸಬಾರದು. ಆಗ ನಮ್ಮ ಅಂತರಂಗ ಬಹಿರಂಗಗಳು ಶುದ್ಧಯಾಗಿಡಬಹುದೆಂದು ಬಸವಣ್ಣನವರು ಹೇಳಿದ್ದಾರೆ. | |
| 23. | ದೇವಲೋಕ, ಮರ್ತ್ಯಲೋಕವೆಂಬುದು ಬೇರೆ ಎಲ್ಲೂ ಇಲ್ಲವೆಂಬುದನ್ನು ಬಸವಣ್ಣನವರು ಹೇಗೆ ತಿಳಿಸಿದ್ದಾರೆ?<br><br>ಉತ್ತರ : ಬಸವಣ್ಣನವರು ದೇವಲೋಕ ಮತ್ತು ಮರ್ತ್ಯಲೋಕ ಬೇರೆ ಎಲ್ಲೂ ಇಲ್ಲವೆಂದು ಹೇಳಿದ್ದಾರೆ. ಸತ್ಯವನ್ನು ನುಡಿಯುವುದೇ ದೇವಲೋಕ. ಮಿಥ್ಯವನ್ನು ನುಡಿಯುವುದೇ ಮರ್ತ್ಯಲೋಕವೆಂದು ಹೇಳಿದ್ದಾರೆ. ಆಚಾರವೇ ಸ್ವರ್ಗ, ಅನಾಚಾರವೇ ನರಕ ಎನ್ನುವ ಮೂಲಕ ದೇವಲೋಕ, ಮರ್ತ್ಯಲೋಕ ಬೇರೆ ಎಲ್ಲೂ ಇಲ್ಲವೆಂಬುದನ್ನು ಬಸವಣ್ಣನವರು ನಿರೂಪಿಸಿದ್ದಾರೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **24.** | ಸೋಮೇಶ್ವರ ಶತಕದಲ್ಲಿ ಕವಿ ಯಾವ ಗುಣವನ್ನು ಹೊಂದಿದವರು ಯಾವ ಹೆಸರಿಗೆ ಅರ್ಹರಾಗುತ್ತಾರೆ ಎಂಬುದನ್ನು ಹೇಗೆ ನಿರೂಪಿಸಿದ್ದಾರೆ? ವಿವರಿಸಿರಿ<br><br>ಉತ್ತರ : ವಿನಯವಂತನಾದ ಮಗನು, ಪರಿಶುದ್ಧನಾದ ಋಷಿಯು, ಪತಿಗೆ ಬೈಯದ ಹೆಂಡತಿಯು, ರುಚಿಕರವಾದ ಊಟವು, ಕೆಟ್ಟವರ ಸಹವಾಸದಲ್ಲಿರದ ದೊಡ್ಡ ಮನುಷ್ಯನು, ಯುದ್ಧದಲ್ಲಿ ಹೋರಾಡುವ ಭಟನು, ಕಷ್ಟದಲ್ಲಿ ಸಹಾಯ ಮಾಡುವ ನಂಟನು, ಶಿವನನ್ನು ಬಿಡದ ಆಚಾರವಂತನು ಆಯಾ ಹೆಸರಿಗೆ ಅರ್ಹರಾಗಿರುತ್ತಾರೆ ಎಂದು ಸೋಮೇಶ್ವರ ಶತಕದಲ್ಲಿ ನಿರೂಪಿಸಿದ್ದಾರೆ. | |
| **V.** | **ಸಂದರ್ಭಸಹಿತ ವಿವರಣೆ :** | **2 x 3 = 6** |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು – ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | **3** ಅಂಕಗಳು |
| **25.** | "ನೀವು ದಯಮಾಡಿ ಇದನ್ನು ಓದಿ ನಿಮ್ಮ ಅಭಿಪ್ರಾಯವನ್ನು ಹೇಳಿ"<br>ಉತ್ತರ:<br><br>ಆಯ್ಕೆ : ಈ ವಾಕ್ಯವನ್ನು ಬೀಚಿಯವರು ಬರೆದಿರುವ 'ನನ್ನ ಪುಸ್ತಕ ಪ್ರಪಂಚ' ಪಾಠದಿಂದ ಆರಿಸಲಾಗಿದೆ. ಈ ಮಾತನ್ನು ಬೀಚಿಯವರ ಕಿರಿಯಮಗ ಪಾಪಣ್ಣಿಯು ಬೀಚಿಯವರಿಗೆ ಹೇಳಿದ್ದಾರೆ.<br><br>ಸಂದರ್ಭ : ಈ ಮಾತನ್ನು ಬೀಚಿಯವರ ಕಿರಿಯಮಗ ಪಾಪಣ್ಣಿಯು ಬೀಚಿಯವರಿಗೆ ಹೇಳಿದ್ದಾರೆ. ಪಾಪಣ್ಣಿಯು ತಮ್ಮ ಗುರುಗಳಾದ ಕೆ.ವಿ.ಅಯ್ಯರ್ ಅವರು ಬರೆದ ರೂಪದರ್ಶಿ ಪುಸ್ತಕವನ್ನು ಮನೆಗೆ ತಂದು ಬೀಚಿಯವರಿಗೆ ಓದುವಂತೆ ತಿಳಿಸುವಾಗ ಈ ಮಾತು ಬಂದಿದೆ.<br><br>ಸ್ವಾರಸ್ಯ : ಪಾಪಣ್ಣಿಗೆ ತಮ್ಮ ಗುರುಗಳಾದ ಕೆ.ವಿ.ಅಯ್ಯರ್ ಮೇಲೆ ಇರುವ ಅಭಿಮಾನ, ಹೆಮ್ಮೆಯನ್ನು ಕಾಣಬಹುದು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | "ಪರಸತಿ ಪರಧನಕ್ಕಾಗಿ ಚಿಂತಿಸುತೆ".<br>ಉತ್ತರ:<br><br>ಆಯ್ಕೆ: ಈ ವಾಕ್ಯವನ್ನು ಪುರಂದರದಾಸರು ಬರೆದಿರುವ 'ಉದರ ವೈರಾಗ್ಯ' ಪದ್ಯದಿಂದ ಆರಿಸಲಾಗಿದೆ.<br><br>ಸಂದರ್ಭ: ಈ ಮಾತನ್ನು ಪುರಂದರದಾಸರು ಓದುಗಾರರಿಗೆ ಹೇಳಿದ್ದಾರೆ. ಮಹಾಭಕ್ತನಂತೆ ನಟಿಸುವ ಡಾಂಭಿಕನ ಭಕ್ತಿಯನ್ನು ದಾಸರು ಅಣಕಿಸುವಾಗ ಈ ಮಾತು ಬಂದಿದೆ.<br><br>ಸ್ವಾರಸ್ಯ: ವೈರಾಗ್ಯದ ಸೋಗಿನಲ್ಲಿ ಮಾಡುವ ಕಪಟಭಕ್ತಿಯನ್ನು ವಿಡಂಬಿಸಿರುವುದನ್ನು ಕಾಣಬಹುದು. | |
| VI. | ಐದು – ಆರು ವಾಕ್ಯಗಳಲ್ಲಿ ಉತ್ತರಿಸುವುದು : | 4 x 3 = 12 |
| | ವಿಷಯಕ್ಕೆ | |
| | ಭಾಷಾಶೈಲಿಗೆ | 2 ಅಂಕಗಳು |
| | ಒಟ್ಟು | 1 ಅಂಕ |
| 27. | ಮಿನಿಪೊಲೀಸ್ ನಗರದಲ್ಲಿ ಗೊರೂರರಿಗೆ ಎದುರಾದ ಸಮಸ್ಯೆಗಳನ್ನು ವಿವರಿಸಿರಿ.<br><br>ಉತ್ತರ : ಮಿನಿಪೊಲೀಸ್ ನಗರದಲ್ಲಿ ಗೊರೂರರು ನೋಡಲು ಹೋದ ಮಿತ್ರರು ಸಿಗಲಿಲ್ಲ. ಆಗ ಅವರ ಮಿತ್ರರೊಬ್ಬರ ಕಾರಿನಲ್ಲಿ ಹೊರಟು ನಡುದಾರಿಯಲ್ಲಿ ಇಳಿದುಕೊಂಡರು. 2 ಗಂಟೆಗೆ ತಮ್ಮನ್ನು ಅಲ್ಲಿಂದ ವಾಪಸ್ಸು ಕರೆದುಕೊಂಡು ಹೋಗುವಂತೆ ಅವರಿಗೆ ಹೇಳಿದ್ದರು. ನಗರದಲ್ಲಿ ದೀಪ ಹೊತ್ತಿದ ಮೇಲೆ ತಮಗೆ ಅರಿವಿಲ್ಲದಂತೆ ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರ ಇವುಗಳನ್ನೆಲ್ಲಾ ನೋಡುತ್ತಾ ಗೊತ್ತು ಮಾಡಿಕೊಂಡಿದ್ದ ಸ್ಥಳದಿಂದ ಆಚೆ ಈಚೆ ಬಂದು ಬಿಟ್ಟರು. ಏನು ಮಾಡಿದರೂ ಆ ಸ್ಥಳ ಸಿಗಲೇ ಇಲ್ಲ. ವಿಳಾಸವಿದ್ದ ಚೀಲ ಕಾರಿನಲ್ಲೇ ಉಳಿದಿತ್ತು. ರಾತ್ರಿಯ ಜೋರಾದ ಚಳಿಯನ್ನು ತಡೆಯಲು ಬೆಚ್ಚಗಿನ ಬಟ್ಟೆಗಳಿರಲಿಲ್ಲ. ಹೋಟೆಲಿನಲ್ಲಿ ಉಳಿಯುವಷ್ಟು ಡಾಲರುಗಳು ಇರಲಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಮಲಗಿದರೆ ಅಲೆಮಾರಿ ಎಂದು ಲಾಕಪ್ಪಿಗೆ ಹಾಕುತ್ತಾರೆ. ಈ ರೀತಿಯಾಗಿ ಗೊರೂರರು ಅನೇಕ ಸಮಸ್ಯೆಗಳನ್ನು ಮಿನಿಪೊಲೀಸ್ ನಗರದಲ್ಲಿ ಎದುರಿಸಬೇಕಾಯಿತು. | 3 ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಶಿವಾಜಿಯು ಮಲ್ಲಮ್ಮಾಜಿಯೊಂದಿಗೆ ರಾಜಿಮಾಡಿಕೊಂಡ ಸನ್ನವೇಷವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ..<br><br>ಉತ್ತರ : ಮಲ್ಲಮ್ಮಾಜಿ ಗಂಡನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಶಕ್ತಿಯ ಜೊತೆಗೆ ಯುಕ್ತಿಯಿಂದ ಹೆಜ್ಜೆ ಇಟ್ಟಳು. ಸರದಾರ ಶಾಂತಯ್ಯನನ್ನು ಸನ್ಯಾಸಿ ವೇಷದಲ್ಲಿ ಶಿವಾಜಿಯ ಬಳಿ ಕಳುಹಿಸಿ, ಸಿದ್ಧಸಮುದ್ರದಲ್ಲಿರುವ ಜಗದಾಂಬದೇವಿಯ ದರ್ಶನವನ್ನು ಮಾಡಿದರೆ ಉತ್ತಮ ಎಂಬ ಸಲಹೆಯನ್ನು ನೀಡಿಸಿದಳು. ಅದರಂತೆ ಶಿವಾಜಿಯು ಎಂಟು–ಹತ್ತು ಸರದಾರರ ಜೊತೆ ಜಗದಾಂಬೆಯ ದರ್ಶನವನ್ನು ಪಡೆದು ಬರುವಾಗ ಮಲ್ಲಮ್ಮಾಜಿಯು ಶಿವಾಜಿಯ ಮೇಲೆ ಮಿಂಚಿನಂತೆ ಎರಗಿ ಖಡ್ಗದ ಹೊಡೆತದಿಂದ ಅವರನ್ನೆಲ್ಲಾ ಕೆಳಗುರುಳಿಸಿದಳು. ತಲ್ಲಣಗೊಂಡ ಶಿವಾಜಿಯು ಕುದುರೆಯಿಂದ ಕೆಳಗಿಳಿದು ಕೈ ಜೋಡಿಸಿ "ದೇವಿ ನನ್ನ ಅಪರಾಧವನ್ನು ಕ್ಷಮಿಸು, ನಾನು ನಿನ್ನ ಮಗನೆಂದು ತಿಳಿ" ಎಂದು ತಪ್ಪೊಪ್ಪಿಕೊಂಡಾಗ ಇಬ್ಬರೂ ರಾಜಿಮಾಡಿಕೊಂಡರು. | |
| 29. | ಜಾತಿ, ಮತ, ಕುಲಗಳ ಗೋಡೆಯನ್ನು ಕೆಡುಹಬೇಕಾದ ಹೊಸತಲೆಮಾರಿನ ಉತ್ಸಾಹವನ್ನು ನೀವು ಏಕೆ ಮೆಚ್ಚುತ್ತೀರಿ? ವಿವರಿಸಿರಿ.<br><br>ಉತ್ತರ : ನಾವೆಲ್ಲರೂ ಒಂದೆ ಜಾತಿ, ಒಂದೆ ಮತ, ಒಂದೆ ಕುಲವೆಂಬ ಭಾವನೆಯನ್ನು ಹೊಂದಿ ಮನುಜರಾಗಿ ಬಾಳಬೇಕು. ಆದರೆ ಜಾತಿ, ಮತ, ಧರ್ಮಗಳು ಮನುಷ್ಯ ಮನುಷ್ಯರ ನಡುವೆ ಅಂತರವನ್ನು ಸೃಷ್ಟಿಸುವ ಅಡ್ಡಗೋಡೆಗಳಾಗಿ ಪರಿಣಮಿಸಿವೆ. ಇಂತಹ ಅಡ್ಡಗೋಡೆಗಳನ್ನು ಪ್ರಳಯ ಕಾಲದ ರುದ್ರರಂತೆ ಈ ತಲೆಮಾರಿನ ಯುವಜನರು ಕುಟ್ಟಿ ಕೆಡವುತ್ತಾರೆ. ಹೊಸ ಬಾಳಿಗೆ ಸಮಾನತೆಯ ಭಾವವನ್ನು ಸಾರುವ ನವವಿಧಾತರಾಗಿದ್ದಾರೆ. ಕ್ರಾಪುತಲೆಯನ್ನು ಕೇತನದಡಿಯಲ್ಲಿ ಒಂದಗೂಡಿ ಮಡಿವಂತಿಕೆಯ ಕಟ್ಟಳೆಗಳನ್ನು ತೂರೆದು ಹೋರಾಡುತ್ತಾರೆ. ವಿಶ್ವಮಾನವತೆಯ ಸಂದೇಶದೊಂದಿಗೆ ಹಳೆಯ ಕೊಳೆಯನ್ನು ತೊಲಗಿಸಿ ಹೊಸತನದಿಂದ ಸ್ವರ್ಗವನ್ನೇ ಈ ಭೂಮಿಗೆ ಎಳೆದು ತರುವ ಉತ್ಸಾಹ ತೋರಿಸುತ್ತಾರೆ. ಹಚ್ಚಹಸುರಿನ ಹೃದಯಮಂದಿರಕ್ಕೆ ಹೆಣ್ಣು–ಗಂಡು, ಬಡವ–ಬಲ್ಲಿದ, ಜಾತಿ–ಧರ್ಮಗಳ ಭೇದಭಾವವಿಲ್ಲದೆ ಎಲ್ಲರನ್ನು ಸ್ವಾಗತಿಸುತ್ತಾರೆ. ಈ ರೀತಿ ಚಿರವಾದ, ಉದಾರವಾದ, ಸುಂದರವಾದ ಸಮಾಜ ನಿರ್ಮಾಣ ಮಾಡುವ ಯುವಜನರ ಉತ್ಸಾಹವನ್ನು ನಾವು ಮೆಚ್ಚಬಹುದಾಗಿದೆ. | |
| 30. | ಗ್ರಂಥಾಲಯದ ಬಗ್ಗೆ ಕವಿ ವ್ಯಕ್ತಪಡಿಸಿರುವ ಭಾವನೆಗಳನ್ನು ನಿಮ್ಮದೇ ಮಾತುಗಳಲ್ಲಿ ಬರೆಯಿರಿ.<br><br>ಉತ್ತರ : ಕವಿಗಳು ಗ್ರಂಥಾಲಯವನ್ನು ಪ್ರವೇಶಿಸಿದಾಗ ಗ್ರಂಥಗಿರಿಯ ಸಾಲುಗಳನ್ನು ಕಂಡು ಬೆರಗಾದರು. ಗ್ರಂಥರಾಶಿಗಳ ಅಡಿಯಲ್ಲಿರುವ ಧೂಳಿಗೆ ತಾನು ಸಮ ಎನಿಸಿತು. ಒಂದು ಕ್ಷಣ ಅಲ್ಲಿ ನಿಂತರೆ ಅವರ ಮತಿಯು ಮುದುಡಿ ಹೋಗುತ್ತದೆ. ಅವರ ಅಹಂಕಾರ ನುಚ್ಚುನೂರಾಗಿ ಅಲ್ಲಿಂದ ಓಡಿ ಹೋಗಬೇಕೆನಿಸಿತು. ಗ್ರಂಥಾಲಯದಲ್ಲಿ ಹಲವಾರು ಕವಿಸಾಹಿತಿಗಳ, ಹಿರಿಯರ, ಮಹಾತ್ಮರ, ಸಾಧಕರ ಗುಂಪು ನೆರೆದಂತೆ ಕವಿಗೆ ಅನುಭವವಾಯಿತು. ಗ್ರಂಥಾಲಯದಲ್ಲಿರುವ ಗ್ರಂಥರಾಶಿಗಳು ಆ ಹಿರಿಯ ಬಾಳುಗಳ ಅವಶೇಷವೆಂಬಂತೆ ಕಂಡುಬಂದಿತು. ಮೂಲವನ್ನು ಚಿತ್ರಿಸಲು ಹೊರಟ ಕವಿಗಳು ಕೃಷ್ಣನ ವಿಶ್ವರೂಪವನ್ನು ಕಂಡು ತತ್ತರಿಸಿದ ಪಾರ್ಥನಂತೆ ತತ್ತರಿಸಿ, ಭೀತವಿಸ್ಮಿತರಾಗಿ ಹೋದರು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VII. | ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು : | 2 x 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | ಆರ್. ಎಸ್. ಸುಂಕದ<br><br>ಉತ್ತರ : ಆರ್ ಎಸ್ ಸುಂಕದ ಅವರು 1951 ರಂದು ಧಾರವಾಡ ಜಿಲ್ಲೆಯ ಮೊರಬ ಗ್ರಾಮದಲ್ಲಿ ಜನಿಸಿದರು. ಕನ್ನಡ ವ್ಯಾಕರಣ, ಮೊರಬ ಗ್ರಾಮದ ಸಾಂಸ್ಕೃತಿಕ ಅಧ್ಯಯನ, ಗಂಗಾಧರ ಮಡಿವಾಳೇಶ್ವರ ತುರಮರಿ ಒಂದು ಅಧ್ಯಯನ ಇವರು ಬರೆದ ಕೃತಿಗಳು | |
| 32. | ಕೆ.ಎಸ್. ನಿಸಾರ್ ಅಹಮದ್<br><br>ಉತ್ತರ : ಕೆ.ಎಸ್. ನಿಸಾರ್ ಅಹಮದ್ ಅವರು 1936 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. ಹಕ್ಕಿಗಳು, ನೆನೆದವರ ಮನದಲ್ಲಿ, ಸಂಜೆ ಐದರ ಮಳೆ, ನಾನೆಂಬ ಪರಕೀಯ, ಸಮುಹೂರ್ತ, ಮನಸು ಗಾಂಧಿ ಬಜಾರು, ನಿತ್ಯೋತ್ಸವ, ಅನಾಮಿಕ ಆಂಗ್ಲರು, ನವೋಲ್ಲಾಸ, ಸ್ವಯಂ ಸೇವೆಯ ಗಿಳಿಗಳು ಇತ್ಯಾದಿ ಇವರು ಬರೆದ ಕೃತಿಗಳು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ) | 1 x 3 = 3 |
| 33. | "ದೇಶ ಸುತ್ತಬೇಕು ಕೋಶ ಓದಬೇಕು"<br>ಅಥವಾ<br>"ಮಾಡಿದ್ದು ಉಣ್ಣೋ ಮಹಾರಾಯ" | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| | ಉತ್ತರ : "ದೇಶ ಸುತ್ತು : ಕೋಶ ಓದು"<br><br>ಗಾದೆಯ ಮಹತ್ವ : ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br><br>ಅರ್ಥ ಮತ್ತು ವಿವರಣೆ : "ದೇಶ ಸುತ್ತು : ಕೋಶ ಓದು" ಇದೊಂದು ಜನಪ್ರಿಯ ಗಾದೆಮಾತಾಗಿದೆ. ಮನುಷ್ಯ ನಾನಾ ರೀತಿಯಿಂದ ಜ್ಞಾನವನ್ನು ಸಂಪಾದಿಸುತ್ತಾನೆ. ಹಾಗೆಯೇ 'ದೇಶ ಸುತ್ತುವುದರಿಂದ ಕೋಶವನ್ನು ಓದುವುದರಿಂದ' ಜ್ಞಾನಾಭಿವೃದ್ಧಿಯಾಗುತ್ತದೆ. ದೇಶ ವಿದೇಶಗಳಿಗೆ ಹೋಗುವುದರಿಂದ ಅಲ್ಲಿಯ ಆಚಾರ–ವಿಚಾರ, ಸಂಸ್ಕೃತಿ, ಭಾಷೆ, ಊಟ–ಉಪಚಾರ, ವೇಷ–ಭೂಷಣ, ವಾತಾವರಣ ಇತ್ಯಾದಿಗಳನ್ನು ತಿಳಿಯಬಹುದು. ಹಾಗೆಯೇ ವಿವಿಧ ಕೋಶಗಳನ್ನು ಓದಿ ಅವುಗಳಲ್ಲಿರುವ ಹಲವಾರು ಸಂಗತಿಗಳನ್ನು ತಿಳಿದುಕೊಳ್ಳಬಹುದು. ಒಳ್ಳೆಯ ಪುಸ್ತಕಗಳನ್ನು, ಗ್ರಂಥಗಳನ್ನು ಓದುವುದರಿಂದ ಅಪಾರವಾದ ಜ್ಞಾನ ದೊರೆಯುತ್ತದೆ. ಆದ್ದರಿಂದಲೇ "ದೇಶ ಸುತ್ತಬೇಕು ಕೋಶ ಓದಬೇಕು" ಎಂಬ ಹಿರಿಯರ ಮಾತು ಸಾರ್ವಕಾಲಿಕ ಸತ್ಯವಾಗಿದೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಅಥವಾ**<br><br>ಉತ್ತರ : "ಮಾಡಿದ್ದು ಉಣ್ಣೋ ಮಹಾರಾಯ"<br><br>ಗಾದೆಯ ಮಹತ್ವ: ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br><br>ಅರ್ಥ ಮತ್ತು ವಿವರಣೆ: 'ಮಾಡಿದ್ದು ಉಣ್ಣೋ ಮಹಾರಾಯ' ಇದೊಂದು ಜನಪ್ರಿಯ ಗಾದೆ ಮಾತಾಗಿದೆ. ನಾವು ಮಾಡಿದ ಕೆಲಸದ ಪ್ರತಿಫಲಗಳನ್ನು ಒಳ್ಳೆಯದಾಗಲೀ, ಕೆಟ್ಟದ್ದಾಗಲೀ ನಾವೇ ಅನುಭವಿಸಬೇಕು ಎಂಬುದನ್ನು ಈ ಗಾದೆ ತಿಳಿಸುತ್ತದೆ. ವ್ಯಕ್ತಿ ತಾನು ಮಾಡಿದ ಕರ್ಮಗಳ ಫಲವನ್ನು ತಾನೇ ಅನುಭವಿಸಬೇಕು. ಬೇರೆ ಯಾರೂ ಅದರ ಫಲಗಳನ್ನು ಅನುಭವಿಸಲಾರರು. ಒಳ್ಳೆಯ ಕೆಲಸಗಳಿಗೆ ಒಳ್ಳೆಯ ಫಲಗಳನ್ನು, ಕೆಟ್ಟ ಕೆಲಸಗಳಿಗೆ ಕೆಟ್ಟ ಫಲಗಳನ್ನು ಪಡೆಯಬೇಕಾಗುತ್ತದೆ. ಆದ್ದರಿಂದ ಯಾವುದೇ ಕೆಲಸಗಳನ್ನು ಮಾಡುವ ಮುನ್ನ ಅದರಿಂದಾಗುವ ಪರಿಣಾಮಗಳ ಬಗ್ಗೆ ತಿಳಿದು ಕೆಲಸ ಮಾಡಬೇಕು. ಸ್ವಾರ್ಥವನ್ನು ಮರೆತು ಸಮಾಜಮುಖಿ ಕೆಲಸಗಳನ್ನು ಮಾಡಬೇಕು. ಸ್ವಾರ್ಥಕ್ಕಾಗಿ ಕೆಟ್ಟದಾರಿಯಲ್ಲಿ ಕೆಟ್ಟಕೆಲಸಗಳನ್ನು ಮಾಡಿದರೆ ಅದರ ಪರಿಣಾಮ ಕೆಟ್ಟದ್ದೇ ಆಗಿರುತ್ತದೆ. ಉಪ್ಪು ತಿಂದವನು ನೀರು ಕುಡಿಯಲೇ ಬೇಕು ಎಂಬುದೇ ಈ ಗಾದೆ ಮಾತಿನ ಸಾರವಾಗಿದೆ. | |
| **IX.** | ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :<br><br>ವಿಷಯಕ್ಕೆ<br>ಭಾಷಾಶೈಲಿಗೆ<br>ಒಟ್ಟು | **1x 4 = 4**<br><br>**3** ಅಂಕಗಳು<br>**1** ಅಂಕ<br>**4** ಅಂಕಗಳು |
| **34.** | ಶರೀಫರು ಮತ್ತು ಗೋವಿಂದ ಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.<br><br>**ಅಥವಾ**<br><br>ಕರ್ಬಲಾ ಮತ್ತು ಅಲಾವಿ ಆಚರಣೆಗಳನ್ನು ಕುರಿತು ಬರೆಯಿರಿ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಶರೀಫರು ಮತ್ತು ಗೋವಿಂದ ಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ.<br><br>ಉತ್ತರ : ಗೋವಿಂದಭಟ್ಟರು ಜಾತಿಮತಗಳ ಭೇದ ಮಾಡದೆ ಮುಸಲ್ಮಾನ ಶಿಷ್ಯನಾದ ಶರೀಫರಿಗೆ ವಿದ್ಯಾದಾನ ಮಾಡಿದರು. ಗುರು ಶಿಷ್ಯರೂ ಒಂದೇ ತಟ್ಟೆಯಲ್ಲಿ ಊಟವನ್ನು ಮಾಡುತ್ತಿದ್ದರು. ಇಬ್ಬರಿಗೂ ಸಮಾಜ ಬಹಿಷ್ಕಾರ ಹಾಕಿದ್ದರಿಂದ ಸಾರ್ವಜನಿಕ ಗುಡಿಗುಂಡಾರಗಳಲ್ಲಿ ವಾಸಿಸುತ್ತಿದ್ದರು. ಯಾವ ದಯಾ ದಾಕ್ಷಿಣ್ಯಗಳಿಗೆ ಒಳಗಾಗುತ್ತಿರಲಿಲ್ಲ. ಸಮಾಜದ ತಪ್ಪು ನಡತೆಗಳನ್ನು ತಿದ್ದಿ ಮಾನವಕುಲದ ಹಿತವನ್ನು ಬಯಸುತಿದ್ದರು. ಇಬ್ಬರೂ ಒಟ್ಟಿಗೆ ಗ್ರಾಮಗಳಿಗೆ ಹೋಗಿ ಜನರ ತಿಳಿವಳಿಕೆಗೆ ಅನುಗುಣವಾಗಿ ಉಪದೇಶ ಮಾಡುತ್ತಿದ್ದರು. ಗುಡಿಗೇರಿಯ ಕುಂಬಾರ ಮುದುಕಪ್ಪನ ಮನಗೆ ವಿಶೇಷವಾಗಿ ಬರುವ ಹಾಗೂ ಅಲ್ಲಿಯೇ ಊಟ ಉಪಚಾರಗಳನ್ನು ಮಾಡುವ ರೂಢಿಯನ್ನು ಇಟ್ಟುಕೊಂಡಿದ್ದರು. ಬೇಡಿ ತಿನ್ನುವ ಋಣಭಾರಕ್ಕೆ ಸಿಲುಕದೆ ಉಪವಾಸವಿರುತ್ತಿದ್ದರು. ಯಾರಾದರೂ ಪ್ರೀತಿಯಿಂದ ಕರೆದು ನೀಡಿದ ಪ್ರಸಾದವನ್ನು ಇಬ್ಬರೂ ಸ್ವೀಕರಿಸುತ್ತಿದ್ದರು.<br><br>ಅಥವಾ<br><br>ಕರ್ಬಲಾ ಮತ್ತು ಅಲಾವಿ ಆಚರಣೆಗಳನ್ನು ಕುರಿತು ಬರೆಯಿರಿ.<br><br>ಉತ್ತರ : ಕರ್ಬಲಾ ಇರಾಕ್ ದೇಶದಲ್ಲಿರುವ ಒಂದು ಸ್ಥಳ. ಹಜರತ್ ಹುಸೇನರು ಈ ಸ್ಥಳದಲ್ಲಿ ಶತ್ರುಗಳೊಡನೆ ಹೋರಾಡಿ ಹುತಾತ್ಮರಾಗಿದ್ದರು. ಹಜರತ್ ಹುಸೇನರನ್ನು ಸಾಂಕೇತಿಸುವ ಲೋಹದ ವಸ್ತುಗಳನ್ನು ಮೆರವಣಿಗೆಯಲ್ಲಿ ಊರ ಹೊರಗೆ ತಂದು ಸ್ನಾನ ಮಾಡಿಸಿ ಬಿಳಿ ಬಟ್ಟೆಯಲ್ಲಿ ಸುತ್ತಿ ಗಟ್ಟು ಕಟ್ಟುತ್ತಾರೆ. ಇದು ಹುತಾತ್ಮರಾದ ಹುಸೇನರನ್ನು ಸಾಂಕೇತಿಸುವ ಆಚರಣೆಯಾಗಿದೆ. ಅಲಾವಿ ಎಂದರೆ ಮೊಹರಂ ಹಬ್ಬದ ಸಂದರ್ಭದಲ್ಲಿ ಲೋಹದ ಹಸ್ತವಾದ ಬಾಬಯ್ಯನನ್ನು ಕೂಡಿಸುವುದು. ಬಾಬಯ್ಯನ ಗುಡಿಯ ಮುಂದೆ ಗುಂಡಿ ತೋಡಿ ಅದರಲ್ಲಿ ಬೆಂಕಿ ಉರಿಸುತ್ತಾರೆ. ಆ ಗುಂಡಿಗೆ ಅಲಾವಿ ಎನ್ನುವರು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| X.<br><br>35. | ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)<br><br>ಕಳಬೇಡ, ಕೊಲಬೇಡ, ––––––––––––––––––––––––<br>––––––––––––––––––––––––––––––––––––––<br>––––––––––––––––––––––––––––––––––––––<br>––––––––––––––––––––––––––––––––––––––<br>–––––––––––––––––––––––– ದೇವರನೊಲಿಸುವ ಪರಿ<br><br>ಅಥವಾ<br><br>ದೇವಲೋಕ, ಮರ್ತ್ಯಲೋಕ ––––––––––––––––––––<br>––––––––––––––––––––––––––––––––––––––<br>––––––––––––––––––––––––––––––––––––––<br>–––––––––––––––––––––––––––– ನೀವೇ ಪ್ರಮಾಣು.<br><br>ಉತ್ತರ :<br><br>ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ<br>ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ<br>ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ<br>ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ<br>ಇದೇ ಕೂಡಲ ಸಂಗಮದೇವರನೊಲಿಸುವ ಪರಿ<br><br>ಅಥವಾ<br><br>ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ, ಕಾಣಿರೋ!<br>ಸತ್ಯವ ನುಡಿವುದೇ ದೇವ ಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ!<br>ಆಚಾರವೇ ಸ್ವರ್ಗ, ಅನಾಚಾರವೇ ನರಕ<br>ಕೂಡಲಸಂಗಮದೇವಾ ನೀವೇ ಪ್ರಮಾಣು. | 1x 4 = 4 |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XI.<br><br><br><br><br><br><br><br><br><br>36. | ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :<br><br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ)<br><br>ಡಾ.ಎಸ್.ರಾಧಾಕೃಷ್ಣನ್ ಅವರ ಬಾಹ್ಯರೂಪ ಎತ್ತರವಾದ ನಿಲುವು, ಬಿಸ್ಕೆಟ್ ಬಣ್ಣದ ರೇಷ್ಮೆಯ ನಿಲುವಂಗಿ, ಶುಭ್ರವೂ ನಿರಾಡಂಬರವೂ ಆದ ಬಿಳಿಯ ಪಂಚೆ ಮತ್ತು ರುಮಾಲು ಅವರ ವೇಷಭೂಷಣಗಳಾಗಿತ್ತು. ಕೋಪಸೂಚಕವಲ್ಲದ ಹುಬ್ಬು, ಯಾವುದೋ ಸಮಸ್ಯೆಯ ಒಳಹೋಗುವಂತಿರುವ ಕಣ್ಣನೋಟ, ಮುಗುಳುನಗೆಯ ಸುಳಿವು ಇವು ಭಾರತೀಯರೆಲ್ಲರಿಗೂ ಪರಿಚಿತ. ಪ್ರಪಂಚದ ಫ್ಯಾಷನ್ ಎಷ್ಟೇ ಬದಲಾದರೂ ರಾಧಾಕೃಷ್ಣನ್ ತಮ್ಮ ವೇಷಭೂಷಣಗಳನ್ನು ಕೊನೆಯವರೆಗೂ ಜತನವಾಗಿ ಉಳಿಸಿಕೊಂಡರು. ಉಪರಾಷ್ಟ್ರಪತಿಯ ಸೇವೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಅನಂತರ ರಾಷ್ಟ್ರಪತಿ ಸ್ಥಾನಕ್ಕೆ ಸರ್ವಾನುಮತದಿಂದ ನಾಮಕರಣ ಮಾಡಲಾಯಿತು. ಅವರಿಗೆ ಬರುತ್ತಿದ್ದ ಹತ್ತುಸಾವಿರ ರೂಪಾಯಿಗಳ ವೇತನದಲ್ಲಿ ಎರಡು ಸಾವಿರದ ಐನೂರು ರೂಪಾಯಿಗಳನ್ನು ಮಾತ್ರ ಪಡೆದು ಉಳಿದ ಹಣವನ್ನು ಪ್ರಧಾನಮಂತ್ರಿಗಳ ಪರಿಹಾರ ನಿಧಿಗೆ ವಂತಿಗೆಯಾಗಿ ನೀಡುತ್ತಿದ್ದರು. ಇವರ ಸ್ಮರಣೀಯ ಸೇವೆಯನ್ನು ಗುರುತಿಸಿ ಭಾರತ ಸರ್ಕಾರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ'ನೀಡಿ ಗೌರವಿಸಿತು. ಶ್ರೇಷ್ಠ ಶಿಕ್ಷಣ ತಜ್ಞ, ಮಹಾ ತತ್ವಜ್ಞಾನಿ, ಮಾನವತಾವಾದಿಯಾಗಿ ಬಹುಮುಖ ಪ್ರತಿಭೆಯಿಂದ ವಿಶ್ವವಿಖ್ಯಾತರಾದರು.<br><br>ಪ್ರಶ್ನೆಗಳು :<br><br>ಎ. ಡಾ. ರಾಧಾಕೃಷ್ಣನ್ ತಮ್ಮ ವೇತನದ ಹಣವನ್ನು ಏನು ಮಾಡುತ್ತಿದ್ದರು?<br><br>ಉತ್ತರ : ಡಾ. ರಾಧಾಕೃಷ್ಣನ್ ವೇತನದಲ್ಲಿ ಎರಡು ಸಾವಿರದ ಐನೂರು ರೂಪಾಯಿಗಳನ್ನು ಮಾತ್ರ ಪಡೆದು ಉಳಿದ ಹಣವನ್ನು ಪ್ರಧಾನಮಂತ್ರಿಗಳ ಪರಿಹಾರ ನಿಧಿಗೆ ವಂತಿಗೆಯಾಗಿ ನೀಡುತ್ತಿದ್ದರು.<br><br>ಬಿ. ಡಾ. ರಾಧಾಕೃಷ್ಣನ್ ಅವರ ವೇಷಭೂಷಣ ಯಾವುದಾಗಿತ್ತು?<br><br>ಉತ್ತರ : ಡಾ.ಎಸ್.ರಾಧಾಕೃಷ್ಣನ್ ಬಿಸ್ಕೆಟ್ ಬಣ್ಣದ ರೇಷ್ಮೆಯ ನಿಲುವಂಗಿ, ಶುಭ್ರವೂ ನಿರಾಡಂಬರವೂ ಆದ ಬಿಳಿಯ ಪಂಚೆ ಮತ್ತು ರುಮಾಲು ಅವರ ವೇಷಭೂಷಣಗಳಾಗಿತ್ತು.<br><br>ಸಿ. ರಾಧಾಕೃಷ್ಣನ್ ಅವರಿಗೆ ಸಂದ ಅತ್ಯುನ್ನತ ಪ್ರಶಸ್ತಿ ಯಾವುದು?<br><br>ಉತ್ತರ : ರಾಧಾಕೃಷ್ಣನ್ ಅವರಿಗೆ ಸಂದ ಅತ್ಯುನ್ನತ ಪ್ರಶಸ್ತಿ 'ಭಾರತ ರತ್ನ'. | 4x 1 = 4 |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಡಿ. ರಾಧಾಕೃಷ್ಣನ್ ಅವರು ಯಾವ ಯಾವ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು?<br>ಉತ್ತರ : ರಾಧಾಕೃಷ್ಣನ್ ಅವರು ಉಪರಾಷ್ಟ್ರಪತಿ ಮತ್ತು ರಾಷ್ಟ್ರಪತಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದರು. | |
| XI. | ಪ್ರಬಂಧ ಬರವಣಿಗೆ : | 1x 4 = 4 |
| 37. | ಇಂದಿನ ಶಿಕ್ಷಣದಲ್ಲಿ ಗಣಕಯಂತ್ರದ ಪಾತ್ರ<br>ಅಥವಾ<br>ದೂರದರ್ಶನದ ಒಳಿತು ಮತ್ತು ಕೆಡುಕುಗಳು | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಇಂದಿನ ಶಿಕ್ಷಣದಲ್ಲಿ ಗಣಕಯಂತ್ರದ ಪಾತ್ರ :<br><br>ಉತ್ತರ :<br><br>ಪೀಠಿಕೆ : ಕಂಪ್ಯೂಟರ್ – ಎಂದರೆ ಗಣಕಯಂತ್ರ. ಇದು ಆಧುನಿಕ ವಿಜ್ಞಾನದ ಅಪೂರ್ವ ಕೊಡುಗೆ. ಕಂಪ್ಯೂಟರಿಗೆ ನಿಘಂಟಿನಲ್ಲಿ 'ಎಲೆಕ್ಟ್ರಾನಿಕ್ ಕ್ಯಾಲ್ಕುಲೇಟಿಂಗ್ ಮೆಷಿನ್' ಎನ್ನುವ ಅರ್ಥವಿದೆ. ಕಂಪ್ಯೂಟರ್ ಲೆಕ್ಕ ಹಾಕುತ್ತದೆ, ಹಾಗೆಯೇ ಜಟಿಲವಾದ ಸಮಸ್ಯೆಗಳನ್ನು ಶೀಘ್ರವಾಗಿ, ನಿಖರವಾಗಿ ಬಿಡಿಸುತ್ತದೆ. ಯಾವುದೇ ಗೊಂದಲವಿಲ್ಲದೆ ಅದು ಹಲವು ಕ್ರಿಯೆಗಳನ್ನು ಏಕಕಾಲದಲ್ಲಿ ಮಾಡುತ್ತದೆ.<br><br>ವಿಷಯ ನಿರೂಪಣೆ : ಇಂದು ಗಣಕಯಂತ್ರಗಳನ್ನು ವಿಜ್ಞಾನ, ವೈದ್ಯಕೀಯ, ಇಂಜಿನಿಯರಿಂಗ್, ವಾಣಿಜ್ಯ ಕೈಗಾರಿಕೆ, ಆಡಳಿತ, ಶಿಕ್ಷಣ ಹೀಗೆ ಹಲವು ಕ್ಷೇತ್ರಗಳಲ್ಲಿ ಬಳಸಲಾಗುತ್ತದೆ. ಹವಾಮಾನ ಮಾಹಿತಿಗಾಗಿ ಭೂಉಪಗ್ರಹಗಳನ್ನು ಹಾರಿ ಬಿಡಲು, ಮಾಹಿತಿಗಳನ್ನು ಪಡೆಯಲು ಗಣಕ ಯಂತ್ರಗಳನ್ನು ಬಳಸಲಾಗುತ್ತಿದೆ. ಇಂದು ಗಣಕಯಂತ್ರಗಳು ಮಾಡದೇ ಇರುವ ಕೆಲಸವೇ ಇಲ್ಲವೆನ್ನುವಂತಾಗಿದೆ. ನಿಖರ ಮಾಹಿತಿಗಳನ್ನು ಒದಗಿಸಿದರೆ ಸಾಕು, ನಿಮಿಷ ಮಾತ್ರದಲ್ಲಿ ಗಣಕಯಂತ್ರವು ಹಲವು ಜನರು ಮಾಡುವ ಕೆಲಸವನ್ನು ಒಂದೇ ಮಾಡಿ ಮುಗಿಸುತ್ತದೆ.<br><br>ಉಪಸಂಹಾರ : ಹೊಸ ಯಂತ್ರಗಳ ನಿರ್ಮಾಣ ಮಾಡಲು, ಮಾಹಿತಿ ನೀಡಲು ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಹೆಚ್ಚಾಗುತ್ತಿದೆ. ಕಂಪ್ಯೂಟರ್ ತಯಾರಕರು, ಕಲಿಯುವವರು, ಕಲಿಸುವವರು ಹೀಗೆ ಅದಕ್ಕೆ ಸಂಬಂಧಿಸಿದ ವಿವಿಧ ವಿಭಾಗಗಳಲ್ಲಿ ಉದ್ಯೋಗದ ಅವಕಾಶಗಳು ಹೆಚ್ಚಾಗುತ್ತಿವೆ. ಕೆಲವೇ ವರ್ಷಗಳಲ್ಲಿ ಗಣಕಯಂತ್ರ ಇಡೀ ವಿಶ್ವದಲ್ಲೇ ಶ್ರೇಷ್ಠ ಸ್ಥಾನಮಾನವನ್ನು ಗಳಿಸುವಲ್ಲಿ ಯಶಸ್ವಿಯಾಗಿದೆ ಎಂದರೆ ತಪ್ಪಾಗದು.<br><br>ಅಥವಾ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ದೂರದರ್ಶನದ ಒಳಿತು ಮತ್ತು ಕೆಡುಕುಗಳು<br><br>ಉತ್ತರ :<br><br>ಪೀಠಿಕೆ : ಸಮೂಹ ಮಾಧ್ಯಮಗಳಲ್ಲಿ ಒಂದಾದ ದೂರದರ್ಶನವು ದೃಕ್‌ಶ್ರವ್ಯ ಮಾಧ್ಯಮವಾಗಿದೆ. ವಿಜ್ಞಾನ ಜಗತ್ತಿನ ಅದ್ಭುತ ಕೊಡುಗೆಯಾದ ದೂರದರ್ಶನದ ಸಂಶೋಧಕ ಜಾನ್ ಬಯಾರ್ಡ್. ದೂರದ ದೃಶ್ಯ–ಸಂಗತಿಗಳನ್ನು ದರ್ಶನ ಮಾಡಿಸುವ ಸಾಧನವೇ ದೂರದರ್ಶನ.<br><br>ವಿಷಯ ನಿರೂಪಣೆ : ದೂರದರ್ಶನದಿಂದ ಮನರಂಜನೆಯನ್ನು ಪಡೆಯಬಹುದು. ಶಿಕ್ಷಣ, ಕ್ರೀಡೆ, ಕಲೆ, ಸಾಹಿತ್ಯ, ವಿಜ್ಞಾನ, ಧಾರ್ಮಿಕ, ಇತಿಹಾಸ ಮೊದಲಾದ ಕ್ಷೇತ್ರಗಳ ಬಗ್ಗೆ ತಿಳಿಯಬಹುದು. ದೇಶ ವಿದೇಶಗಳ ಸುದ್ಧಿ–ಸಂಗತಿಗಳನ್ನು ತಿಳಿಯಬಹುದು. ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಆನಂದಿಸಬಹುದು. ಕೈಗಾರಿಕೆ, ವೈದ್ಯಕೀಯ, ಕೃಷಿ, ರಾಜಕೀಯ ಮೊದಲಾದ ಕ್ಷೇತ್ರಗಳ ಮಾಹಿತಿ ದೂರದರ್ಶನದಿಂದ ಸಿಗುತ್ತದೆ. ರಸಪ್ರಶ್ನೆ ಕಾರ್ಯಕ್ರಮಗಳಿಂದ ಜ್ಞಾನವಿಕಾಸವಾಗುತ್ತದೆ. ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವಲ್ಲಿ ದೂರದರ್ಶನದ ಪಾತ್ರ ದೊಡ್ಡದು. ದೂರದರ್ಶನದಿಂದ ಕಾಲದ ಅಪವ್ಯಯವಾಗುತ್ತದೆ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮಾರಕವಾಗಿದೆ. ಜನರ ಸಂಪರ್ಕ ಸಂಬಂಧಗಳು ನಾಶವಾಗುತ್ತಿವೆ. ಕಣ್ಣು, ಕಿವಿ ಹಾಗೂ ಮನಸ್ಸಿನಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ.<br><br>ಉಪಸಂಹಾರ : ದೂರದರ್ಶನವನ್ನು ನೋಡುವುದು ಹವ್ಯಾಸವಾಗಬಾರದು. ಅದು ಜ್ಞಾನದ ಸಾಧನವಾಗಬೇಕು. ದೂರದರ್ಶನ ಮುಳ್ಳಿರುವ ಗುಲಾಬಿಯಂತೆ ಸುಂದರವಾಗಿ ಕಂಡರೂ ಅದು ಒಳಿತು–ಕೆಡುಕಗಳ ಮಿಶ್ರಣವಾಗಿದೆ. ಈ ಯುಗದ ವರವಾಗಿರುವ ದೂರದರ್ಶನವನ್ನು, ಶಾಪವಾಗದಂತೆ ಬಹಳ ಎಚ್ಚರಿಕೆ ಬಳಸಿದರೆ ಯಾವ ಅಪಾಯವಿರುವುದಿಲ್ಲ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XII. | ಪತ್ರಲೇಖನ ಬರೆಯುವುದು : | 1x 5 = 5 |
| 38. | ನಿಮ್ಮನ್ನು ತಿಪಟೂರಿನ ಶೆಟ್ಟಿಗೆರೆ ಗ್ರಾಮದ ನಿವಾಸಿ ಮನ್ವಿತ್ ಎಂದು ಭಾವಿಸಿಕೊಂಡು, ನಿಮ್ಮ ಊರಿನ ಹಾಳಾದ ರಸ್ತೆಗಳನ್ನು ಸರಿಪಡಿಸುವಂತೆ ಕೋರಿ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.<br>ಅಥವಾ<br>ನಿಮ್ಮನ್ನು ಕುಮಟಾದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿನಿ ದಿಯಾ ಎಂದು ಭಾವಿಸಿಕೊಂಡು, ಶಾಲಾ ಪ್ರವಾಸಕ್ಕೆ ಹೋಗಲು 1000 ರೂಪಾಯಿಗಳನ್ನು ನೀಡುವಂತೆ ಕೋರಿ ಹರಿಹರದಲ್ಲಿ ವಾಸವಾಗಿರುವ ವೀರನಾರಾಯಣ ಎಂಬ ಹೆಸರಿನ ನಿಮ್ಮ ತಂದೆಯವರಿಗೆ ಒಂದು ಪತ್ರವನ್ನು ಬರೆಯಿರಿ.<br>ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರ : ವಾವಹಾರಿಕ ಪತ್ರ :<br><br>ಇವರಿಂದ, ದಿನಾಂಕ : 26/08/2023<br>ಮನ್ವಿತ್, ಸ್ಥಳ : ತಿಪಟೂರು.<br>ಶೆಟ್ಟಿಗೆರೆ,<br>ತಿಪಟೂರು.<br><br>ಇವರಿಗೆ,<br>ಮಾನ್ಯ ಅಧ್ಯಕ್ಷರು,<br>ಗ್ರಾಮಪಂಚಾಯಿತಿ,<br>ಶೆಟ್ಟಿಗೆರೆ, ತಿಪಟೂರು.<br><br>ಮಾನ್ಯರೇ,<br><br>ವಿಷಯ : ಹಾಳಾದ ರಸ್ತೆಗಳನ್ನು ಸರಿಪಡಿಸುವಂತೆ ಕೋರಿ.<br>* * *<br>ಮನ್ವಿತ್ ಆದ ನಾನು ಶೆಟ್ಟಿಗೆರೆ ಗ್ರಾಮದ ನಿವಾಸಿ. ನಮ್ಮ ಗ್ರಾಮದಲ್ಲಿ ರಸ್ತೆಗಳು ತುಂಬಾ ಹಾಳಾಗಿವೆ. ದೊಡ್ಡ ದೊಡ್ಡ ಗುಂಡಿಗಳು ಬಿದ್ದು ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಇದರಿಂದಾಗಿ ಅಪಘಾತಗಳು ಹೆಚ್ಚಾಗುತ್ತಿವೆ. ಅದರಲ್ಲೂ ಮಳೆ ಬಂದಾಗಲಂತೂ ಗುಂಡಿಗಳಲ್ಲಿ ನೀರು ತುಂಬಿಕೊಂಡು ಎದುರಾಗುವ ಕಷ್ಟ ಹೇಳತೀರದು. ಹಾಗಾಗಿ ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಹಾಳಾದ ರಸ್ತೆಯನ್ನು ಸರಿಪಡಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.<br><br>ವಂದನೆಗಳೊಂದಿಗೆ,<br><br>ತಮ್ಮ ವಿಶ್ವಾಸಿ<br>ಸಹಿ/–<br>(ಮನ್ವಿತ್) | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವೈಯಕ್ತಿಕ ಪತ್ರ :**<br>**ಇಂದ, ವಿಳಾಸ, ಸಂಬೋಧನೆ, ದಿನಾಂಕ**<br>**ಪತ್ರದ ಒಡಲು**<br>**ಗೆ, ವಿಳಾಸ, ಸಹಿಯೊಂದಿಗೆ ಮುಕ್ತಾಯ**<br>**ವಿನ್ಯಾಸ, ಭಾಷಾಶೈಲಿಗೆ**<br>**ಒಟ್ಟು** | **1 ಅಂಕ**<br>**2ಅಂಕಗಳು**<br>**1 ಅಂಕ**<br>**1 ಅಂಕ**<br>**5ಅಂಕಗಳು** |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರ : ವೈಯಕ್ತಿಕ ಪತ್ರ :<br><br>ಕ್ಷೇಮ ಶ್ರೀ ಇವರಿಂದ,<br>ದಿಯಾ,<br>10ನೇ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ಕುಮಟ.<br>ದಿನಾಂಕ : 25/10/2023<br><br>ತೀರ್ಥರೂಪರವರಿಗೆ ನಿಮ್ಮ ಪ್ರೀತಿಯ ಮಗಳು ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.<br><br>ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ಶಿಕ್ಷಕರ ಮಾರ್ಗದರ್ಶನದಂತೆ ಓದುವ ವೇಳಾಪಟ್ಟಿ ಮಾಡಿಕೊಂಡು ಅಭ್ಯಾಸ ಮಾಡುತ್ತಿದ್ದೇನೆ. ಆತ್ಮವಿಶ್ವಾಸದಿಂದ ವಾರ್ಷಿಕ ಪರೀಕ್ಷೆಯನ್ನು ಎದುರಿಸಿ ಉತ್ತಮ ಅಂಕಗಳನ್ನು ಪಡೆಯುತ್ತೇನೆ ಎಂಬ ನಂಬಿಕೆ ನನಗಿದೆ. ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ ಶಾಲೆಯಲ್ಲಿ ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಗೆ ಒಂದು ದಿನದ ಶೈಕ್ಷಣಿಕ ಪ್ರವಾಸವನ್ನು ದಿನಾಂಕ : 10/11/2023 ರಂದು ಏರ್ಪಡಿಸಿರುತ್ತಾರೆ. ನಾನು ಪ್ರವಾಸಕ್ಕೆ ಹೋಗಲು ಬಯಸಿದ್ದು, ತಾವುಗಳು ಅನುಮತಿ ನೀಡಿ 2000 ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಕಳುಹಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.<br><br>ಮನೆಯಲ್ಲಿ ತಾಯಿಯವರಿಗೂ ನನ್ನ ನಮಸ್ಕಾರವನ್ನು ತಿಳಿಸಿ.<br><br>ಇಂತಿ ನಿಮ್ಮ ಪ್ರೀತಿಯ ಮಗಳು<br>ಸಹಿ/–<br>(ದಿಯಾ)<br><br>ಇವರಿಗೆ,<br>ವೀರನಾರಾಯಣ,<br>ದೇವಾಲಯ ಬೀದಿ,<br>ಹರಿಹರ. | |

## 2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 4
## Academic Year 2023-24 Bengaluru North Dist. SSLC Practice Paper – 4
## 62K – ತೃತೀಯ ಭಾಷೆ – ಕನ್ನಡ

| | |
|---|---|
| ಸಮಯ : 3:00 ಗಂಟೆ | **Time : 3:00 Hrs** |
| ಗರಿಷ್ಠ ಅಂಕಗಳು : 80 | **Max. Marks : 80** |
| ಒಟ್ಟು ಪ್ರಶ್ನೆಗಳು : 38 | **Total No of Questions : 38** |

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **8 x 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಸ್ವರಗಳ ಸಂಖ್ಯೆ

   (ಎ) 9 (ಬಿ) 10

   (ಸಿ) 13 (ಡಿ) 25

2. ಬರವಣಿಗೆಯಲ್ಲಿ ಪದಗಳಿಗೆ ಹೆಚ್ಚುವರಿ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸುವ ಲೇಖನಚಿಹ್ನೆ

   (ಎ) ಭಾವಸೂಚಕ (ಬಿ) ಉದ್ಧರಣ

   (ಸಿ) ಆವರಣ (ಡಿ) ವಿವರಣಾತ್ಮಕ

3. 'ಮಕ್ಕಳು ಹಾಲನ್ನುಕುಡಿಯುತ್ತಾರೆ ಮತ್ತು ಹಣ್ಣನ್ನೂ ತಿನ್ನತ್ತಾರೆ' – ಇದೊಂದು

   (ಎ) ಮಿಶ್ರವಾಕ್ಯ (ಬಿ) ಸಂಯೋಜಿ ವಾಕ್ಯ

   (ಸಿ) ಅಧೀನವಾಕ್ಯ (ಡಿ) ಸಾಮಾನ್ಯ ವಾಕ್ಯ

4. 'ನಾವೆಲ್ಲರು' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಆದೇಶ (ಬಿ) ಆಗಮ

   (ಸಿ) ಗುಣ (ಡಿ) ಲೋಪ

5. ಸಂಸ್ಕೃತ ಭಾಷೆಯಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದ

(ಎ) ಆಕಾಶ (ಬಿ) ಮೇಜು

(ಸಿ) ರೈತ (ಡಿ) ಕಾಗದ

6. ಸಮುದ್ರದ ದೊಡ್ಡದೊಡ್ಡ ಅಲೆಗಳು ರಪರಪನೆ ರಭಸವಾಗಿ ಬಂದು ದಂಡೆಗೆ ಅಪ್ಪಳಿಸುತ್ತಿದ್ದವು – ಇಲ್ಲಿ ಬಳಕೆಯಾಗಿರುವ ದ್ವಿರುಕ್ತಿ ಪದ

(ಎ) ರಪರಪನೆ (ಬಿ) ದೊಡ್ಡದೊಡ್ಡ

(ಸಿ) ಅಪ್ಪಳಿಸುತ್ತಿದ್ದವು (ಡಿ) ರಭಸವಾಗಿ

7. 'ಗ್ರಂಥಗಿರಿ' ಇಲ್ಲಿರುವ ಅಲಂಕಾರ

(ಎ) ಉತ್ಪ್ರೇಕ್ಷ (ಬಿ) ಉಪಮಾ

(ಸಿ) ರೂಪಕ (ಡಿ) ಚಿತ್ರಕವಿತ್ವ

8. ಕೆಳಗಿನವುಗಳಲ್ಲಿ ಅಂಕಿತನಾಮಕ್ಕೆ ಉದಾಹರಣೆಯಾದ ಪದ

(ಎ) ಭಾರತ (ಬಿ) ಕುಂಟ

(ಸಿ) ಮೂಗ (ಡಿ) ಕುರುಡ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : **4 x 1 = 4**

9. ಕುಲಕರ್ಣಿ : ಭಾರತೀಯ ಅಧಿಕಾರಿ :: ಡಿ.ಎಸ್.ಪಿ. : -----------

10. 'ಸಂಧ್ಯಾರಾಗ' ಕೃತಿಯ ಕರ್ತೃ : ಅ.ನ.ಕೃಷ್ಣರಾಯ :: 'ರತ್ನನಪದಗಳು' ಕೃತಿಯ ಕರ್ತೃ : -----------

11. ಬೂಟಕತನದಲಿ : ಬಹಳ ಬಕುತಿ ಮಾಡಿ :: ನಾಟಕ ಸ್ತ್ರೀಯಂತೆ : ----------

12. ಬೋರಾಡು ತಾವೆ : ಮುಗಿಲಲ್ಲಿ :: ಜೋತಾಡು ತಾವೆ : -----------

**III.** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **4 x 1 = 4**

13. ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು?

14. ನವೀನ ಯುಗದ ಕೇತನ ಯಾವುದು?

15. ಪುಲಿಗೆರೆ ಸೋಮನಾಥನ ಅಂಕಿತ ಯಾವುದು?

16. ಬೇರೆಯವರ ಸಾಲಕ್ಕೆ ಯಾವಾಗ ಹೊಣೆಯಾಗಬೇಕೆಂದು ಕವಿ ಸೋಮನಾಥನು ಹೇಳಿದ್ದಾನೆ?

**IV.** ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **8 x 2 = 16**

17. ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡು ಬರುವ ಪ್ರಮುಖ ವಿಚಾರಗಳನ್ನು ತಿಳಿಸಿರಿ.

18. ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡರು?

19. ಗುರುಪಂಥವನ್ನು ಗುರುಗಳ ಮಹತ್ವದೊಂದಿಗೆ ವಿವರಿಸಿ.

20. ಕಿತ್ತೂರು ಚೆನ್ನಮ್ಮನು ಸೆರೆಯಾಗಲು ಕಾರಣವಾದ ಸನ್ನಿವೇಶವನ್ನು ಕುರಿತು ಬರೆಯಿರಿ.

21. ಆಂಗ್ಲರು ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೆ ಎಂದು ಕವಿ ಹೇಳಿರುವುದರ ಔಚಿತ್ಯವನ್ನು ತಿಳಿಸಿರಿ.

22. ಸ್ವರ್ಗ–ನರಕಗಳ ಹೊಸ ಸೂತ್ರವನ್ನು ಬಸವಣ್ಣನವರು ಹೇಗೆ ವಿವರಿಸಿದ್ದಾರೆ?

23. ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭಗಳನ್ನು ಕುರಿತು ಬರೆಯಿರಿ.

24. ವಿಶು ಜ್ಞಾನತಪ್ಪಿ ಉರುಳಲು ಕಾರಣವೇನು?

**V.** ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : **2 x 3 = 6**

25 "ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ".

26. "ಭೂಮಿತಾಯ ಕುಡಿಗಳೆಂದು ಪಣವ ತೊಡಿರಿ ಇಂದೆ".

**VI.** ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **4 x 3 = 12**

27. ಕೆಳದಿಯ ಚೆನ್ನಮ್ಮನು ಯುದ್ಧವನ್ನೇ ಮಾಡದೆ ಬಲಾಢ್ಯ ಮೊಗಲರನ್ನು ಸೋಲಿಸಿದ ಬಗೆಯನ್ನು ವಿವರಿಸಿರಿ.

28. ಸೋಮಣ್ಣ ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು? ವಿವರಿಸಿರಿ.

29. ಜಾತಿ, ಮತ, ಕುಲಗಳ ಗೋಡೆಯನ್ನು ಕೆಡುಹಬೇಕಾದ ಹೊಸತಲೆಮಾರಿನ ಉತ್ಸಾಹವನ್ನು ನೀವು ಏಕೆ ಪ್ರಶಂಶಿಸುವಿರಿ? ಕವಿಯ ಆಶಯ ಕೆಡದಂತೆ ಸಮರ್ಥಿಸಿ.

30. 'ಮಳೆದೇವರಲ್ಲಿ ರೈತನು ಮಾಡುವ ಪ್ರಾರ್ಥನೆಯನ್ನು ಕುರಿತು ನಿಮ್ಮ ಮಾತಿನಲ್ಲಿ ಬರೆಯಿರಿ.

**VII.** ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : **2 x 3 = 6**

31. ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ

32. ಪುರಂದರದಾಸ

**VIII.** ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : **1 x 3 = 3**

33. "ಉಪ್ಪು ತಿಂದವನು ನೀರು ಕುಡಿಯಲೇ ಬೇಕು"

ಅಥವಾ

"ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ"

**IX.** ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **1 x 4 = 4**

34. ಶಂ.ಬಾ.ಜೋಶಿಯವರ 'ಯಕ್ಷಪ್ರಶ್ನೆ' ಬೀಚಿಯವರ ಮನಸ್ಸನ್ನು ಹೇಗೆ ಸೂರೆಗೊಂಡಿತು? ವಿವರಿಸಿರಿ.

**ಅಥವಾ**

ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಬೀಚಿಯವರಿಗೆ ಮೆಚ್ಚುಗೆಯಾಗಲು ಕಾರಣವೇನು? ವಿವರಿಸಿರಿ.

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : **1 x 4 = 4**

35.

ಕಣ್‌ದಿಟ್ಟಿ ------------------------------------
------------------------------------------
------------------------------------------
------------------------------------ ನನ್ನ ಮತಿ

**ಅಥವಾ**

ಮುದುಡಿ ------------------------------------
------------------------------------------
------------------------------------------
------------------------------------ ಬಹ ಲಯಕೆ!

**XI.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **4 x 1 = 4**

ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರು ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ಮೇಲುಕೀಳೆಂಬ ತಾರತಮ್ಯವಿರಕೂಡದು. ವಿಜ್ಞಾನದ ಅನ್ವೇಷಣಕಾರ್ಯದಲ್ಲಿ ನಾವೆಲ್ಲಾ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೆ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೇ ಅನುಸರಿಸುವುದು ಸರ್ವಥಾಕೂಡದು. ಸ್ವಂತಿಕೆ ಇರಬೇಕು. ಹೊಸದಾರಿಯನ್ನು ಗುರುತಿಸಿ ಮುಂದುವರಿಯಬೇಕು. ಎಂದು ಒತ್ತಿಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದ ಕೂಡಲೇ ಒಂದು ಸುತ್ತು ಹೊರಟು ಎಲ್ಲಾ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ ಬೆನ್ನುತಟ್ಟಿ ಅವನನ್ನು ಎಲ್ಲರ ಎದುರು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಯನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

36. ಪ್ರಶ್ನೆಗಳು :

ಎ. ಸಿ.ವಿ.ರಾಮನ್ ತಮ್ಮ ಶಿಷ್ಯರನ್ನು ಸರಿಸಮಾನ ಕೆಲಸಗಾರರು ಎಂದು ಏಕೆ ಭಾವಿಸುತ್ತಿದ್ದರು?

ಬಿ. ಸಿ.ವಿ.ರಾಮನ್ ತಾವು ಆರಿಸಿಕೊಂಡ ಶಿಷ್ಯನನ್ನು ಹೇಗೆ ನೋಡಿಕೊಳ್ಳುತ್ತಿದ್ದರು?

ಸಿ. ಬೆಳಿಗ್ಗೆ ಪ್ರಯೋಗಾಲಕ್ಕೆ ಬಂದಕೂಡಲೇ ಸಿ.ವಿ.ರಾಮನ್‌ರ ದಿನಚರಿ ಏನಾಗಿತ್ತು?

ಡಿ. ಸಿ.ವಿ.ರಾಮನ್ ಶಿಷ್ಯನನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದುದು ಯಾವಾಗ?

XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : **4 x 1 = 4**

37. ಪರಿಸರ ರಕ್ಷಣೆ ಮತ್ತು ಮಾಲಿನ್ಯ

ಅಥವಾ

ರಾಷ್ಟ್ರೀಯ ಭಾವೈಕ್ಯತೆ

XIII. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **5 x 1 = 5**

38. ನಿಮ್ಮನ್ನು ಮೂಡಿಗೆರೆಯ ನಿವಾಸಿ ಪ್ರೀತಮ್ ಎಂದು ಭಾವಿಸಿಕೊಂಡು, ನಿಮ್ಮೂರಿನಲ್ಲಿ ಶುದ್ಧಕುಡಿಯುವ ನೀರಿನ ಘಟಕವನ್ನು ತೆರೆಯುವಂತೆ ಕೋರಿ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಸೋಮನಾಥಪುರದ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ ದಿವಿಷ ಎಂದು ಭಾವಿಸಿಕೊಂಡು, ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಕೋಲಾರದಲ್ಲಿ ವಾಸವಿರುವ ಸುವರ್ಣ ಎಂಬ ಹೆಸರಿನ ನಿಮ್ಮ ತಾಯಿಯವರಿಗೆ ಒಂದು ಪತ್ರವನ್ನು ಬರೆಯಿರಿ.

********************

## 2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 4
## Academic Year 2023-24 Bengaluru North Dist. SSLC Practice Paper – 4
### 62K – ತೃತೀಯ ಭಾಷೆ – ಕನ್ನಡ

ಸಮಯ : 3:00 ಗಂಟೆ — Time : 3:00 Hrs

ಗರಿಷ್ಠ ಅಂಕಗಳು : 80 — Max. Marks : 80

ಒಟ್ಟು ಪ್ರಶ್ನೆಗಳು : 38 — Total o No of Questions : 38

## ಮಾದರಿ ಉತ್ತರಗಳು

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 8 x 1 = 8 |
| 1. | ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಸ್ವರಗಳ ಸಂಖ್ಯೆ<br>(ಎ) 9 (ಬಿ) 10<br>(ಸಿ) 13 (ಡಿ) 25<br>ಉತ್ತರ : (ಸಿ) 13 | |
| 2. | ಬರವಣಿಗೆಯಲ್ಲಿ ಪದಗಳಿಗೆ ಹೆಚ್ಚುವರಿ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಬಳಸುವ ಲೇಖನಚಿಹ್ನೆ<br>(ಎ) ಭಾವಸೂಚಕ (ಬಿ) ಉದ್ಧರಣ<br>(ಸಿ) ಆವರಣ (ಡಿ) ವಿವರಣಾತ್ಮಕ<br>ಉತ್ತರ : (ಸಿ) ಆವರಣ | |
| 3. | ಮಕ್ಕಳು ಹಾಲನ್ನುಕುಡಿಯುತ್ತಾರೆ ಮತ್ತು ಹಣ್ಣನ್ನೂ ತಿನ್ನತ್ತಾರೆ' – ಇದೊಂದು<br>(ಎ) ಮಿಶ್ರವಾಕ್ಯ (ಬಿ) ಸಂಯೋಜಿ ವಾಕ್ಯ<br>(ಸಿ) ಅಧೀನವಾಕ್ಯ (ಡಿ) ಸಾಮಾನ್ಯ ವಾಕ್ಯ<br>ಉತ್ತರ : (ಬಿ) ಸಂಯೋಜಿ ವಾಕ್ಯ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 4. | ‘ನಾವೆಲ್ಲರು’ ಪದವು ಈ ಸಂಧಿಗೆ ಉದಾಹರಣೆಯಾಗಿದೆ<br><br>ಎ) ಆದೇಶ ಬಿ) ಆಗಮ<br>ಸಿ) ಗುಣ ಡಿ) ಲೋಪ<br><br>ಉತ್ತರ : ಡಿ) ಲೋಪ | |
| 5. | ಸಂಸ್ಕೃತ ಭಾಷೆಯಿಂದ ಬಂದು ಕನ್ನಡದಲ್ಲಿ ಬಳಕೆಯಾಗುತ್ತಿರುವ ಪದ<br><br>(ಎ) ಆಕಾಶ (ಬಿ) ಮೇಜು<br>(ಸಿ) ರೈತ (ಡಿ) ಕಾಗದ<br><br>ಉತ್ತರ : (ಎ) ಆಕಾಶ | |
| 6. | ಸಮುದ್ರದ ದೊಡ್ಡದೊಡ್ಡ ಅಲೆಗಳು ರಪರಪನೆ ರಭಸವಾಗಿ ಬಂದು ದಂಡೆಗೆ ಅಪ್ಪಳಿಸುತ್ತಿದ್ದವು – ಇಲ್ಲಿ ಬಳಕೆಯಾಗಿರುವ ದ್ವಿರುಕ್ತಿ ಪದ<br><br>(ಎ) ರಪರಪನೆ (ಬಿ) ದೊಡ್ಡದೊಡ್ಡ<br>(ಸಿ) ಅಪ್ಪಳಿಸುತ್ತಿದ್ದವು (ಡಿ) ರಭಸವಾಗಿ<br><br>ಉತ್ತರ : (ಬಿ) ದೊಡ್ಡದೊಡ್ಡ | |
| 7. | ‘ಗ್ರಂಥಗಿರಿ’ ಇಲ್ಲಿರುವ ಅಲಂಕಾರ<br><br>(ಎ) ರೂಪಕ (ಬಿ) ಉಪಮಾ<br>(ಸಿ) ಉತ್ಪ್ರೇಕ್ಷ (ಡಿ) ಚಿತ್ರಕವಿತ್ವ<br><br>ಉತ್ತರ : (ಎ) ರೂಪಕ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಕೆಳಗಿನವುಗಳಲ್ಲಿ ಅಂಕಿತನಾಮಕ್ಕೆ ಉದಾಹರಣೆಯಾದ ಪದ<br><br>(ಎ) ಕುರುಡ (ಬಿ) ಕುಂಟ<br>(ಸಿ) ಮೂಗ (ಡಿ) ಭಾರತ<br><br>ಉತ್ತರ : (ಡಿ) ಭಾರತ | 4 x 1 = 4 |
| II. | ಸಂಬಂಧೀ ಪದ ಬರೆಯುವುದು ( ಪ್ರತಿ ಸರಿ ಉತ್ತರಕ್ಕೆ 1 ಅಂಕ) : | |
| 9. | ಕುಲಕರ್ಣಿ : ಭಾರತೀಯ ಅಧಿಕಾರಿ :: ಡಿ.ಎಸ್.ಪಿ. : __________<br><br>ಉತ್ತರ : ಬ್ರಿಟಿಷ್ ಪೋಲೀಸ್ ಅಧಿಕಾರಿ | |
| 10. | 'ಸಂಧ್ಯಾರಾಗ' ಕೃತಿಯ ಕರ್ತೃ : ಅ.ನ.ಕೃಷ್ಣರಾಯ :: 'ರತ್ನನಪದಗಳು' ಕೃತಿಯ ಕರ್ತೃ : __________<br><br>ಉತ್ತರ : ಜಿ.ಪಿ. ರಾಜರತ್ನಂ | |
| 11. | ಬೂಟಕತನದಲಿ : ಬಹಳ ಬಕುತಿ ಮಾಡಿ :: ನಾಟಕ ಸ್ತ್ರೀಯಂತೆ : __________<br><br>ಉತ್ತರ : ಬಯಲ ಡಂಭವ ತೋರಿ | |
| 12. | 12. ಬೋರಾಡು ತಾವೆ : ಮುಗಿಲಲ್ಲಿ :: ಜೋತಾಡು ತಾವೆ : __________<br><br>ಉತ್ತರ : ಕುಣಿಗಲು ಕುಚ್ಚಲು ಮೀನು | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ.<br>( ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 4 x 1 = 4 |
| 13. | ಗಾಂಧೀಜಿಯವರು ಕೊಟ್ಟ ಮಂತ್ರ ಯಾವುದು?<br>ಉತ್ತರ : ಗಾಂಧೀಜಿಯವರು ಕೊಟ್ಟ 'ಮಂತ್ರ ಮಾಡು ಇಲ್ಲವೆ ಮಡಿ.' | |
| 14. | ನವೀನ ಯುಗದ ಕೇತನ ಯಾವುದು?<br>ಉತ್ತರ : ನವೀನ ಯುಗದ ಕೇತನ ಕ್ರಾಪುತಲೆ. | |
| 15. | ಪುಲಿಗೆರೆ ಸೋಮನಾಥನ ಅಂಕಿತ ಯಾವುದು?<br>ಉತ್ತರ : ಪುಲಿಗೆರೆ ಸೋಮನಾಥನ ಅಂಕಿತ ಹರಹರಾ ಶ್ರೀಚೆನ್ನಸೋಮೇಶ್ವರಾ. | |
| 16 | ಬೇರೆಯವರ ಸಾಲಕ್ಕೆ ಯಾವಾಗ ಹೊಣೆಯಾಗಬೇಕೆಂದು ಕವಿ ಸೋಮನಾಥನು ಹೇಳಿದ್ದಾನೆ?<br>ಉತ್ತರ : ಬೇರೆಯವರ ಸಾಲಕ್ಕೆ ದಂಡ ತೆರುವ ಸಾಮರ್ಥ್ಯವಿರುವವನು ಹೊಣೆಯಾಗಬೇಕೆಂದು ಕವಿ ಸೋಮನಾಥನು ಹೇಳಿದ್ದಾನೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | 4 x 1 = 4 |
| 17. | ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡು ಬರುವ ಪ್ರಮುಖ ವಿಚಾರಗಳನ್ನು ತಿಳಿಸಿರಿ.<br>ಉತ್ತರ : ಬದುಕಿನಲ್ಲಿ ಕಂಡು ಕೇಳಿದ ಘಟನೆಗಳು, ಮಹಿಳಾಲೋಕದ ಕನಸುಗಳು, ಆದರ್ಶಗಳು, ಸಮಸ್ಯೆಗಳು, ಮಾನವ ಜೀವಿಗಳ ಸ್ವಾತಂತ್ರ್ಯ, ಸದಭಿರುಚಿ, ಜಾತ್ಯತೀತ ಸಮಾಜ ನಿರ್ಮಾಣ, ಮಾನವೀಯ ವಿಚಾರಗಳು, ಹಿಂಸೆಯ ನಾನಾ ಮುಖಗಳ ಅನಾವರಣ ಇವೆಲ್ಲವೂ ಗೌರಮ್ಮನವರ ಬರವಣಿಗೆಯಲ್ಲಿ ಕಂಡು ಬರುವ ಪ್ರಮುಖ ವಿಚಾರಗಳಾಗಿವೆ. | |
| 18. | ಕೊಡಗಿನ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡರು?<br>ಉತ್ತರ : ಕೊಡಗಿನ ಗೌರಮ್ಮನವರು ಗಾಂಧೀಜಿಯವರ ಪರಮ ಅನುಯಾಯಿ ಆಗಿದ್ದರು. ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಅಪಾರವಾದ ಆಸಕ್ತಿ ಇದ್ದ ಅವರು ಸ್ವತ: ಖಾದಿ ಬಟ್ಟೆಗಳನು ತೊಡುತ್ತಿದ್ದರು. ಗಾಂಧೀಜಿಯವರು ಸ್ಥಾಪಿಸಿದ ಸ್ವಾತಂತ್ರ್ಯ ಸಂಗ್ರಾಮ ನಿಧಿಗೆ ತಮ್ಮ ಒಡವೆಗಳನ್ನು ನೀಡಿದರು. ಈ ರೀತಿ ಗೌರಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. | |
| 19. | ಗುರುಪಂಥವನ್ನು ಗುರುಗಳ ಮಹತ್ವದೊಂದಿಗೆ ವಿವರಿಸಿ.<br>ಉತ್ತರ : ಗುರುಗಳಲ್ಲಿ ಭಕ್ತಿಭಾವವನ್ನು ತೋರಿ ನಡೆಯುವವರನ್ನು ಗುರುಪಂಥದವರೆಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಗುರುಗಳಿಗೆ ಅಗ್ರಸ್ಥಾನವಿದೆ. ಜನರು ಗುರುಕೃಪೆಯನ್ನು ಪಡೆಯಲು ಮಠ ಮಂದಿರಗಳಿಗೆ ಹೋಗುತ್ತಾರೆ. ಆ ದಾರಿಯಲ್ಲೇ ಹೋದ ಶರೀಫರಿಗೂ ಗುರುಗೋವಿಂದ ಭಟ್ಟರೆಂಬ ಆದರ್ಶಗುರುಗಳು ದೊರಕಿದರು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ಕಿತ್ತೂರು ಚೆನ್ನಮ್ಮನು ಸೆರೆಯಾಗಲು ಕಾರಣವಾದ ಸನ್ನಿವೇಶವನ್ನು ಕುರಿತು ಬರೆಯಿರಿ.<br><br>ಉತ್ತರ : ಕಿತ್ತೂರು ರಾಣಿ ಚೆನ್ನಮ್ಮ ಬ್ರಿಟಿಷರ ಆಡಳಿತವನ್ನು ವಿರೋಧಿಸಿ ತನ್ನ ಸಂಸ್ಥಾನವನ್ನು ಸ್ವತಂತ್ರವಾಗಿ ಮುನ್ನಡೆಸುತ್ತಿದ್ದಳು. ಇದರಿಂದ ಕೋಪಗೊಂಡ ಬ್ರಿಟಿಷರು ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿ, ಮದ್ದಿನಲ್ಲಿ ಸೆಗಣಿ ಸೇರಿಸಿ ರಾಣಿ ಚೆನ್ನಮ್ಮಾಳ ತೋಪು ಹಾರದಂತೆ ಮಾಡಿ ಆಕೆಯನ್ನು ಮೋಸದಿಂದ ಸೆರೆಹಿಡಿದರು. | |
| 21. | ಆಂಗ್ಲರು ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೆ ಎಂದು ಕವಿ ಹೇಳಿರುವುದರ ಔಚಿತ್ಯವನ್ನು ತಿಳಿಸಿರಿ.<br><br>ಉತ್ತರ : ಆಂಗ್ಲರು ಬಿಳಿಯ ಬಣ್ಣದವರು. ಆಫ್ರಿಕನ್ನರು ಕಪ್ಪು ಬಣ್ಣದವರು. ಆದರೆ ಅವರ ಬಣ್ಣಗಳಲ್ಲಿ ವ್ಯತ್ಯಾಸವಿದೆಯಾದರೂ ಅವರ ದೇಹದಲ್ಲಿ ಹರಿಯುವ ರಕ್ತದ ಬಣ್ಣ ಮತ್ತು ಸ್ವರೂಪ ಮಾತ್ರ ಒಂದೇ ಆಗಿದೆ. ಹಾಗಾಗಿ ಆಂಗ್ಲ ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೆ ಎಂದು ಕವಿ ಹೇಳಿದ್ದಾರೆ. | |
| 22. | ಸ್ವರ್ಗ–ನರಕಗಳ ಹೊಸ ಸೂತ್ರವನ್ನು ಬಸವಣ್ಣನವರು ಹೇಗೆ ವಿವರಿಸಿದ್ದಾರೆ?<br><br>ಉತ್ತರ : ಬಸವಣ್ಣನವರು ಸತ್ಯವನ್ನು ನುಡಿಯುವುದೇ ದೇವಲೋಕ. ಮಿಥ್ಯವನ್ನು ನುಡಿಯುವುದೇ ಮರ್ತ್ಯಲೋಕವೆಂದು ಹೇಳಿದ್ದಾರೆ. ಆಚಾರವೇ ಸ್ವರ್ಗ, ಅನಾಚಾರವೇ ನರಕ ಎನ್ನುವ ಮೂಲಕ ಸ್ವರ್ಗ–ನರಕಗಳ ಬಗೆಗೆ ಬಸವಣ್ಣನವರು ಹೊಸ ಸೂತ್ರವನ್ನು ನೀಡಿದ್ದಾರೆ. | |
| 23. | ಸ್ವಾತಿ ಮಳೆ ಸುರಿದಾಗ ರೈತನಿಗಾಗುವ ಲಾಭಗಳನ್ನು ಕುರಿತು ಬರೆಯಿರಿ.<br><br>ಉತ್ತರ : ಸ್ವಾತಿ ಮಳೆ ಬಂದಾಗ ಸಾವಿರಾರು ಕೆರೆಗಳು ತುಂಬುತ್ತವೆ. ಹೊಲಗದ್ದೆಗಳಿಗೆ ಬೇಕಾದ ನೀರು ಸಿಗುತ್ತದೆ. ಕುಣಿಗಲ್ ಕೆರೆಯಲ್ಲಿ ಕುಚ್ಚಲು ಮೀನಿನ ಸಂತತಿ ಹೆಚ್ಚಾಗುತ್ತದೆ. ಆ ಮೀನುಗಳನ್ನು ಹಿಡಿದು ಮಾರಿ ರೈತನು ಹೆಚ್ಚು ಲಾಭಗಳಿಸುತ್ತಾನೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ವಿಶು ಜ್ಞಾನತಪ್ಪಿ ಉರುಳಲು ಕಾರಣವೇನು?<br><br>ಉತ್ತರ : ದರ್ಮಪದನು ದೇವಾಲಯದ ಕಲಶವನ್ನು ಅರ್ಧಗಂಟೆಯಲ್ಲಿ ಕೂಡಿಸಿ ಜಯಭೇರಿ ಹೊಡೆದ. ಇದರಿಂದ ವಿಶುವಿಗೆ ಅವಮಾನವಾಗಿ ತಲೆತಗ್ಗಿಸುವಂತಾಯಿತು. ಈಗಿವನು ಮಹಾರಾಜರಿಂದ ಬಿರುದುಬಾವಲಿಗಳನ್ನು ತನ್ನಿದಿರೇ ಪಡೆಯುತ್ತಾನೆ. ತಾನೀಗ ತನ್ನ ಕೈ ಕೆಳಗೆ ಕೆಲಸ ಮಾಡುತ್ತಿದ್ದ ಇತರ ಶಿಲ್ಪಿಗಳ ಮುಂದೆ ಅವಮಾನಿತನಾಗಿದ್ದೇನೆ ಎಂದು ಯೋಚಿಸುತ್ತ ಉದ್ವೇಗದಿಂದ ಜ್ಞಾನತಪ್ಪಿ ಕೆಳಗುರುಳಿದನು.<br><br>ಸಂದರ್ಭಸಹಿತ ವಿವರಣೆ : | |
| V. | | 2 x 3 = 6 |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು – ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ನನ್ನ ಖೈದಿಯ ರಕ್ಷಣೆಯನ್ನು ನಾನು ಸರಿಯಾಗಿ ಮಾಡಬೇಕಷ್ಟೆ".<br>ಉತ್ತರ:<br><br>ಆಯ್ಕೆ: ಈ ವಾಕ್ಯವನ್ನು ಗೊರೂರರು ಬರೆದಿರುವ 'ಲಾಕಪ್ಪಿನಲ್ಲಿ ಒಂದು ರಾತ್ರಿ' ಗದ್ಯದಿಂದ ಆರಿಸಲಾಗಿದೆ.<br><br>ಸಂದರ್ಭ: ಈ ಮಾತನ್ನು ಟ್ರಾಫಿಕ್ ಪೊಲೀಸರು ಗೊರೂರರಿಗೆ ಹೇಳಿದರು. ಟ್ರಾಫಿಕ್ ಪೋಲೀಸರು ಗೊರೂರರಿಗೆ ತಮ್ಮ ವಶದಲ್ಲಿದ್ದ ಲಾಕಪ್ಪಿನಲ್ಲಿ ಮಲಗಲು ಸೂಚಿಸಿದಾಗ ಈ ಮಾತು ಬಂದಿದೆ.<br><br>ಸ್ವಾರಸ್ಯ: ಅಮೆರಿಕಾದ ಪೊಲೀಸರ ಕರ್ತವ್ಯಪ್ರಜ್ಞೆಯನ್ನು ಕಾಣಬಹುದು | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | "ಭೂಮಿತಾಯ ಕುಡಿಗಳೆಂದು ಪಣವ ತೊಡಿರಿ ಇಂದೆ".<br>ಉತ್ತರ:<br><br>ಆಯ್ಕೆ: ಈ ವಾಕ್ಯವನ್ನು ಕೆ.ಎಸ್.ನಿಸಾರ್ ಅಹಮದ್‌ರವರು ಬರೆದಿರುವ 'ಭೂಮಿ ತಾಯ ಕುಡಿಗಳು' ಪದ್ಯದಿಂದ ಆರಿಸಲಾಗಿದೆ.<br><br>ಸಂದರ್ಭ: ಈ ಮಾತನ್ನು ಕವಿ ನಿಸಾರ್ ಅಹಮದ್ ಹೇಳಿದ್ದಾರೆ. ಭಾರತೀಯರಾದ ನಾವು ಈ ಭೂಮಿತಾಯ ಕುಡಿಗಳೆಂದು ಪಣವ ತೊಡಬೇಕೆಂದು ಕವಿ ತಿಳಿಸುವಾಗ ಈ ಮಾತು ಬಂದಿದೆ.<br><br>ಸ್ವಾರಸ್ಯ: ನಾವೆಲ್ಲರೂ ಒಂದೇ ಎಂಬ ಏಕತಾಭಾವವನ್ನು ಕಾಣಬಹುದು. | |
| VI. | ಐದು – ಆರು ವಾಕ್ಯಗಳಲ್ಲಿ ಉತ್ತರಿಸುವುದು : | 4 x 3 = 12 |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ಕೆಳದಿಯ ಚೆನ್ನಮ್ಮನು ಯುದ್ಧವನ್ನೇ ಮಾಡದೆ ಬಲಾಢ್ಯ ಮೊಗಲರನ್ನು ಸೋಲಿಸಿದ ಬಗೆಯನ್ನು ವಿವರಿಸಿರಿ.<br><br>ಉತ್ತರ : ಕೆಳದಿಯ ರಾಣಿ ಚೆನ್ನಮ್ಮ ಮೊಗಲರಿಗೆ ಅಂಜಿ ಓಡಿ ಬಂದ ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯ ನೀಡಿದಳು. ಈ ವಿಷಯ ತಿಳಿದ ಔರಂಗಜೇಬನು ತನ್ನ ಮಗ ಅಜಮತಾರನ ಜೊತೆ ದೊಡ್ಡ ಸೈನ್ಯವನ್ನು ಕೆಳದಿಯ ಮೇಲೆ ಧಾಳಿ ಮಾಡಲು ಕಳುಹಿಸಿದನು. ಚಾಣಾಕ್ಷಳಾದ ಚೆನ್ನಮ್ಮಾಜಿಯು ಮೊಗಲರ ಆಕ್ರಮಣದಿಂದ ಪಾರಾಗಲು ಬೆಟ್ಟಗುಡ್ಡಗಳ ಪ್ರದೇಶವಾದ ಭುವನಗಿರಿಗೆ ರಾಜಧಾನಿಯನ್ನು ಸ್ಥಳಾಂತರಿಸಿದಳು. ಸುತ್ತಲಿನ ಬೆಟ್ಟ, ಕಣಿವೆ, ಇಕ್ಕಟ್ಟುದಾರಿ, ಕಾಲುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನಿಕರನ್ನು ನಿಲ್ಲಿಸಿ ಮೊಗಲ್ ಸೈನಿಕರಿಗೆ ಅನ್ನ ನೀರು ಸಿಗದಂತೆ ಮಾಡಿದಳು. ದಟ್ಟವಾದ ಕಾಡುಗಳ ಸಂದುಗೊಂದುಗಳಲ್ಲಿ ಚಲಿಸಲಾಗದೆ ಮಲೆನಾಡಿನ ಮಳೆಗೆ ತತ್ತರಿಸಿ ಪ್ರಾಣಭೀತಿಯಿಂದ ಓಡಿಹೋದರು. ದಿಕ್ಕುತೋಚದೆ ಓಡುವಾಗ ಹೇರಳವಾದ ಯುದ್ಧ ಸಾಮಗ್ರಿಗಳನ್ನು ಬಿಟ್ಟು ಹೋದರು. ಈ ರೀತಿ ಯುದ್ಧವನ್ನೇ ಮಾಡದೆ ಕೆಳದಿಯ ಚೆನ್ನಮ್ಮ ಬಲಾಢ್ಯ ಮೊಗಲರನ್ನು ಸೋಲಿಸಿದಳು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಸೋಮಣ್ಣ ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು? ವಿವರಿಸಿರಿ.<br><br>ಉತ್ತರ : ಕುಲಕರ್ಣಿಯವರೇ ಇಂತಹ ಬಾಲಕನ ಮೇಲೆ ಗುಂಡು ಹಾರಿಸುವ ಹೀನಕೃತ್ಯಕ್ಕೆ ನಿಮ್ಮ ಕೈಗಳು ಹೇಗೆ ಮೇಲೆತ್ತಿದವು. ಇವನನ್ನು ಹಿಡಿದು ಜೈಲಿಗೆ ಹಾಕಬಹುದಿತ್ತು. ಅದನ್ನು ಬಿಟ್ಟು ಗುಂಡಿಕ್ಕಿ ಕೊಂದದ್ದು ನಿಮ್ಮ ಪರಾಕ್ರಮವಲ್ಲವೇ? ದುಷ್ಟಟಗಳಿಂದ ದೂರವಿರುವ, ಸ್ವಚ್ಛತೆಯ ಪಾಠ ಕಲಿಸುವ, ಅಜ್ಞಾನವನ್ನು ಹೋಗಲಾಡಿಸುವ ಆಜ್ಞೆ ಮಾಡಿ ಅಕ್ಷರಶ: ಪಾಲಿಸುವೆವು. ದಾನವನ ದರ್ಪದಿಂದ ಸುಖಸಿಗುವುದೆಂಬ ಭ್ರಾಂತಿ ಬಿಡಿ. ನಿಮ್ಮ ಸುತ್ತಲಿನ ಜನರ ಗೋಳಿಗೆ ನೀವೇ ಕಾರಣರು. ಗೇಣು ಹೊಟ್ಟೆಗಾಗಿ ದೇಶದ ಕಂದಮ್ಮರನ್ನು ಕೊಂದು ತೋರುವ ನಿಮ್ಮ ಕರ್ತವ್ಯನಿಷ್ಠೆಗೆ, ನಿಮ್ಮ ಬದುಕಿಗೆ ನನ್ನ ಶತದಿಕ್ಕಾರವಿರಲಿ ಎಂದು ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಖಂಡಿಸಿದನು. | |
| 29. | ಜಾತಿ, ಮತ, ಕುಲಗಳ ಗೋಡೆಯನ್ನು ಕೆಡುಹಬೇಕಾದ ಹೊಸತಲೆಮಾರಿನ ಉತ್ಸಾಹವನ್ನು ನೀವು ಏಕೆ ಪ್ರಶಂಶಿಸುವಿರಿ? ಕವಿಯ ಆಶಯ ಕೆಡದಂತೆ ಸಮರ್ಥಿಸಿ.<br><br>ಉತ್ತರ : ನಾವೆಲ್ಲರೂ ಒಂದೆ ಜಾತಿ, ಒಂದೆ ಮತ, ಒಂದೆ ಕುಲವೆಂಬ ಭಾವನೆಯನ್ನು ಹೊಂದಿ ಮನುಜರಾಗಿ ಬಾಳಬೇಕು. ಆದರೆ ಜಾತಿ, ಮತ, ಧರ್ಮಗಳು ಮನುಷ್ಯ ಮನುಷ್ಯರ ನಡುವೆ ಅಂತರವನ್ನು ಸೃಷ್ಟಿಸುವ ಅಡ್ಡಗೋಡೆಗಳಾಗಿ ಪರಿಣಮಿಸಿವೆ. ಇಂತಹ ಅಡ್ಡಗೋಡೆಗಳನ್ನು ಪ್ರಳಯ ಕಾಲದ ರುದ್ರರಂತೆ ಈ ತಲೆಮಾರಿನ ಯುವಜನರು ಕುಟ್ಟಿ ಕೆಡವುತ್ತಾರೆ. ಹೊಸ ಬಾಳಿಗೆ ಸಮಾನತೆಯ ಭಾವವನ್ನು ಸಾರುವ ನವವಿಧಾತರಾಗಿದ್ದಾರೆ. ಕ್ರಾಪುತಲೆಯ ಕೇತನದಡಿಯಲ್ಲಿ ಒಂದಗೂಡಿ ಮಡಿವಂತಿಕೆಯ ಕಟ್ಟಳೆಗಳನ್ನು ತೊರೆದು ಹೋರಾಡುತ್ತಾರೆ. ಎಲ್ಲಾ ಒಂದೆ ಎಂಬ ಘೋಷಣದೊಂದಿಗೆ ವಿಶ್ವಮಾನವತೆಯ ಸಂದೇಶವನ್ನು ಸಾರುತ್ತಾರೆ. ಹಳೆಯ ಕೊಳೆಯನ್ನು ತೊಲಗಿಸಿ ಹೊಸತನದಿಂದ ಸ್ವರ್ಗವನ್ನೇ ಈ ಭೂಮಿಗೆ ಎಳೆದು ತರುವ ಉತ್ಸಾಹ ತೋರಿಸುತ್ತಾರೆ. ಹಚ್ಚಹಸುರಿನ ಹೃದಯಮಂದಿರಕ್ಕೆ ಹೆಣ್ಣು–ಗಂಡು, ಬಡವ–ಬಲ್ಲಿದ, ಜಾತಿ–ಧರ್ಮಗಳ ಭೇದಭಾವವಿಲ್ಲದೆ ಎಲ್ಲರನ್ನು ಸ್ವಾಗತಿಸುತ್ತಾರೆ. ಈ ರೀತಿ ಚಿರವಾದ, ಉದಾರವಾದ, ಸುಂದರವಾದ ಸಮಾಜ ನಿರ್ಮಾಣ ಮಾಡುವ ಯುವಜನರ ಉತ್ಸಾಹವನ್ನು ನಾವು ಪ್ರಶಂಸಿಸಬಹುದಾಗಿದೆ. | |
| 30. | ‘ಮಳೆದೇವರಲ್ಲಿ ರೈತನು ಮಾಡುವ ಪ್ರಾರ್ಥನೆಯನ್ನು ಕುರಿತು ನಿಮ್ಮ ಮಾತಿನಲ್ಲಿ ಬರೆಯಿರಿ.<br><br>ಉತ್ತರ : ಮಳೆ ಇಲ್ಲದೆ ಈ ಭೂಮಿ ಬರಡಾಗಿದೆ. ಮೇವು ನೀರಿಲ್ಲದ ದನಕರುಗಳು ಸೊರಗಿ ಹೋಗಿವೆ. ಅಪ್ಪ ಮಳೆರಾಯ ನೀ ಬಂದು ಕರುಣಿಸೋ ಎಂದು ಪ್ರಾರ್ಥಿಸುತ್ತಾನೆ. ಪೂರ್ವ ದಿಕ್ಕಿನ ಮಳೆಯ ಮೋಡದ ಚಂದ ಗೋಡೆಗೆ ಕಪ್ಪು ಬಣ್ಣ ಬಳಿದಂತೆ ಕಂಡು ಬಂದಿದೆ. ಆಕಾಶದಿಂದ ಇಳಿದು ಬರುವ ಮಳೆಹನಿಗಳ ಸದ್ದು ರೈತನಿಗೆ ಸಂತಸವನ್ನು ತಂದಿದೆ. ಪೂರ್ವ ದಿಕ್ಕಿನಿಂದ ಬರುವ ಸೋನೆಮಳೆಯು ಭೈರವ ಬೆಟ್ಟದ ಮೇಲೆ ಹೆಚ್ಚಾಗಿ ಸುರಿದು ಬರಬೇಕು. ಸ್ವಾತಿಮಳೆ ಬಂದು ಸಾವಿರಾರು ಕೆರೆಗಳು ತುಂಬಿ ಬರಬೇಕು. ಆಗ ಕುಣಿಗಲು ಕೆರೆಯಲ್ಲಿ ಕುಚ್ಚಲು ಮೀನುಗಳ ಸಂತತಿ ಹೆಚ್ಚಾಗಿ ಲಾಭ ಬರುವಂತಾಗಲಿ ಎಂದು ರೈತನು ಮಳೆದೇವರನ್ನು ಪ್ರಾರ್ಥಿಸುತ್ತಾನೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VII. | ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :<br>ಜನ್ಮಸ್ಥಳ, ಕಾಲಕ್ಕೆ<br>ಕೃತಿಗೆ<br>ಭಾಷಾಶೈಲಿಗೆ<br>ಒಟ್ಟು | 2 x 3 = 6<br>1 ಅಂಕ<br>1 ಅಂಕ<br>1 ಅಂಕ<br>3 ಅಂಕಗಳು |
| 31. | ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ<br>ಉತ್ತರ : ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಅವರು 1950 ರಂದು ಬೆಳಗಾವಿಯಲ್ಲಿ ಜನಿಸಿದರು. ಜೀವನಧಾರೆ, ಚಿಣ್ಣರ ಚಿತ್ತಾರ, ಚಿಣ್ಣರ ಚಿಲಿಪಿಲಿ, ಜೀವನ್ಮುಕ್ತಿ, ಸಮಾಜ ವಿಕಾಸಕ್ಕೆ ಶರಣ ಸಂಸ್ಕೃತಿ ಇತ್ಯಾದಿ ಇವರು ಬರೆದ ಕೃತಿಗಳು. | |
| 32. | ಪುರಂದರದಾಸ<br>ಉತ್ತರ : ಪುರಂದರದಾಸರ ಕಾಲ 16ನೆಯ ಶತಮಾನ. ಇವರ ಜನ್ಮಸ್ಥಳ ಪುರಂದರಗಡ. ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ಬರೆದಿದ್ದಾರೆ. ಇವರ ಕೀರ್ತನೆಗಳ ಅಂಕಿತ ಪುರಂದರ ವಿಠಲ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ) | 1 x 3 = 3 |
| 33. | "ಉಪ್ಪು ತಿಂದವನು ನೀರು ಕುಡಿಯಲೇ ಬೇಕು"<br>ಅಥವಾ<br>"ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ" | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| | ಉತ್ತರ : "ಉಪ್ಪು ತಿಂದವನು ನೀರು ಕುಡಿಯಲೇ ಬೇಕು"<br>ಗಾದೆಯ ಮಹತ್ವ : ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br>ಅರ್ಥ ಮತ್ತು ವಿವರಣೆ : 'ಉಪ್ಪು ತಿಂದವನು ನೀರು ಕುಡಿಯಲೇ ಬೇಕು' ಇದೊಂದು ಜನಪ್ರಿಯ ಗಾದೆ ಮಾತಾಗಿದೆ. ನಾವು ಮಾಡಿದ ಕೆಲಸದ ಪ್ರತಿಫಲಗಳನ್ನು ಒಳ್ಳೆಯದಾಗಲೀ, ಕೆಟ್ಟದ್ದಾಗಲೀ ನಾವೇ ಅನುಭವಿಸಬೇಕು ಎಂಬುದನ್ನು ಈ ಗಾದೆ ತಿಳಿಸುತ್ತದೆ. ವ್ಯಕ್ತಿ ತಾನು ಮಾಡಿದ ಕರ್ಮಗಳ ಫಲವನ್ನು ತಾನೇ ಅನುಭವಿಸಬೇಕು. ಬೇರೆ ಯಾರೂ ಅದರ ಫಲಗಳನ್ನು ಅನುಭವಿಸಲಾರರು. ಒಳ್ಳೆಯ ಕೆಲಸಗಳಿಗೆ ಒಳ್ಳೆಯ ಫಲಗಳನ್ನು, ಕೆಟ್ಟ ಕೆಲಸಗಳಿಗೆ ಕೆಟ್ಟ ಫಲಗಳನ್ನು ಪಡೆಯಬೇಕಾಗುತ್ತದೆ. ಆದ್ದರಿಂದ ಯಾವುದೇ ಕೆಲಸಗಳನ್ನು ಮಾಡುವ ಮುನ್ನ ಅದರಿಂದಾಗುವ ಪರಿಣಾಮಗಳ ಬಗ್ಗೆ ತಿಳಿದು ಕೆಲಸ ಮಾಡಬೇಕು. ಸ್ವಾರ್ಥವನ್ನು ಮರೆತು ಸಮಾಜಮುಖಿ ಕೆಲಸಗಳನ್ನು ಮಾಡಬೇಕು. ಸ್ವಾರ್ಥಕ್ಕಾಗಿ ಕೆಟ್ಟದಾರಿಯಲ್ಲಿ ಕೆಟ್ಟಕೆಲಸಗಳನ್ನು ಮಾಡಿದರೆ ಅದರ ಪರಿಣಾಮ ಕೆಟ್ಟದ್ದೇ ಆಗಿರುತ್ತದೆ. ಮಾಡಿದ್ದು ಉಣ್ಣೋ ಮಹಾರಾಯ ಎಂಬುದೇ ಈ ಗಾದೆ ಮಾತಿನ ಸಾರವಾಗಿದೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಅಥವಾ**<br><br>ಉತ್ತರ : “ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ”<br><br>ಗಾದೆಯ ಮಹತ್ವ : ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br><br>ಅರ್ಥ ಮತ್ತು ವಿವರಣೆ : ‘ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ’ ಇದೊಂದು ಜನಪ್ರಿಯ ಗಾದೆ ಮಾತಾಗಿದೆ. ‘ಕುಂಬಾರ ಕಷ್ಟಪಟ್ಟು ಮಣ್ಣಿನ ಮಡಕೆ’ ತಯಾರಿಸುತ್ತಾನೆ. ಅವನಿಗೆ ಅದನ್ನು ತಯಾರು ಮಾಡಲು ಸಾಕಷ್ಟು ಸಮಯ, ಶ್ರಮ, ಬುದ್ಧಿ, ಕೌಶಲ ಎಲ್ಲವೂ ಬೇಕಾಗುತ್ತದೆ. ಅಷ್ಟು ಶ್ರಮಪಟ್ಟು ಮಾಡಿದ ಮಡಕೆಯನ್ನು ಒಂದು ದೊಣ್ಣೆಯಿಂದ ಸುಲಭವಾಗಿ ಒಡೆದು ಹಾಕಬಹುದು. ಆಗ ಕುಂಬಾರನ ಶ್ರಮವೆಲ್ಲವೂ ವ್ಯರ್ಥವಾಗುತ್ತದೆ. ಅವನಿಗೆ ನಷ್ಟವಾಗುತ್ತದೆ. ಹಾಗೆಯೇ ಯಾವುದೇ ಕೆಲಸವನ್ನು ಮಾಡಲು, ಒಳ್ಳೆಯ ಹೆಸರು ಗಳಿಸಲು ಸಾಕಷ್ಟು ಸಮಯ, ಶ್ರಮ ಬೇಕಾಗುತ್ತದೆ. ಆದರೆ ಅದನ್ನು ಹಾಳುಮಾಡಲು ಕೆಲವು ನಿಮಿಷಗಳು ಸಾಕು. ಇದು ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ ಗಾದೆಯ ಅರ್ಥವಾಗಿದೆ. | |
| **IX.** | ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : | **1x 4 = 4** |
| | ವಿಷಯಕ್ಕೆ | **3 ಅಂಕಗಳು** |
| | ಭಾಷಾಶೈಲಿಗೆ | **1 ಅಂಕ** |
| | ಒಟ್ಟು | **4 ಅಂಕಗಳು** |
| **34.** | ಶಂ.ಬಾ.ಜೋಶಿಯವರ ‘ಯಕ್ಷಪ್ರಶ್ನೆ’ ಬೀಚಿಯವರ ಮನಸ್ಸನ್ನು ಹೇಗೆ ಸೂರೆಗೊಂಡಿತು? ವಿವರಿಸಿರಿ.<br><br>**ಅಥವಾ**<br><br>ಡಿ.ವಿ.ಜಿ.ಯವರ ‘ಮಂಕುತಿಮ್ಮನ ಕಗ್ಗ’ ಬೀಚಿಯವರಿಗೆ ಮೆಚ್ಚುಗೆಯಾಗಲು ಕಾರಣವೇನು? ವಿವರಿಸಿರಿ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಶಂ.ಬಾ.ಜೋಶಿಯವರ 'ಯಕ್ಷಪ್ರಶ್ನೆ' ಬೀಚಿಯವರ ಮನಸ್ಸನ್ನು ಹೇಗೆ ಸೂರೆಗೊಂಡಿತು? ವಿವರಿಸಿರಿ.<br><br>ಉತ್ತರ : ಬೀಚಿಯವರನ್ನು ವಶಮಾಡಿಕೊಂಡ ನಾಲ್ಕನೇ ಪುಸ್ತಕ ಶಂ.ಬಾ.ಜೋಶಿಯವರ 'ಯಕ್ಷಪ್ರಶ್ನೆ'. ಹಳೆಯ ಪೌರಾಣಿಕ ಕಥೆಯನ್ನು ಹೊಸ ಕಣ್ಣಿನಿಂದ ನೋಡುವ ಅವರ ಸಂಶೋಧನಾ ಪದ್ಧತಿಯು ಬೀಚಿಯವರನ್ನು ಆಕರ್ಷಣೆ ಮಾಡಿಕೊಳ್ಳುತ್ತದೆ. ಕೇವಲ ಗೊಡ್ಡು ಕತೆಗಳಾಗಿ ನಮ್ಮ ಧರ್ಮ ಗ್ರಂಥಗಳಲ್ಲಿ ಬರುವ ಕಥೆ ಉಪಕಥೆಗಳಿಗೆ ಜೋಶಿಯವರು ಕೊಡುವ ಅರ್ಥ ಕನ್ನಡದ ಮಟ್ಟಿಗೆ ಹೊಸದು. ಅಂದಿನ ಯಕ್ಷಪ್ರಶ್ನೆಯ ಕಥೆಯು ನಮಗೆ ಇಂದು ಬರಲಿರುವ ಸಮಾಜದ ದರ್ಶನವನ್ನು ಮಾಡಿಸುತ್ತದೆ. ಈ ಎಲ್ಲಾ ಕಾರಣಗಳಿಂದ ಶಂಭಾ ಜೋಶಿಯವರ ಯಕ್ಷಪ್ರಶ್ನೆ ಬೀಚಿಯವರ ಮನಸ್ಸನ್ನು ಸೂರೆಗೊಂಡಿತು.<br><br>ಅಥವಾ<br><br>ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ' ಬೀಚಿಯವರಿಗೆ ಮೆಚ್ಚುಗೆಯಾಗಲು ಕಾರಣವೇನು? ವಿವರಿಸಿರಿ.<br><br>ಉತ್ತರ : ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದಲ್ಲಿ ಈ ಲೋಕಕ್ಕೆ ಸಂಬಂಧಿಸಿದ ಮತ್ತು ಪರಲೋಕಕ್ಕೂ ಸಂಬಂಧಿಸಿದ ವಿಚಾರಗಳಿವೆ. ಕಠಿಣವಾದ, ಕಹಿಯಾದ ವೇದಾಂತವನ್ನು ಶೃಂಗಾರದಷ್ಟು ಸ್ವಾರಸ್ಯವಾಗಿ ಈ ಕೃತಿಯಲ್ಲಿ ತಿಳಿಸಿದ್ದಾರೆ. ಕಗ್ಗದಲ್ಲಿ ಬರುವ ಉಪಮಾನಗಳು ಚಿಕ್ಕ ಮಕ್ಕಳಿಗೂ ಅರ್ಥವಾಗುವಷ್ಟು ಸಾಮಾನ್ಯವಾಗಿವೆ. ಬೀಚಿಯವರು 'ಅಂದನಾ ತಿಂಮ' ಕೃತಿಯನ್ನು ಬರೆಯಲು ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗವೇ ಸ್ಫೂರ್ತಿ. ಮಂಕುತಿಮ್ಮನ ಕಗ್ಗದಲ್ಲಿ ಡಿ.ವಿ.ಜಿ.ಯವರು ರಾಜ್ಯದ ರಾಜಕಾರಣವನ್ನು ಕುರಿತು ಸರಳವಾಗಿ ಅರ್ಥೈಸಿದ್ದಾರೆ. ಬೀಚಿಯವರ ತಿಂಮನಿಗೂ ಡಿ.ವಿ.ಜಿ.ಯವರ ತಿಮ್ಮನಿಗೂ ಕೇವಲ ಹೊರ ಹೋಲಿಕೆ ಇದ್ದರೂ ದೊಡ್ಡ ವ್ಯತ್ಯಾಸವಿದೆ. ಡಿ.ವಿ.ಜಿ.ಯವರ ತಿಮ್ಮ ಸೂರ್ಯನಾದರೆ ಬೀಚಿಯವರ ತಿಂಮ ಬೆಡ್‌ಲ್ಯಾಂಪ್ ಎಂದು ಹೋಲಿಕೆ ಮಾಡಿಕೊಂಡು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| X.<br><br>35. | ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)<br><br>ಕಣ್‌ದಿಟ್ಟಿ ––––––––––––––––––––––––––––––––––<br>––––––––––––––––––––––––––––––––––––––––<br>––––––––––––––––––––––––––––––––––––––––<br>–––––––––––––––––––––––––––––––––– ನನ್ನ ಮತಿ<br><br>ಅಥವಾ<br><br>ಮುದುಡಿ ––––––––––––––––––––––––––––––––––––<br>––––––––––––––––––––––––––––––––––––––––––<br>––––––––––––––––––––––––––––––––––––––––––<br>––––––––––––––––––––––––––––––––– ಬಹ ಲಯಕೆ!<br><br>ಉತ್ತರ :<br><br>ಕಣ್‌ದಿಟ್ಟಿ ಹರಿದತ್ತ ಗ್ರಂಥಗಿರಿ ಪಂಕ್ತಿಗಳು<br>ನಿಂತು ಬೆರಗೀಯುತಿವೆ ಪುಸ್ತಕಾಲಯದಲ್ಲಿ;<br>ಇವುಗಳಡಿ ನಾಧೂಳ ಕಣವಾಗಿ ನಿಲ್ಲುವೆನು–<br>ಚಣಕಾಲ ಬಂದು ನಿಂತರೆ ಸಾಕು, ನನ್ನ ಮತಿ<br><br>ಅಥವಾ<br><br>ಮುದುಡಿ ಹೋಗುವುದಿಲ್ಲಿ: ನನ್ನ ಅಹಂಕಾರವನು<br>ನುಚ್ಚು ನೂರಾಗಿಸುವುದೀ ತಾಣ ಅಪ್ಪಳಿಸಿ!<br>ಒಳಗೆ ಬಂದೆನೊ ಬೇಗ ಹೊರಗೆ ಓಡುವತವಕ–<br>ಏಕೆನಲು ಬೆದರುವೆನು ನನಗಿಲ್ಲಿ ಬಹ ಲಯಕೆ! | 1x 4 = 4 |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XI.<br><br><br><br><br><br><br><br><br><br><br><br><br><br>36. | ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :<br><br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ)<br><br>ಸಿ.ವಿ.ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯಕೊಟ್ಟು, ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರು ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ಮೇಲುಕೀಳೆಂಬ ತಾರತಮ್ಯವಿರಕೂಡದು. ವಿಜ್ಞಾನದ ಅನ್ವೇಷಣಕಾರ್ಯದಲ್ಲಿ ನಾವೆಲ್ಲಾ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೆ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು, ಇತರರನ್ನು ಸುಮ್ಮನೇ ಅನುಸರಿಸುವುದು ಸರ್ವಥಾಕೂಡದು. ಸ್ವಂತಿಕೆ ಇರಬೇಕು. ಹೊಸದಾರಿಯನ್ನು ಗುರುತಿಸಿ ಮುಂದುವರಿಯಬೇಕು. ಎಂದು ಒತ್ತಿಒತ್ತಿ ಹೇಳುತ್ತಿದ್ದರು. ಬೆಳಿಗ್ಗೆ ಪ್ರಯೋಗಾಲಯಕ್ಕೆ ಬಂದ ಕೂಡಲೇ ಒಂದು ಸುತ್ತು ಹೊರಟು ಎಲ್ಲಾ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ ಬೆನ್ನುತಟ್ಟಿ ಅವನನ್ನು ಎಲ್ಲರ ಎದುರು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿಹೋಗುತ್ತಿದ್ದರು. ಸಂಶೋಧನೆಯನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.<br><br>ಪ್ರಶ್ನೆಗಳು :<br><br>ಎ. ಸಿ.ವಿ.ರಾಮನ್ ತಮ್ಮ ಶಿಷ್ಯರನ್ನು ಸರಿಸಮಾನ ಕೆಲಸಗಾರರು ಎಂದು ಏಕೆ ಭಾವಿಸುತ್ತಿದ್ದರು?<br><br>ಉತ್ತರ : ಸಿ.ವಿ.ರಾಮನ್ ತಮ್ಮ ಶಿಷ್ಯರನ್ನು ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ಮೇಲುಕೀಳೆಂಬ ತಾರತಮ್ಯವಿರಕೂಡದು ಎಂದು ಭಾವಿಸುತ್ತಿದ್ದರು.<br><br>ಬಿ. ಸಿ.ವಿ.ರಾಮನ್ ತಾವು ಆರಿಸಿಕೊಂಡ ಶಿಷ್ಯನನ್ನು ಹೇಗೆ ನೋಡಿಕೊಳ್ಳುತ್ತಿದ್ದರು?<br><br>ಉತ್ತರ : ಸಿ.ವಿ.ರಾಮನ್ ಆರಿಸಿಕೊಂಡ ಶಿಷ್ಯನನ್ನು ಸಂಪೂರ್ಣ ಸ್ವಾತಂತ್ರ್ಯಕೊಟ್ಟು, ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು.<br><br>ಸಿ. ಬೆಳಿಗ್ಗೆ ಪ್ರಯೋಗಾಲಕ್ಕೆ ಬಂದಕೂಡಲೇ ಸಿ.ವಿ.ರಾಮನ್‌ರ ದಿನಚರಿ ಏನಾಗಿತ್ತು?<br><br>ಉತ್ತರ : ಬೆಳಿಗ್ಗೆ ಪ್ರಯೋಗಾಲಕ್ಕೆ ಬಂದಕೂಡಲೇ ಸಿ.ವಿ.ರಾಮನ್ ಎಲ್ಲಾ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಕೆಲಸದಲ್ಲಿ ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. | 4x 1 = 4 |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಡಿ. ಸಿ.ವಿ.ರಾಮನ್ ಶಿಷ್ಯನನ್ನು ಹೊಗಳಿ ಅಟ್ಟಕ್ಕೇರಿಸುತ್ತಿದ್ದುದು ಯಾವಾಗ?<br><br>ಉತ್ತರ : ಶಿಷ್ಯನೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ ಬೆನ್ನುತಟ್ಟಿ ಅವನನ್ನು ಎಲ್ಲರ ಎದುರು ಹೊಗಳಿ ಅಟ್ಟಕ್ಕೇರಿಸುತ್ತಿದ್ದರು. | |
| XI. | ಪ್ರಬಂಧ ಬರವಣಿಗೆ : | 1x 4 = 4 |
| 37. | ಪರಿಸರ ರಕ್ಷಣೆ ಮತ್ತು ಮಾಲಿನ್ಯ :<br><br>ಅಥವಾ<br><br>ರಾಷ್ಟ್ರೀಯ ಭಾವೈಕ್ಯತೆ | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಪರಿಸರ ರಕ್ಷಣೆ ಮತ್ತು ಮಾಲಿನ್ಯ :**<br><br>**ಉತ್ತರ :**<br><br>**ಪ್ರಸಾವನೆ:** ಗಿಡ, ಮರ, ಬೆಟ್ಟ–ಗುಡ್ಡ, ಭೂಮಿ–ಆಕಾಶ, ನದಿ–ಸಮುದ್ರ, ಗಾಳಿ–ನೀರು, ಕಾಡುಗಳಂತಹ ಸನ್ನಿವೇಶವನ್ನು 'ಪರಿಸರ' ಎನ್ನುತ್ತೇವೆ. ಪರಿಸರವನ್ನು ಕೊಳಕು ಮಾಡುವ ಕ್ರಿಯೆಗೆ 'ಪರಿಸರಮಾಲಿನ್ಯ' ಎನ್ನುತ್ತೇವೆ. ವಾಯು, ಜಲ, ಶಬ್ಧ ಹಾಗೂ ಭೂಮಾಲಿನ್ಯಗಳ ರೀತಿಯಲ್ಲಿ ಪರಿಸರಮಾಲಿನ್ಯವಾಗುತ್ತಿದೆ.<br><br>**ವಿಷಯ ನಿರೂಪಣೆ:** ಅರಣ್ಯನಾಶ ಮಾಡುತ್ತಿರುವುದು ಪರಿಸರಮಾಲಿನ್ಯಕ್ಕೆ ಕಾರಣವಾಗಿದೆ. ವಾಹನಗಳು ಮತ್ತು ಉದ್ದಿಮೆಗಳ ದಟ್ಟ ಹೊಗೆಯಿಂದ ವಾಯು ಮಾಲಿನ್ಯವಾಗುತ್ತಿದೆ. ವಿಷಯುಕ್ತ ರಾಸಾಯನಿಕ ವಸ್ತುಗಳು ನೀರಿಗೆ ಸೇರಿ ಜಲಮಾಲಿನ್ಯ ವಾಗುತ್ತಿದೆ. ವಾಹನಗಳು ಹಾಗೂ ಧ್ವನಿವರ್ಧಕಗಳಿಂದ ಶಬ್ಧಮಾಲಿನ್ಯವಾಗುತ್ತಿದೆ. ಪ್ಲಾಸ್ಟಿಕ್ ಮತ್ತು ಎಲೆಕ್ಟ್ರಾನಿಕ್ ವಸ್ತುಗಳಿಂದ ಭೂಮಾಲಿನ್ಯವಾಗುತ್ತಿದೆ. ಅಲ್ಲದೆ ಅತಿಯಾದ ಜನಸಂಖ್ಯೆ, ನಗರೀಕರಣ, ಗಣಿಗಾರಿಕೆ ಪರಿಸರಮಾಲಿನ್ಯಕ್ಕೆ ಕಾರಣವಾಗಿವೆ. ಈ ಎಲ್ಲಾ ಮಾಲಿನ್ಯಗಳಿಂದ ಕ್ಯಾನ್ಸರ್, ಚರ್ಮ, ಅಸ್ತಮಾ ಹಾಗೂ ಶ್ವಾಸಕೋಶದ ಕಾಯಿಲೆಗಳು ಹೆಚ್ಚಾಗುತ್ತಿವೆ. ಹವಾಮಾನದಲ್ಲಿ ಏರುಪೇರು ಉಂಟಾಗುತ್ತಿದೆ. ಮಳೆಯ ಅಭಾವ ಇಲ್ಲವೆ ಅತಿಯಾದ ಮಳೆ ಆಗುತ್ತಿದೆ. ಪ್ರಕೃತಿಯ ಅಸಮತೋಲನದಿಂದ ವನ್ಯರಾಶಿಗಳ ನಾಶವಾಗುತ್ತಿದೆ.<br><br>**ಉಪಸಂಹಾರ:** ಭವಿಷ್ಯದ ಪ್ರಜೆಗಳಾಗಿರುವ ವಿದ್ಯಾರ್ಥಿಗಳಲ್ಲಿ ಈ ಸಮಸ್ಯೆಗಳ ಬಗ್ಗೆ ಮುಖ್ಯವಾಗಿ ಅರಿವು ಮೂಡಿಸಬೇಕು. ಅರಣ್ಯನಾಶಕ್ಕೆ ತಡೆ, ಗಿಡನೆಡುವಿಕೆ, ವಾಹನಗಳ ಮಿತ ಬಳಕೆ, ಪ್ಲಾಸ್ಟಿಕ್ ನಿಷೇಧ ಹಾಗೂ ರಾಸಾಯನಿಕ ವಸ್ತುಗಳು ನೀರಿಗೆ ಸೇರದಂತೆ ಎಚ್ಚರವಹಿಸಬೇಕು. ಜೂನ್ 5 ರಂದು ಆಚರಿಸುವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣಗೊಳಿಸಬೇಕು. ಆಗ ಮಾತ್ರ ನಮ್ಮ ಪರಿಸರ ಸುಖಿ ಪರಿಸರ ಆಗುವುದರಲ್ಲಿ ಎರಡು ಮಾತಿಲ್ಲ.<br><br>**ಅಥವಾ** | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ರಾಷ್ಟ್ರೀಯ ಭಾವೈಕ್ಯತೆ :**<br><br>**ಉತ್ತರ :**<br><br>ಪೀಠಿಕೆ: ವಿವಿಧತೆ ಏಕತೆಯನ್ನು ಹೊಂದಿರುವ ದೇಶ ನಮ್ಮ ಭಾರತ. ನಾವೆಲ್ಲರೂ ಒಂದೆ ಎಂಬ ಏಕತಾ ಭಾವನೆಯೇ ರಾಷ್ಟ್ರೀಯ ಭಾವೈಕ್ಯತೆ. ಜಾತಿ, ಮತ, ಭಾಷೆ, ಉಡುಗೆ ಬೇರೆ ಬೇರೆ ಆಗಿದ್ದರೂ ನಾವೆಲ್ಲ ಭಾರತಾಂಬೆಯ ಮಕ್ಕಳು ಎಂಬುದನ್ನು ಎಂದಿಗೂ ಮರೆಯಬಾರದು. ದೇಶದ ಒಳಿತಿಗಾಗಿ ಒಟ್ಟಾಗಿ ಶ್ರಮಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು.<br><br>ವಿಷಯ ನಿರೂಪಣೆ: ನಮ್ಮ ದೇಶವನ್ನು ಅನೇಕ ವರ್ಷಗಳ ಕಾಲ ಬ್ರಿಟಿಷರು ಆಳ್ವಿಕೆ ಮಾಡಿದರು. ಬ್ರಿಟಿಷರಿಂದ ಸ್ವತಂತ್ರ ಪಡೆಯಲು ಅನೇಕ ಮಹನೀಯರಾದ ಮಹಾತ್ಮ ಗಾಂಧಿ, ಲಾಲಲಜಪತರಾಯ್, ಸುಭಾಷ್ ಚಂದ್ರಬೋಸ್, ಸರ್ದಾರ್ ವಲ್ಲಭ ಬಾಯ್ ಪಟೇಲ್ ಮುಂತಾದವರು ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ಹೋರಾಡಿದರು. ಅಂತಹ ಮಹಾನ್ ವ್ಯಕ್ತಿಗಳ ದೇಶಭಕ್ತಿಯ ಬಗ್ಗೆ ತಿಳಿಯಬೇಕು. ಭಾರತೀಯರಾದ ನಾವೆಲ್ಲರೂ ದ್ವೇಷ, ಅಸೂಯೆಗಳನ್ನು ಮರೆತು ಸ್ನೇಹಭಾವದಿಂದ ಇದ್ದರೆ ದೇಶದ ಜನರೆಲ್ಲರೂ ನೆಮ್ಮದಿಯಿಂದ ಇರಬಹುದು.'ರಾಷ್ಟ್ರೀಯ ಹಬ್ಬಗಳ ಆಚರಣೆ ದೇಶದ ಭಾವೈಕ್ಯತೆಯ ಸಂಕೇತ.' ಸ್ವತಂತ್ರ ದಿನಾಚರಣೆ, ಗಣರಾಜ್ಯೋತ್ಸವಗಳಂತಹ ರಾಷ್ಟ್ರೀಯ ಹಬ್ಬಗಳನ್ನು ಒಟ್ಟಾಗಿ ಆಚರಿಸಿದಾಗ ದೇಶದ ಬಗ್ಗೆ ಪ್ರೀತಿ, ಅಭಿಮಾನ, ಏಕತೆಯ ಭಾವ ಮೂಡುತ್ತದೆ. ಕ್ರೀಡಾ ಸ್ಪರ್ಧೆಗಳು ಜನರಲ್ಲಿ ಭಾವೈಕ್ಯತೆಯನ್ನು ಬೆಳೆಸುತ್ತದೆ. ಬೇರೆಬೇರೆ ರಾಜ್ಯದ ಜನರೆಲ್ಲ ಒಟ್ಟಾಗಿ ಕ್ರೀಡೆಗಳಲ್ಲಿ ಪಾಲ್ಗೊಂಡಾಗ 'ನಾವೆಲ್ಲರೂ ಒಂದೇ' ಎಂಬ ಭಾವನೆ ಮೂಡುತ್ತದೆ.<br><br>ಉಪಸಂಹಾರ: ಭಾರತೀಯರೆಲ್ಲರೂ ಭೇದ ಭಾವವಿಲ್ಲದೆ ಒಂದಾಗಿ ರಾಷ್ಟ್ರದ ಏಳಿಗೆಗಾಗಿ ಶ್ರಮಿಸುವ ಏಕತಾ ಮನೋಭಾವನೆ' ಬೆಳೆಸಿಕೊಳ್ಳಬೇಕು. ಅನೇಕತೆಯಲ್ಲಿ ಏಕತೆಯನ್ನು ಸಾಧಿಸುವುದು ನಮ್ಮ ದೇಶದ ಮೂಲ ಮಂತ್ರವಾಗಬೇಕು. ನಮ್ಮ ಆಂತರಿಕ ಕಲಹವನ್ನು ಮರೆತು ದೇಶದ ಪ್ರಗತಿಗೆ ನಾವು ದುಡಿಯಬೇಕು. ಆಗ ಮಾತ್ರ ಈ ಮಣ್ಣಿನ ಋಣವನ್ನು ತೀರಿಸಲು ಸಾಧ್ಯವಾಗುತ್ತದೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XII. | ಪತ್ರಲೇಖನ ಬರೆಯುವುದು : | 1x 5 = 5 |
| 38. | ನಿಮ್ಮನ್ನು ಮೂಡಿಗೆರೆಯ ನಿವಾಸಿ ಪ್ರೀತಮ್ ಎಂದು ಭಾವಿಸಿಕೊಂಡು, ನಿಮ್ಮೂರಿನಲ್ಲಿ ಶುದ್ಧಕುಡಿಯುವ ನೀರಿನ ಘಟಕವನ್ನು ತೆರೆಯುವಂತೆ ಕೋರಿ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.<br>ಅಥವಾ<br>ನಿಮ್ಮನ್ನು ಸೋಮನಾಥಪುರದ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿನಿ ದಿವಿಷ ಎಂದು ಭಾವಿಸಿಕೊಂಡು, ಶಾಲಾ ವಾರ್ಷಿಕೋತ್ಸವಕ್ಕೆ ಆಹ್ವಾನಿಸಿ ಕೋಲಾರದಲ್ಲಿ ವಾಸವಿರುವ ಸುವರ್ಣ ಎಂಬ ಹೆಸರಿನ ನಿಮ್ಮ ತಾಯಿಯವರಿಗೆ ಒಂದು ಪತ್ರವನ್ನು ಬರೆಯಿರಿ.<br>ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರ : ವಾವಹಾರಿಕ ಪತ್ರ :<br><br>ಇವರಿಂದ, ದಿನಾಂಕ : 15/07/2023<br>ಪ್ರೀತಮ್, ಸ್ಥಳ : ಮೂಡಿಗೆರೆ.<br>ಮೂಡಿಗೆರೆ.<br><br>ಇವರಿಗೆ,<br>ಮಾನ್ಯ ಅಧ್ಯಕ್ಷರು,<br>ತಾಲ್ಲೂಕು ಪಂಚಾಯಿತಿ,<br>ಮೂಡಿಗೆರೆ.<br><br>ಮಾನ್ಯರೇ,<br><br>ವಿಷಯ : ಶುದ್ಧ ಕುಡಿಯುವ ನೀರಿನ ಘಟಕವನ್ನು ತೆರೆಯುವಂತೆ ಕೋರಿ.<br>* * *<br>ಪ್ರೀತಮ್ ಆದ ನಾನು ಮೂಡಿಗೆರೆಯ ನಿವಾಸಿ. ನಮ್ಮ ಊರು ಅತಿ ಹೆಚ್ಚು ಜನಸಂದಣಿಯಿಂದ ಕೂಡಿದೆ. ಇಲ್ಲಿ ಕುಡಿಯುವ ನೀರಿನ ಸಮಸ್ಯೆ ತುಂಬಾ ಇದೆ. ಇಲ್ಲಿಯ ಜನರು ಕುಡಿಯುವ ನೀರಿಗಾಗಿ ಬಹಳ ದೂರ ಹೋಗಬೇಕಾಗಿದೆ. ಅಲ್ಲಿಯೂ ಪರಿಶುದ್ಧವಾದ ನೀರು ಸಿಗುತ್ತಿಲ್ಲ. ಇದು ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿ ರೋಗರುಜಿನಗಳು ಬರಲು ಕಾರಣವಾಗುತ್ತಿದೆ. ಆದ್ದರಿಂದ ನಮ್ಮ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ನಮ್ಮ ಊರಿನಲ್ಲಿ ಶುದ್ಧಕುಡಿಯುವ ನೀರಿನ ಘಟಕವನ್ನು ತೆರೆಯುವಂತೆ ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.<br><br>ವಂದನೆಗಳೊಂದಿಗೆ,<br><br>ತಮ್ಮ ವಿಶ್ವಾಸಿ<br>ಸಹಿ/–<br>(ಪ್ರೀತಮ್) | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವೈಯಕ್ತಿಕ ಪತ್ರ :** | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2ಅಂಕಗಳು |
| | ಗೆ, ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರ : ವೈಯಕ್ತಿಕ ಪತ್ರ :<br><br>ಕ್ಷೇಮ ಶ್ರೀ ಇವರಿಂದ,<br>ದಿವಿಷ,<br>10ನೇ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ಸೋಮನಾಥಪುರ.<br>ದಿನಾಂಕ : 02/01/2023<br><br>ಮಾತೃಶ್ರೀಯವರಿಗೆ ನಿಮ್ಮ ಪ್ರೀತಿಯ ಮಗಳು ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ತಾವೆಲ್ಲರೂ ಕ್ಷೇಮವಾಗಿರುವಿರೆಂದು ನಂಬಿರುತ್ತೇನೆ.<br><br>ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ಶಿಕ್ಷಕರ ಮಾರ್ಗದರ್ಶನದಂತೆ ಓದುವ ವೇಳಾಪಟ್ಟಿ ಮಾಡಿಕೊಂಡು ಚೆನ್ನಾಗಿ ಅಭ್ಯಾಸ ಮಾಡುತ್ತಿದ್ದೇನೆ. ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ ನಮ್ಮ ಶಾಲೆಯಲ್ಲಿ ದಿನಾಂಕ 11–01–2023 ರಂದು ಶಾಲಾ ವಾರ್ಷಿಕೋತ್ಸವವು ಅದ್ಧೂರಿಯಾಗಿ ನಡೆಯಲಿದೆ. ನಾನು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ನೀವು ನಮ್ಮ ಶಾಲಾ ವಾರ್ಷಿಕೋತ್ಸವ ಸಮಾರಂಭದ ಭಾಗವಾಗಬೇಕೆಂಬುದು ನನ್ನ ಬಯಕೆ. ಹಾಗಾಗಿ ತಾವು ತಪ್ಪದೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಈ ಪತ್ರದ ಮೂಲಕ ತಮ್ಮಲ್ಲಿ ಕೋರಿಕೊಳ್ಳುತ್ತೇನೆ.<br><br>ಮನೆಯಲ್ಲಿ ತಂದೆಯವರಿಗೆ ನನ್ನ ನಮಸ್ಕಾರವನ್ನು ತಿಳಿಸಿ.<br><br>ಇಂತಿ ನಿಮ್ಮ ಪ್ರೀತಿಯ ಮಗಳು<br>ಸಹಿ/–<br>(ದಿವಿಷ)<br><br>ಇವರಿಗೆ,<br>ಸುವರ್ಣ<br>ಮನೆ ನಂ 75<br>ಬಸ್ ನಿಲ್ದಾಣದ ಹಿಂಭಾಗ,<br>ಕೋಲಾರ | |

# 2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 5

## Academic Year 2023-24 Bengaluru North Dist. SSLC Practice Paper – 5

## 62K – ತೃತೀಯ ಭಾಷೆ – ಕನ್ನಡ

| | |
|---|---|
| ಸಮಯ : 3:00 ಗಂಟೆ | Time : 3:00 Hrs |
| ಗರಿಷ್ಠ ಅಂಕಗಳು : 80 | Max. Marks : 80 |
| ಒಟ್ಟು ಪ್ರಶ್ನೆಗಳು : 38 | Total No of Questions : 38 |

---

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : **8 x 1 = 8**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಗಳ ಸಂಖ್ಯೆ

   (ಎ) 10 (ಬಿ) 25

   (ಸಿ) 13 (ಡಿ) 34

2. 'ಕವಿ' ಪದದ ಅನ್ಯಲಿಂಗ ರೂಪ

   (ಎ) ಕವಿನಿ (ಬಿ) ಪಂಡಿತೆ

   (ಸಿ) ಕವಯಿತ್ರಿ (ಡಿ) ಲೇಖಕಿ

3. ಕೆಳಗಿನವುಗಳಲ್ಲಿ ಬಹುವಚನರೂಪಕ್ಕೆ ಉದಹಾರಣೆಯಾದ ಪದ

   (ಎ) ಶಾಲೆಗಳು (ಬಿ) ಪ್ರಾಣಿ

   (ಸಿ) ಮಗು (ಡಿ) ಗಿಡ

4. ಕೆಳಗಿನವುಗಳಲ್ಲಿ ವಕಾರಾಗಮ ಸಂಧಿಗೆ ಉದಾಹರಣೆ

   (ಎ) ರಾಜ್ಯೋತ್ಸವ (ಬಿ) ಜೀವವೊಂದು

   (ಸಿ) ಪೂರ್ವೋತ್ತರ (ಡಿ) ಜೀವನೋತ್ಸಾಹ

5. ಕೆಳಗಿನವುಗಳಲ್ಲಿ ತತ್ಸಮ ರೂಪಕ್ಕೆ ಉದಾಹರಣೆಯಾದ ಪದ

(ಎ) ಮುಕುತಿ (ಬಿ) ಜನುಮ

(ಸಿ) ವರ್ಣ (ಡಿ) ಬಕುತ

6. ಕೆಳಗಿನವುಗಳಲ್ಲಿ ಜೋಡಿನುಡಿ ಪದ

(ಎ) ಕಣ್ತೆರೆ (ಬಿ) ಹೌದುಹೌದು

(ಸಿ) ತುತ್ತತುದಿ (ಡಿ) ಕಪ್ಪಕಾಣಿಕೆ

7. 'ಧರ್ಮ' ಇದರ ವಿರುದ್ಧಾರ್ಥಕ ಪದ

'ಧರ್ಮ' ಇದರ ವಿರುದ್ಧಾರ್ಥಕ ಪದ

(ಎ) ಅಧರ್ಮ (ಬಿ) ನಿಗರ್ವ

(ಸಿ) ಸ್ವಧರ್ಮ (ಡಿ) ನಿರ್ಭಯ

8. ಹರ್ಷ, ಅಚ್ಚರಿ, ಸಂತಸ, ದು:ಖ, ಕೋಪ, ತಿರಸ್ಕಾರ ಇತ್ಯಾದಿ ಭಾವನೆಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವ ಸಂದರ್ಭಗಳಲ್ಲಿ ಬಳಸುವ ಚಿಹ್ನೆ

(ಎ) ಅರ್ಧವಿರಾಮ (ಬಿ) ಅಲ್ಪವಿರಾಮ

(ಸಿ) ಭಾವಸೂಚಕ ಡಿ) ವಿವರಣಾತ್ಮಕ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ : **4 x 1 = 4**

9. ಹಜರತ್ ಇಮಾಂ ಸಾಹೇಬರ ಪತ್ನಿ : ಹಾಜುಮ್ :: ಎನ್.ಎಸ್. ರಾಮಯ್ಯನವರ ಪತ್ನಿ : --------

10. ಔರಂಗಜೇಬನನ್ನು ಸೋಲಿಸಿದ್ದು : ಕೆಳದಿಯ ರಾಣಿ ಚೆನ್ನಮ್ಮ :: ಶಿವಾಜಿಯನ್ನು ಸೋಲಿಸಿದ್ದು : -------

11. ಸತ್ಯವ ನುಡಿವುದೇ : ದೇವಲೋಕ :: ಮಿಥ್ಯವ ನುಡಿವುದೇ : ----------

12. ಕಣ್‌ದಿಟ್ಟಿ ಹರಿದತ್ತ : ಗ್ರಂಥಗಿರಿ ಪಂಕ್ತಿಗಳು :: ನಿಂತು ಬೆರಗೀಯುತಿವೆ : -----------

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : **4 x 1 = 4**

13. ಕನ್ನಡದ ದೀಕ್ಷೆಯನ್ನು ಬೀಚಿಯವರು ಸ್ವೀಕರಿಸಿದ ಶುಭಮುಹೂರ್ತ ಯಾವುದು?

14. ಕಳಸ, ಶಿಲುಬೆ, ಬಿಳಿ ಮಿನಾರು ಇವು ಯಾವ ಧರ್ಮದ ಸಂಕೇತಗಳಾಗಿವೆ?

15. ಮಂತ್ರಿಯಾಗಲು ಯಾವ ಗುಣ ಹೊಂದಿರಬೇಕೆಂದು ಸೋಮೇಶ್ವರ ಶತಕದಲ್ಲಿ ಹೇಳಿದೆ?

16. ರಾಜನಲ್ಲಿರಬೇಕಾದ ಗುಣ ಯಾವುದೆಂದು ಪುಲಿಗೆರೆ ಸೋಮನಾಥನು ಹೇಳಿದ್ದಾನೆ?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **8 x 2 = 16**

17. ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕ ಹಾಗೂ ಪ್ರೇರಕವಾದ ವಿಚಾರಗಳನ್ನು ತಿಳಿಸಿ?

18. ರಾಮಸಿಂಗನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ಕುರಿತು ಬರೆಯಿರಿ.

19. ಪೋರ್ಚುಗೀಸರು ಭಾರತೀಯರನ್ನು ಆರ್ಥಿಕವಾಗಿ ಹೇಗೆ ಶೋಷಣೆ ಮಾಡುತ್ತಿದ್ದರು?

20. ಒಂದು ಕನ್ನಡದ ಕತೆ ಪುಸ್ತಕವನ್ನು ಕೊಡುವಂತೆ ಬೀಚಿಯವರು ಗೋವಿಂದರಾಯರನ್ನು ಏಕೆ ಕೇಳಿದರು?

21. ಯುವಜನತೆ ಏನನ್ನು ಮೆಟ್ಟಿ ನಿಲ್ಲುತ್ತಾರೆ? ಅವರ ಘೋಷಣವನ್ನು ಕುರಿತು ಬರೆಯಿರಿ.

22. ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದನ್ನು ಕವಿ ಹೇಗೆ ವಿವರಿಸಿದ್ದಾರೆ?

23. ಪುರಂದರದಾಸರು ಡಾಂಭಿಕ ಭಕ್ತಿಯನ್ನು ನಾಟಕಸ್ತ್ರೀಗೆ ಏಕೆ ಹೋಲಿಸಿದ್ದಾರೆ?

24. ಧರ್ಮಪದನಿಗೆ ಶಿಲ್ಪಿಯೊಬ್ಬನು ವಿಷ ಉಣಿಸಲು ಕಾರಣವೇನು?

V. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ : 2 x 3 = 6

25 "ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು"

26. "ಜಗ್ಗಿಸಿ ಹುಯ್ಯೋ ಮಳೆರಾಯ".

VI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 x 3 = 12

27. ಗೋವಿಂದಭಟ್ಟರ ಗುಣಸ್ವಭಾವಗಳನ್ನು ಕುರಿತು ಬರೆಯಿರಿ.

28. ಉಲ್ಲಾಳದ ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರನ್ನು ಹೇಗೆ ಸೋಲಿಸಿದಳು? ವಿವರಿಸಿರಿ.

29. ಗ್ರಂಥರಾಶಿಯ ಮುಂದೆ ಮನುಷ್ಯನ ಅಹಂಕಾರ ನುಚ್ಚು ನೂರಾಗುತ್ತದೆ ಎಂಬ ಭಾವನೆ 'ಗ್ರಂಥಾಲಯದಲ್ಲಿ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.

30. 'ಮಳೆದೇವರಲ್ಲಿ ರೈತನು ಮಾಡಿಕೊಳ್ಳುವ ಪ್ರಾರ್ಥನೆಯನ್ನು ನೀವು ಏಕೆ ಮೆಚ್ಚುಕೊಳ್ಳುತ್ತೀರಿ? ಸಮರ್ಥಿಸಿ.

VII. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ : 2 x 3 = 6

31. ಎಸ್.ಆರ್. ರೋಹಿಡೇಕರ್

32. ಬಸವಣ್ಣ

VIII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 x 3 = 3

33. "ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು"

ಅಥವಾ

"ಕೈ ಕೆಸರಾದರೆ ಬಾಯಿ ಮೊಸರು"

**IX.** ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : **1 x 4 = 4**

34. ಮಿನಿಪೊಲೀಸ್ ನಗರದಲ್ಲಿ ಗೊರೂರರು ತಪ್ಪಿಸಿಕೊಂಡ ಪ್ರಕರಣವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

ಅಥವಾ

ಗೊರೂರರು ಮಿನಿಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಗಳಿಂದ ಪಾರಾದುದು ಹೇಗೆ? ವಿವರಿಸಿರಿ.

**X.** ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : **1 x 4 = 4**

35.

ಕಂಚು ಗಾರನ ---------------------------------
---------------------------------------------
---------------------------------------------
------------------------------------ ಮಾಡುವುದು

ಅಥವಾ

ನಾನು ----------------------------------------
---------------------------------------------
---------------------------------------------
--------------------------------- ಕಾರ್ಯಗಳೆಲ್ಲವು

**XI.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : **4 x 1 = 4**

ಹಿಂದಿನ ಕಾಲದಿಂದಲೂ ಮನುಷ್ಯ ದೇಹದ ಶ್ರಮವನ್ನು ಕಡಿಮೆ ಮಾಡಿಕೊಳ್ಳಲು ಹೊಸಹೊಸ ಯಂತ್ರ ಸಾಧನಗಳನ್ನು ಕಂಡುಹಿಡಿಯುತ್ತಲೇ ಇದ್ದಾನೆ. ಪ್ರಾಚೀನ ಕಾಲದಲ್ಲಿ ನಡಿಗೆಯಿಂದ ಪ್ರಯಾಣ ಮಾಡಬೇಕಿತ್ತು. ನಾಗರೀಕತೆ ಬೆಳೆದಂತೆ ಬಗೆಬಗೆಯ ಬಂಡಿಗಳು ರೂಢಿಗೆ ಬಂದವು. ಬಂಡಿಗಳನ್ನು ಗಾಡಿಗಳನ್ನು ಎಳೆಯಲು ಎತ್ತು, ಕುದುರೆ ಮೊದಲಾದ ಪ್ರಾಣಿಗಳನ್ನು ಬಳಸಲಾಗುತ್ತಿತ್ತು. ಗಾಡಿಯ ಚಕ್ರಗಳು ಹಳ್ಳಗಳಲ್ಲಿ ಕೆಸರಿನಲ್ಲಿ ಹೂತು ಹೋಗುತ್ತಿದ್ದರಿಂದ ಮರದ ಹಳಿಗಳನ್ನು ದಾರಿಯಲ್ಲಿ ಹಾಸಿ ಗಾಡಿಯ ಚಕ್ರಗಳು ಸುಲಭವಾಗಿ ಉರುಳುವಂತಹ ಏರ್ಪಾಟನ್ನು ಪಾಶ್ಚಾತ್ಯ ದೇಶಗಳಲ್ಲಿ ಮಾಡಲಾಯಿತು. ಕುದುರಗಳೇ ಅವುಗಳ ಮೇಲೆ ಗಾಡಿಗಳನ್ನು ಎಳೆಯುತ್ತಿದ್ದವು. ಕಾಲಕ್ರಮೇಣ ಕಬ್ಬಿಣದ ಹಳಿಗಳು ರೂಢಿಗೆ ಬಂದವು. ಈ ಹಳಿಗಳನ್ನೇ 'ರೈಲು ಎನ್ನುತ್ತಾರೆ. ಇವುಗಳನ್ನು ಹಾಸಿರುವ ದಾರಿಯೇ ರೈಲುಮಾರ್ಗ. 19ನೆಯ ಶತಮಾನದ ಆರಂಭದಲ್ಲಿ ಉಗಿಯ ಶಕ್ತಿಯಿಂದ ನಡೆಯುವ ಗಾಡಿಗಳು ಬಂದವು.

**36.** ಪ್ರಶ್ನೆಗಳು :

ಎ. ಪ್ರಾಚೀನ ಕಾಲದಲ್ಲಿ ಪ್ರಾಣಿಗಳನ್ನು ಏಕೆ ಬಳಸಲಾಗುತ್ತಿತ್ತು?

ಬಿ. ಗಾಡಿಯ ಚಕ್ರಗಳು ಸುಲಭವಾಗಿ ಉರುಳಲು ಮನುಷ್ಯನು ಏನು ಮಾಡುತ್ತಿದ್ದನು?

ಸಿ. ಮಾನವನು ದೇಹದ ಶ್ರಮವನ್ನು ಹೇಗೆ ಕಡಿಮೆ ಮಾಡಿಕೊಳ್ಳುತ್ತಿದ್ದಾನೆ?

ಡಿ. ಮನುಷ್ಯನು ತನ್ನ ದೇಹದ ಶ್ರಮವನ್ನು ಕಡಿಮೆ ಮಾಡಿಕೊಳ್ಳು ಕಂಡುಕೊಂಡ ಉಪಾಯ ಯಾವುದು?

**XII.** ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : **4 x 1 = 4**

**37.** ಸಂಪರ್ಕ ಮಾಧ್ಯಮಗಳ ಒಳಿತು ಮತ್ತು ಕೆಡುಕುಗಳು

ಅಥವಾ

ಜಲ ಸಂರಕ್ಷಣೆ

**XIII.** ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : **5 x 1 = 5**

**38.** ನಿಮ್ಮನ್ನು ಸೊರಬದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿ ವಿಕಾಸ್ ಎಂದು ಭಾವಿಸಿಕೊಂಡು, ಅಕ್ಕನ ಮದುವೆಯ ಕಾರಣವನ್ನು ನೀಡುತ್ತಾ ಐದು ದಿನಗಳ ರಜೆಯನ್ನು ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮಂಡ್ಯ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಧುಮಿತ ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸದ ಬಗ್ಗೆ ಉಡುಪಿಯಲ್ಲಿರುವ ಆರತಿ ಎಂಬ ಹೆಸರಿನ ನಿಮ್ಮ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

********************

# 2023-24 ನೇ ಸಾಲಿನ ಬೆಂಗಳೂರು ಉತ್ತರ ಜಿಲ್ಲಾ ಎಸ್.ಎಸ್.ಎಲ್.ಸಿ. ಅಭ್ಯಾಸ ಪತ್ರಿಕೆ – 5
# Academic Year 2023-24 Bengaluru North Dist. SSLC Practice Paper – 5
## 62K – ತೃತೀಯ ಭಾಷೆ – ಕನ್ನಡ

**ಸಮಯ : 3:00 ಗಂಟೆ** | **Time : 3:00 Hrs**

**ಗರಿಷ್ಠ ಅಂಕಗಳು : 80** | **Max. Marks : 80**

**ಒಟ್ಟು ಪ್ರಶ್ನೆಗಳು : 38** | **Total o No of Questions : 38**

## ಮಾದರಿ ಉತ್ತರಗಳು

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 8 x 1 = 8 |
| 1. | ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ವ್ಯಂಜನಗಳ ಸಂಖ್ಯೆ<br>(ಎ) 10 (ಬಿ) 25<br>(ಸಿ) 13 (ಡಿ) 34<br>ಉತ್ತರ : (ಡಿ) 34 | |
| 2. | 'ಕವಿ' ಪದದ ಅನ್ಯಲಿಂಗ ರೂಪ<br>(ಎ) ಕವಿನಿ (ಬಿ) ಪಂಡಿತೆ<br>(ಸಿ) ಕವಯಿತ್ರಿ (ಡಿ) ಲೇಖಕಿ<br>ಉತ್ತರ : (ಸಿ) ಕವಯಿತ್ರಿ | |
| 3. | ಕೆಳಗಿನವುಗಳಲ್ಲಿ ಬಹುವಚನರೂಪಕ್ಕೆ ಉದಹಾರಣೆಯಾದ ಪದ<br>(ಎ) ಶಾಲೆಗಳು (ಬಿ) ಪ್ರಾಣಿ<br>(ಸಿ) ಮಗು (ಡಿ) ಗಿಡ<br>ಉತ್ತರ : (ಎ) ಶಾಲೆಗಳು | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 4. | ಕೆಳಗಿನವುಗಳಲ್ಲಿ ವಕಾರಾಗಮ ಸಂಧಿಗೆ ಉದಾಹರಣೆ<br><br>(ಎ) ರಾಜ್ಯೋತ್ಸವ (ಬಿ) ಜೀವವೊಂದು<br>(ಸಿ) ಪೂರ್ವೋತ್ತರ (ಡಿ) ಜೀವನೋತ್ಸಾಹ<br><br>ಉತ್ತರ : (ಬಿ) ಜೀವವೊಂದು | |
| 5. | ಕೆಳಗಿನವುಗಳಲ್ಲಿ ತತ್ಸಮ ರೂಪಕ್ಕೆ ಉದಾಹರಣೆಯಾದ ಪದ<br><br>(ಎ) ಮುಕುತಿ (ಬಿ) ಜನುಮ<br>(ಸಿ) ವರ್ಣ (ಡಿ) ಬಕುತ<br><br>ಉತ್ತರ : (ಸಿ) ವರ್ಣ | |
| 6. | ಕೆಳಗಿನವುಗಳಲ್ಲಿ ಜೋಡಿನುಡಿ ಪದ<br><br>(ಎ) ಕಣ್ತೆರೆ (ಬಿ) ಹೌದುಹೌದು<br>(ಸಿ) ತುತ್ತತುದಿ (ಡಿ) ಕಪ್ಪಕಾಣಿಕೆ<br><br>ಉತ್ತರ : ಡಿ) ಕಪ್ಪಕಾಣಿಕೆ | |
| 7. | ‘ಧರ್ಮ’ ಇದರ ವಿರುದ್ಧಾರ್ಥಕ ಪದ<br><br>(ಎ) ಅಧರ್ಮ (ಬಿ) ನಿಗರ್ವ<br>(ಸಿ) ಸ್ವಧರ್ಮ (ಡಿ) ನಿರ್ಧಯ<br><br>ಉತ್ತರ : (ಎ) ಅಧರ್ಮ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಹರ್ಷ, ಅಚ್ಚರಿ, ಸಂತಸ, ದು:ಖ, ಕೋಪ, ತಿರಸ್ಕಾರ ಇತ್ಯಾದಿ ಭಾವನೆಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವ ಸಂದರ್ಭಗಳಲ್ಲಿ ಬಳಸುವ ಚಿಹ್ನೆ<br>(ಎ) ಅರ್ಧವಿರಾಮ (ಬಿ) ಅಲ್ಪವಿರಾಮ<br>(ಸಿ) ಭಾವಸೂಚಕ ಡಿ) ವಿವರಣಾತ್ಮಕ<br>ಉತ್ತರ : (ಸಿ) ಭಾವಸೂಚಕ | 4 x 1 = 4 |
| II. | ಸಂಬಂಧೀ ಪದ ಬರೆಯುವುದು ( ಪ್ರತಿ ಸರಿ ಉತ್ತರಕ್ಕೆ 1 ಅಂಕ) : | |
| 9. | ಹಜರತ್ ಇಮಾಂ ಸಾಹೇಬರ ಪತ್ನಿ : ಹಾಜುಮ್ :: ಎನ್.ಎಸ್. ರಾಮಯ್ಯನವರ ಪತ್ನಿ : ____________<br>ಉತ್ತರ : ನಂಜಕ್ಕ | |
| 10. | ಔರಂಗಜೇಬನನ್ನು ಸೋಲಿಸಿದ್ದು : ಕೆಳದಿಯ ಚೆನ್ನಮ್ಮ :: ಶಿವಾಜಿಯನ್ನು ಸೋಲಿಸಿದ್ದು : __________<br>ಉತ್ತರ : ಬೆಳವಡಿ ಮಲ್ಲಮ್ಮ | |
| 11. | ಸತ್ಯವ ನುಡಿವುದೇ : ದೇವಲೋಕ :: ಮಿಥ್ಯವ ನುಡಿವುದೇ : ________________<br>ಉತ್ತರ : ಮರ್ತ್ಯಲೋಕ | |
| 12. | ಕಣ್ದಿಟ್ಟಿ ಹರಿದತ್ತ : ಗ್ರಂಥಗಿರಿ ಪಂಕ್ತಿಗಳು :: ನಿಂತು ಬೆರಗೀಯುತಿವೆ : ________________<br>ಉತ್ತರ : ಪುಸ್ತಕಾಲಯದಲ್ಲಿ | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| III. | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ.<br>( ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ) : | 4 x 1 = 4 |
| 13. | ಕನ್ನಡದ ದೀಕ್ಷೆಯನ್ನು ಬೀಚಿಯವರು ಸ್ವೀಕರಿಸಿದ ಶುಭಮುಹೂರ್ತ ಯಾವುದು?<br>ಉತ್ತರ : ಕನ್ನಡದ ದೀಕ್ಷೆಯನ್ನು ಬೀಚಿಯವರು ಅ.ನ.ಕೃ ರವರ ಸಂಧ್ಯಾರಾಗ ಪುಸ್ತಕವನ್ನು ಓದಿದಾಗ ಸ್ವೀಕರಿಸಿದರು. | |
| 14. | ಕಳಸ, ಶಿಲುಬೆ, ಬಿಳಿ ಮಿನಾರು ಇವು ಯಾವ ಧರ್ಮದ ಸಂಕೇತಗಳಾಗಿವೆ?<br>ಉತ್ತರ : ಹಿಂದೂ, ಕ್ರೈಸ್ತ, ಮುಸ್ಲಿಂ ಧರ್ಮದ ಸಂಕೇತಗಳಾಗಿವೆ. | |
| 15. | ಮಂತ್ರಿಯಾಗಲು ಯಾವ ಗುಣ ಹೊಂದಿರಬೇಕೆಂದು ಸೋಮೇಶ್ವರ ಶತಕದಲ್ಲಿ ಹೇಳಿದೆ?<br>ಉತ್ತರ : ನಾನಾ ವಿಧದ ಚಮತ್ಕಾರಗಳನ್ನು ತಿಳಿದವನು ಮಂತ್ರಿಯಾಗಬೇಕು. | |
| 16 | ರಾಜನಲ್ಲಿರಬೇಕಾದ ಗುಣ ಯಾವುದೆಂದು ಪುಲಿಗೆರೆ ಸೋಮನಾಥನು ಹೇಳಿದ್ದಾನೆ?<br>ಉತ್ತರ : ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವವನೇ ರಾಜನಾಗಬೇಕು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.<br><br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | 4 x 1 = 4 |
| 17. | ಕೊಡಗಿನ ಗೌರಮ್ಮನವರ ಬರವಣಿಗೆಗೆ ಪೂರಕ ಹಾಗೂ ಪ್ರೇರಕವಾದ ವಿಚಾರಗಳನ್ನು ತಿಳಿಸಿ?<br><br>ಉತ್ತರ : ಕಾರಂತ, ಮಾಸ್ತಿ, ಬೇಂದ್ರೆ, ಆರ್.ಕಲ್ಯಾಣಮ್ಮ ಇತ್ಯಾದಿ ಹೆಸರಾಂತ ಸಾಹಿತಿಗಳ ಜೊತೆಗೆ ಸಂಪರ್ಕವನ್ನು ಇಟ್ಟುಕೊಂಡಿದ್ದರು. ಸಾಹಿತ್ಯ ವಲಯದ ಚರ್ಚೆ, ಬದಲಾವಣೆಗಳು, ಹೊಸ ಬರವಣಿಗೆಯ ಸಂಪರ್ಕ, ಯಕ್ಷಗಾನ, ಕುಮಾರವ್ಯಾಸ, ತಾಳಮದ್ದಲೆ, ಉಮರ್ ಖಯಾಮನ ಕಾವ್ಯ ಇವೆಲ್ಲವೂ ಗೌರಮ್ಮನವರ ಬರವಣಿಗೆಗೆ ಪೂರಕ ಹಾಗೂ ಪ್ರೇರಕ ವಿಚಾರಗಳಾಗಿದ್ದವು. | |
| 18. | ರಾಮಸಿಂಗನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ಕುರಿತು ಬರೆಯಿರಿ.<br><br>ಉತ್ತರ : ಪೊಲೀಸ್ ಸಮವಸ್ತ್ರದಲ್ಲಿ ಬಂದ ಇಬ್ಬರು ಶಿಪಾಯಿಗಳು ಇಲ್ಲಿ ಸಭೆ ಸೇರ ಕೂಡದೆಂದು ಡಂಗುರ ಸಾರಿದ್ದು ಕೇಳಿಲ್ಲವೇ? ಎಂದರು. ಆಗ ರಾಮಸಿಂಗನು ಹಾಗೆ ಡಂಗುರ ಸಾರಲು ಇದು ನಿಮ್ಮಪ್ಪನ ಮನೆಯಲ್ಲ, ಇದು ನಮ್ಮ ಊರು ಎಂದನು. ಅದಕ್ಕೆ ಶಿಪಾಯಿಗಳು ಇಲ್ಲಿ ರಾಜ್ಯವಾಳುವವರು ಬ್ರಿಟಿಷರು ಎಂದಾಗ ರಾಮಸಿಂಗನು ನೀವು ಬ್ರಿಟಿಷರಲ್ಲವಲ್ಲ ಎಂದು ಉತ್ತರಿಸಿದನು. ಪ್ರತಿಯಾಗಿ ಶಿಪಾಯಿಗಳು ನಾವು ಬ್ರಿಟಿಷ್ ಸರಕಾರದ ನೌಕರರು ಎಂದಾಗ ರಾಮಸಿಂಗನು ನೀವು ನೌಕರರಲ್ಲ, ಗುಲಾಮರು ಎಂದು ಹೇಳಿದನು. ಇದೇ ರಾಮಸಿಂಗನಿಗೂ ಶಿಪಾಯಿಗಳಿಗೂ ನಡೆದ ಸಂಭಾಷಣೆಯಾಗಿದೆ. | |
| 19. | ಪೋರ್ಚುಗೀಸರು ಭಾರತೀಯರನ್ನು ಆರ್ಥಿಕವಾಗಿ ಹೇಗೆ ಶೋಷಣೆ ಮಾಡುತ್ತಿದ್ದರು?<br><br>ಉತ್ತರ : ಪೋರ್ಚುಗೀಸರು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದಿದ್ದರು. ರೈತರು ಕಷ್ಟಪಟ್ಟು ಬೆವರು ಸುರಿಸಿ ಬೆಳೆದ ಏಲಕ್ಕಿ, ಅಕ್ಕಿ, ಮೆಣಸಿನಕಾಳು ಮತ್ತು ನೇಕಾರರು ನೇಯ್ದ ಬಟ್ಟೆಗಳನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳಲು ಬಯಸುತ್ತಿದ್ದರು. ಸ್ಥಳೀಯ ರಾಜ ಸಂಸ್ಥಾನಗಳಿಂದ ಅನ್ಯಾಯವಾಗಿ ವಾರ್ಷಿಕ ಕಪ್ಪ ಸಂಗ್ರಹಿಸಿ ಆರ್ಥಿಕವಾಗಿ ಶೋಷಣೆ ಮಾಡುತ್ತಿದ್ದರು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **20.** | ಕನ್ನಡದ ಕತೆ ಪುಸ್ತಕವನ್ನು ಕೊಡುವಂತೆ ಬೀಚಿಯವರು ಗೋವಿಂದರಾಯರನ್ನು ಏಕೆ ಕೇಳಿದರು?<br><br>ಉತ್ತರ : ಬೀಚಿಯವರು ಒಂದು ಸಂಜೆ ಹೆಂಡತಿಯೊಂದಿಗೆ ವಾಕಿಂಗ್ ಹೊರಟಿದ್ದಾಗ ಬೆರಳು ತೋರಿಸಿ "ಇದೇ ನನ್ನ ಆಫೀಸು. ಎದುರಿಗೆ ಇರುವ ಈ ಪುಸ್ತಕದ ಅಂಗಡಿಯಲ್ಲಿಯೇ ಹೆಚ್ಚು ಸಮಯ ಕೂಡುತ್ತೇನೆ" ಎಂದು ಹೇಳಿದ್ದರು. ಅದನ್ನು ನೆನಪಿಟ್ಟುಕೊಂಡಿದ್ದ ಅವರ ಹೆಂಡತಿ ಒಂದು ದಿನ "ಮಧ್ಯಾಹ್ನ ಸಮಯ ಕಳೆಯಲು ಕಷ್ಟವಾಗುತ್ತಿದೆ. ಯಾವುದಾದರೂ ಕತೆ ಪುಸ್ತಕವನ್ನು ತಂದು ಕೊಡುವಂತೆ ಕೇಳಿದ್ದರು. ಹಾಗಾಗಿ ಬೀಚಿಯವರು ಗೋವಿಂದರಾಯರನ್ನು ಒಂದು ಕನ್ನಡ ಕತೆ ಪುಸ್ತಕವನ್ನು ಕೊಡುವಂತೆ ಕೇಳಿಕೊಳ್ಳುತ್ತಾರೆ. | |
| **21.** | ಯುವಜನತೆ ಏನನ್ನು ಮೆಟ್ಟಿ ನಿಲ್ಲುತ್ತಾರೆ? ಅವರ ಘೋಷಣವನ್ನು ಕುರಿತು ಬರೆಯಿರಿ.<br><br>ಉತ್ತರ: ಯುವಜನತೆ ಕ್ರಾಪುತಲೆಯ ಕೇತನದಡಿಯಲ್ಲಿ ಒಂದಗೂಡಿ ಮಡಿವಂತಿಕೆಯ ಕಟ್ಟಳೆಗಳನ್ನು ಮೆಟ್ಟಿ ನಿಲ್ಲುತ್ತಾರೆ. ಎಲ್ಲಾ ಒಂದೆ ಎಂಬ ಘೋಷಣದೊಂದಿಗೆ ಮಾನವತೆಯ ಸಂದೇಶವನ್ನು ಸಾರುತ್ತಾರೆ. | |
| **22.** | ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದನ್ನು ಕವಿ ಹೇಗೆ ವಿವರಿಸಿದ್ದಾರೆ?<br><br>ಉತ್ತರ: ಉತ್ತರ : ಬಾಣ, ಬಿರುಸು, ಕುಂಡ, ಹಣತೆ ಇವು ಬೇರೆ ಬೇರೆ ಬೆಳಕಿನಮೂಲಗಳಾಗಿವೆ. ಇವು ಸ್ವರೂಪದಲ್ಲಿ ಬೇರೆ ಬೇರೆಯಾದರೂ ಅವುಗಳ ಬೆಳಕ ಸತ್ವ ಒಂದೆಯಾಗಿದೆ. ಅದೇ ರೀತಿ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಂದ, ವೃತ್ತ, ತ್ರಿಪದಿ, ವಚನ ಬೇರೆ ಬೇರೆ ಆದರೂ ಅವುಗಳ ರಸಕವಿತ್ವ ಒಂದೆಯಾಗಿದೆ ಎಂದು ಕವಿ ನಿದರ್ಶನದೊಂದಿಗೆ ಹೇಳಿದ್ದಾರೆ. | |
| **23.** | ಪುರಂದರದಾಸರು ಡಾಂಭಿಕ ಭಕ್ತಿಯನ್ನು ನಾಟಕಸ್ತ್ರೀಗೆ ಏಕೆ ಹೋಲಿಸಿದ್ದಾರೆ?<br><br>ಉತ್ತರ : ಡಾಂಭಿಕ ಭಕ್ತ ತಾನೊಬ್ಬ ಮಹಾಭಕ್ತನಂತೆ ನಟಿಸುತ್ತಾನೆ. ದೇವರ ಮೇಲೆ ಅವನಿಗೆ ಯಾವ ಭಕ್ತಿಯೂ ಇರುವುದಿಲ್ಲ. ಕೇವಲ ತೋರಿಕೆಯ ಭಕ್ತಿಯಿಂದಲೇ ತಾನೊಬ್ಬ ಶ್ರೇಷ್ಠ ಭಕ್ತನೆಂಬ ಭಾವನೆಯನ್ನು ಜನರಿಗೆ ಮೂಡಿಸುತ್ತಾನೆ. ನಾಟಕದಲ್ಲಿ ಪುರುಷರೇ ಸ್ತ್ರೀ ಪಾತ್ರಧಾರಿಗಳಾಗಿ ನಟನೆಯನ್ನು ಮಾಡುತ್ತಾರೆ. ಇದು ಕೇವಲ ಅವರ ಊಟದ ಮಾರ್ಗವಷ್ಟೆ. ಇದೇ ರೀತಿ ಡಾಂಭಿಕ ಭಕ್ತನು ಕೂಡ ಊಟದ ಮಾರ್ಗಕ್ಕಾಗಿ ಬಯಲ ಡಂಭದ ಭಕ್ತಿಯನ್ನು ತೋರುವುದರಿಂದ ಪುರಂದರದಾಸರು ನಾಟಕಸ್ತೀಗೆ ಹೋಲಿಸಿದ್ದಾರೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 24. | ಧರ್ಮಪದನಿಗೆ ಶಿಲ್ಪಿಯೊಬ್ಬನು ವಿಷ ಉಣಿಸಲು ಕಾರಣವೇನು?<br><br>ಉತ್ತರ : ದರ್ಮಪದನು ಚಿಕ್ಕ ವಯಸ್ಸಿನಲ್ಲಿಯೇ ಶಿಲ್ಪಶಾಸ್ತ್ರ ಪರಿಣತನಾಗಿದ್ದನು. ಕಲಶವನ್ನು ಕೂಡಿಸಿದ ಈತನ ಪ್ರತಿಭೆಯನ್ನು ಕಂಡ ದೂರ್ತ ಶಿಲ್ಪಿಯೊಬ್ಬ ಹೊಟ್ಟೆಕಿಚ್ಚು ಪಟ್ಟನು. ಇವನನ್ನು ಬೆಳೆಯಲು ಬಿಡಬಾರದು, ಇವನ ಪ್ರತಿಭೆಯ ಮುಂದೆ ತಮ್ಮ ಸಾಧನೆ ಸಣ್ಣದಾಗುವುದು ಬೇಡ. ಈಗಲೇ ಅವನನ್ನು ಮುಗಿಸಿಬಿಡಬೇಕು ಎಂದು ಯೋಚಿಸಿ ಮನೆಯಿಂದ ತಂದಿದ್ದ ಬುತ್ತಿಗೆ ವಿಷ ಬೆರೆಸಿ ತಿನ್ನಲು ಪುಸಲಾಯಿಸಿದನು. | |
| V. | ಸಂದರ್ಭಸಹಿತ ವಿವರಣೆ : | 2 x 3 = 6 |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು – ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 25. | "ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು"<br>ಉತ್ತರ:<br><br>ಉತ್ತರ: ಆಯ್ಕೆ: ಈ ವಾಕ್ಯವನ್ನು ಆರ್ ಎಸ್ ಸುಂಕದ ಅವರು ಬರೆದಿರುವ 'ಶಿಶುನಾಳ ಶರೀಫ ಸಾಹೇಬರು' ಗದ್ಯದಿಂದ ಆರಿಸಲಾಗಿದೆ.<br><br>ಸಂದರ್ಭ: ಈ ಮಾತನ್ನು ಲೇಖಕರು ಗುರು ಗೋವಿಂದಭಟ್ಟರನ್ನು ಕುರಿತು ಹೇಳಿದ್ದಾರೆ. ಗುರು ಗೋವಿಂದಭಟ್ಟರ ಉದಾರತೆಯನ್ನು ಲೇಖಕರು ವಿವರಿಸುವಾಗ ಈ ಮಾತು ಬಂದಿದೆ.<br><br>ಸ್ವಾರಸ್ಯ: ಗೋವಿಂದಭಟ್ಟರ ಧರ್ಮ ಸಮನ್ವಯತೆಯನ್ನು ಕಾಣಬಹುದು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | "ಜಗ್ಗಿಸಿ ಹುಯ್ಯೋ ಮಳೆರಾಯ".<br>ಉತ್ತರ:<br><br>ಆಯ್ಕೆ: ಈ ವಾಕ್ಯವನ್ನು 'ಜನಪದಗೀತೆ' ಪದ್ಯದಿಂದ ಆರಿಸಲಾಗಿದೆ.<br><br>ಸಂದರ್ಭ : ಈ ಮಾತನ್ನು ಜನಪದರು ಮಳೆದೇವರಲ್ಲಿ ಪ್ರಾರ್ಥನೆಯನ್ನು ಮಾಡುತ್ತಾ ಹೇಳಿದ್ದಾರೆ. ಭೈರವ ಬೆಟ್ಟದಮೇಲೆ ಹೆಚ್ಚಾಗಿ ಸೋನೆಮಳೆಯು ಸುರಿಯಬೇಕೆಂದು ಜನಪದರು ಪ್ರಾರ್ಥಿಸುವಾಗ ಈ ಮಾತು ಬಂದಿದೆ.<br><br>ಸ್ವಾರಸ್ಯ: ಸೋನೆಮಳೆಯ ವರ್ಣನೆಯನ್ನು ಇಲ್ಲಿ ಕಾಣಬಹುದು. | |
| VI. | ಐದು – ಆರು ವಾಕ್ಯಗಳಲ್ಲಿ ಉತ್ತರಿಸುವುದು : | 4 x 3 = 12 |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 27. | ಗೋವಿಂದಭಟ್ಟರ ಗುಣಸ್ವಭಾವಗಳನ್ನು ಕುರಿತು ಬರೆಯಿರಿ.<br><br>ಉತ್ತರ : ಗೋವಿಂದ ಭಟ್ಟರು ಕಳಸ ಗ್ರಾಮದವರು. ಜ್ಞಾನಿಗಳು, ವಿದ್ಯಾವಂತರು ಆಗಿದ್ದರು. ನಗುಮುಖದ ದಿವ್ಯವ್ಯಕ್ತಿಗಳಾಗಿದ್ದರು. ಕೈಯಲ್ಲಿ ತಾಮ್ರದ ತಂಬಿಗೆ, ಹೆಗಲಮೇಲೆ ಪಂಚೆ, ನಡುವಿನಲ್ಲಿ ಲಂಗೋಟಿ ಇವರ ವೇಷಭೂಷಣಗಳಾಗಿದ್ದವು. ಶಕ್ತಿಯ ಉಪಾಸಕರಾದ ಇವರು ಮಾನವಕುಲ ಒಂದೇ ಎಂಬ ಭಾವನೆಯನ್ನು ಹೊಂದಿದ್ದರು. ಜಾತಿಮತಗಳ ಭೇದ ಮಾಡದೆ ಮುಸಲ್ಮಾನ ಶಿಷ್ಯನಿಗೆ ವಿದ್ಯಾದಾನ ಮಾಡಿದರು. ಗುರು ಶಿಷ್ಯರೂ ಒಂದೇ ತಟ್ಟೆಯಲ್ಲಿ ಊಟವನ್ನು ಮಾಡುತ್ತಿದ್ದರು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಉಲ್ಲಾಳದ ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರನ್ನು ಹೇಗೆ ಸೋಲಿಸಿದಳು? ವಿವರಿಸಿರಿ.<br><br>ಉತ್ತರ : ಪೋರ್ಚಗೀಸರು ಭಾರಿ ನೌಕೆಯಲ್ಲಿ ಬಲಾಢ್ಯ ಪಡೆಯೊಂದಿಗೆ ಉಲ್ಲಾಳದ ಕರಾವಳಿಯಲ್ಲಿ ಲಂಗರು ಹಾಕಿದ್ದರು. ವಿಷಯ ತಿಳಿದ ಅಬ್ಬಕ್ಕದೇವಿಯು ಮೊಗೇರು ಮೀನುಗಾರ ಸಾಹಸಿ ಸೈನಿಕರನ್ನು ಸಿದ್ಧಮಾಡಿಕೊಂಡಳು. ಅವರೊಂದಿಗೆ ಗಾಢ ರಾತ್ರಿಯಲ್ಲಿ ಸದ್ದುಗದ್ದಲವಿಲ್ಲದೆ ನೂರಾರು ಸಣ್ಣ ದೋಣಿಗಳಲ್ಲಿ ಹೋದಳು. ಸಾವಿರಾರು ತೆಂಗಿನಗರಿಯ ಉರಿಯುವ ಪಂಜುಗಳನ್ನು ಏಕಕಾಲಕ್ಕೆ ನೌಕೆಯ ಮೇಲೆ ಎಸೆದರು. ಧಗಧಗನೆ ಉರಿಯುವ ನೌಕೆಯಿಂದ ದಿಕ್ಕೆಟ್ಟ ಸೈನಿಕರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರಿದರು. ಅದೇ ಸಮಯಕ್ಕಾಗಿ ಕಾಯುತ್ತಿದ್ದ ಅಬ್ಬಕ್ಕದೇವಿಯ ಸೈನಿಕರ ಖಡ್ಗ ಮತ್ತು ಈಟಿಗಳಿಗೆ ಅವರುಗಳು ಬಲಿಯಾದರು. ಪೋರ್ಚಗೀಸರ ಸೇನಾಪತಿಗಳಾದ ಮಿರಾಂಡಾ ಮತ್ತು ಡಿ ಮೆಲ್ಲೊ ಓಡಿಹೋದರು. ಈ ರೀತಿ ರಾಣಿ ಅಬ್ಬಕ್ಕದೇವಿ ತನ್ನ ಪರಾಕ್ರಮದಿಂದ ಪೋರ್ಚಗೀಸರ ಸೋಲಿಸಿದಳು. | |
| 29. | ಗ್ರಂಥರಾಶಿಯ ಮುಂದೆ ಮನುಷ್ಯನ ಅಹಂಕಾರ ನುಚ್ಚು ನೂರಾಗುತ್ತದೆ ಎಂಬ ಭಾವನೆ 'ಗ್ರಂಥಾಲಯದಲ್ಲಿ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿರಿ.<br><br>ಉತ್ತರ : ಕವಿಗಳು ಗ್ರಂಥಾಲಯವನ್ನು ಪ್ರವೇಶಿಸಿದಾಗ ಗ್ರಂಥಗಿರಿಯ ಸಾಲುಗಳನ್ನು ಕಂಡು ಬೆರಗಾದರು. ಗ್ರಂಥರಾಶಿಗಳ ಅಡಿಯಲ್ಲಿರುವ ಧೂಳಿಗೆ ತಾನು ಸಮ ಎನಿಸಿತು. ಒಂದು ಕ್ಷಣ ಅಲ್ಲಿ ನಿಂತರೆ ಅವರ ಮತಿಯು ಮುದುಡಿ ಹೋಗುತ್ತದೆ. ಅವರ ಅಹಂಕಾರ ನುಚ್ಚುನೂರಾಗಿ ಅಲ್ಲಿಂದ ಓಡಿ ಹೋಗಬೇಕೆನಿಸಿತು. ಗ್ರಂಥಾಲಯದಲ್ಲಿ ಹಲವಾರು ಕವಿಸಾಹಿತಿಗಳ, ಹಿರಿಯರ, ಮಹಾತ್ಮರ, ಸಾಧಕರ ಗುಂಪು ನೆರೆದಂತೆ ಕವಿಗೆ ಅನುಭವವಾಯಿತು. ಗ್ರಂಥಾಲಯದಲ್ಲಿರುವ ಗ್ರಂಥರಾಶಿಗಳು ಆ ಹಿರಿಯ ಬಾಳುಗಳ ಅವಶೇಷವೆಂಬಂತೆ ಕಂಡುಬಂದಿತು. ಮೂಲವನ್ನು ಚಿತ್ರಿಸಲು ಹೊರಟ ಕವಿಗಳು ಕೃಷ್ಣನ ವಿಶ್ವರೂಪವನ್ನು ಕಂಡು ತತ್ತರಿಸಿದ ಪಾರ್ಥನಂತೆ ತತ್ತರಿಸಿ, ಭೀತವಿಸ್ಮಿತರಾಗಿ ಹೋದರು. | |
| 30. | 'ಮಳೆದೇವರಲ್ಲಿ ರೈತನು ಮಾಡಿಕೊಳ್ಳುವ ಪ್ರಾರ್ಥನೆಯನ್ನು ನೀವು ಏಕೆ ಮೆಚ್ಚುಕೊಳ್ಳುತ್ತೀರಿ? ಸಮರ್ಥಿಸಿ.<br><br>ಉತ್ತರ : ಮಳೆ ಇಲ್ಲದೆ ಈ ಭೂಮಿ ಬರಡಾಗಿದೆ. ಮೇವು ನೀರಿಲ್ಲದ ದನಕರುಗಳು ಸೊರಗಿ ಹೋಗಿವೆ. ಅಪ್ಪ ಮಳೆರಾಯ ನೀ ಬಂದು ಕರುಣಿಸೋ ಎಂದು ಪ್ರಾರ್ಥಿಸುತ್ತಾನೆ. ಪೂರ್ವ ದಿಕ್ಕಿನ ಮಳೆಯ ಮೋಡದ ಚಂದ ಗೋಡೆಗೆ ಕಪ್ಪು ಬಣ್ಣ ಬಳಿದಂತೆ ಕಂಡು ಬಂದಿದೆ. ಆಕಾಶದಿಂದ ಇಳಿದು ಬರುವ ಮಳೆಹನಿಗಳ ಸದ್ದು ರೈತನಿಗೆ ಸಂತಸವನ್ನು ತಂದಿದೆ. ಪೂರ್ವ ದಿಕ್ಕಿನಿಂದ ಬರುವ ಸೋನೆಮಳೆಯು ಭೈರವ ಬೆಟ್ಟದ ಮೇಲೆ ಹೆಚ್ಚಾಗಿ ಸುರಿದು ಬರಬೇಕು. ಸ್ವಾತಿಮಳೆ ಬಂದು ಸಾವಿರಾರು ಕೆರೆಗಳು ತುಂಬಿ ಬರಬೇಕು. ಆಗ ಕುಣಿಗಲು ಕೆರೆಯಲ್ಲಿ ಕುಚ್ಚಲು ಮೀನುಗಳ ಸಂತತಿ ಹೆಚ್ಚಾಗಿ ಲಾಭ ಬರುವಂತಾಗಲಿ ಎಂದು ರೈತನು ಮಳೆದೇವರನ್ನು ಪ್ರಾರ್ಥಿಸುತ್ತಾನೆ. ಮಳೆಯ ಆಗಮನ ಸಕಲ ಜೀವರಾಶಿಗಳಿಗೆ, ಸಸ್ಯಸಂಕುಲಕ್ಕೆ ಚೈತನ್ಯ ನೀಡುತ್ತದೆ. ಹಾಗಾಗಿಯೇ ರೈತನು ಮಳೆದೇವರಲ್ಲಿ ಮಾಡಿ ಕೊಳ್ಳುವ ಪ್ರಾರ್ಥನೆಯನ್ನು ನಾವು ಮೆಚ್ಚಬಹುದು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VII. | ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು : | 2 x 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | ಎಸ್.ಆರ್. ರೋಹಿಡೇಕರ್<br><br>ಉತ್ತರ : ಶಾಮ್ ರೋಹಿಡೆ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಎಸ್.ಆರ್. ರೋಹಿಡೇಕರ್ ಅವರು 1915 ರಂದು ವಿಜಯಪುರದಲ್ಲಿ ಜನಿಸಿದರು. ಇವರು ಬರೆದ ಕೃತಿ ಮೂರು ಏಕಾಂಕ ನಾಟಕಗಳು. | |
| 32. | ಬಸವಣ್ಣ<br><br>ಉತ್ತರ : ಬಸವಣ್ಣನವರ ಕಾಲ 12ನೆಯ ಶತಮಾನ. ಇವರ ಜನ್ಮಸ್ಥಳ ವಿಜಯಪುರ ಜಿಲ್ಲೆಯ ಬಾಗೇವಾಡಿ. ಇವರು ನೂರಾರು ವಚನಗಳನ್ನು ಬರೆದಿದ್ದಾರೆ. ಇವರ ವಚನಗಳ ಅಂಕಿತ ಕೂಡಲಸಂಗಮದೇವ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ) | 1 x 3 = 3 |
| 33. | "ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು"<br>ಅಥವಾ<br>"ಕೈ ಕೆಸರಾದರೆ ಬಾಯಿ ಮೊಸರು" | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| | ಉತ್ತರ : "ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು"<br><br>ಗಾದೆಯ ಮಹತ್ವ : ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br><br>ಅರ್ಥ ಮತ್ತು ವಿವರಣೆ : 'ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು' ಇದೊಂದು ಜನಪ್ರಿಯ ಗಾದೆ ಮಾತಾಗಿದೆ. ತಾಯಿ ನಮ್ಮನ್ನು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ಹೆತ್ತತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದಿಲ್ಲ. ಅದೇ ರೀತಿ ಜನ್ಮಭೂಮಿಯ ಸಂಬಂಧವು ಸಹ ಬಿಡಿಸಲಾಗದಂತಹುದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತೆ ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಾದುದು. ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಅಥವಾ**<br><br>ಉತ್ತರ : "ಕೈ ಕೆಸರಾದರೆ ಬಾಯಿ ಮೊಸರು"<br><br>ಗಾದೆಯ ಮಹತ್ವ : ಗಾದೆಗಳು ವೇದಕ್ಕೆ ಸಮ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು. ಗಾದೆಗಳು ಜನಪದ ಜೀವನದ ಅನುಭವದ ನುಡಿಮುತ್ತುಗಳು. ಇವು ನಮ್ಮ ಬದುಕಿಗೆ ದಾರಿದೀಪವಾಗಿವೆ.<br><br>ಅರ್ಥ ಮತ್ತು ವಿವರಣೆ : 'ಕೈ ಕೆಸರಾದರೆ ಬಾಯಿ ಮೊಸರು' ಇದೊಂದು ಜನಪ್ರಿಯ ಗಾದೆ ಮಾತಾಗಿದೆ. ಕೈ ಕೆಸರಾದರೆ ಬಾಯಿ ಮೊಸರು ಅಂದರೆ ಕಷ್ಟಪಟ್ಟು ದುಡಿದರೆ ಸುಖ ಉಂಟು ಎಂದರ್ಥ. ಕೈ ಕೆಸರಾಗುವುದು ದುಡಿಮೆಯನ್ನು ಸಂಕೇತಿಸಿದರೆ, ಮೊಸರು ಎಂಬುದು ಅದರ ಪ್ರತಿಫಲವನ್ನು ಬಿಂಬಿಸುತ್ತದೆ. ಸೋಮಾರಿಯಾಗಿ ಸುಮ್ಮನೆ ಕುಳಿತಿರಬಾರದು. ಯಾವುದಾದರೂ ಒಂದು ಕೆಲಸ ಮಾಡುವುದರಿಂದ ಹೊಟ್ಟೆ ತುಂಬುತ್ತದೆ. ಕೈಕೆಸರಾಗುತ್ತದೆಂದು ಯೋಚಿಸುತ್ತಾ ಕುಳಿತರೆ ಯಾವ ಕೆಲಸವನ್ನು ಮಾಡಲು ಸಾಧ್ಯವಾಗುವುದಿಲ್ಲ. ಕೆಲಸ ಮಾಡದಿದ್ದರೆ ಹಣ ಸಂಪಾದನೆಯಾಗುವುದಿಲ್ಲ. ಹೊಟ್ಟೆ ತುಂಬುವುದಿಲ್ಲ. ಜೀವನದಲ್ಲಿ ಕೈ ತುಂಬಾ ಸಂಪಾದಿಸಿದಾಗ ಮಾತ್ರವೇ ನಮಗೆ ಊಟ, ಆಹಾರ ಎಲ್ಲವೂ ಸಿಗುತ್ತದೆ. ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತು ಮೇಲಿನ ಗಾದೆಯನ್ನು ನೆನಪಿಸುತ್ತದೆ. | |
| IX. | ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು : | 1x 4 = 4 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 34. | ಮಿನಿಪೊಲೀಸ್ ನಗರದಲ್ಲಿ ಗೊರೂರರು ತಪ್ಪಿಸಿಕೊಂಡ ಪ್ರಕರಣವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.<br><br>**ಅಥವಾ**<br><br>ಗೊರೂರರು ಮಿನಿಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಗಳಿಂದ ಪಾರಾದುದು ಹೇಗೆ? ವಿವರಿಸಿರಿ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮಿನಿಪೊಲೀಸ್ ನಗರದಲ್ಲಿ ಗೊರೂರರು ತಪ್ಪಿಸಿಕೊಂಡ ಪ್ರಕರಣವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.<br><br>ಉತ್ತರ : ಮಿನಿಪೊಲೀಸ್ ನಗರದಲ್ಲಿ ಗೊರೂರರು ನೋಡಲು ಹೋದ ಮಿತ್ರರು ಸಿಗಲಿಲ್ಲ. ಆಗ ಅವರ ಮಿತ್ರರೊಬ್ಬರ ಕಾರಿನಲ್ಲಿ ಹೊರಟು ನಡುದಾರಿಯಲ್ಲಿ ಇಳಿದುಕೊಂಡರು. **2** ಗಂಟೆಗೆ ತಮ್ಮನ್ನು ಅಲ್ಲಿಂದ ವಾಪಸ್ಸು ಕರೆದುಕೊಂಡು ಹೋಗುವಂತೆ ಅವರಿಗೆ ಹೇಳಿದ್ದರು. ನಗರದಲ್ಲಿ ದೀಪ ಹೊತ್ತಿದ ಮೇಲೆ ತಮಗೆ ಅರಿವಿಲ್ಲದಂತೆ ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರ ಇವುಗಳನ್ನೆಲ್ಲಾ ನೋಡುತ್ತಾ ಗೊತ್ತು ಮಾಡಿಕೊಂಡಿದ್ದ ಸ್ಥಳದಿಂದ ಆಚೆ ಈಚೆ ಬಂದು ಬಿಟ್ಟರು. ಏನು ಮಾಡಿದರೂ ಆ ಸ್ಥಳ ಸಿಗಲೇ ಇಲ್ಲ. ಈ ರೀತಿ ಗೊರೂರರು ಮಿನಿಪೊಲೀಸ್ ನಗರದಲ್ಲಿ ತಪ್ಪಿಸಿಕೊಂಡರು.<br><br>**ಅಥವಾ**<br><br>ಗೊರೂರರು ಮಿನಿಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಗಳಿಂದ ಪಾರಾದುದು ಹೇಗೆ? ವಿವರಿಸಿರಿ.<br><br>ಉತ್ತರ : ಮಿನಿ ಪೊಲೀಸ್ ನಗರದಲ್ಲಿ ದಾರಿ ತಪ್ಪಿದ ಗೊರೂರರು ತಮ್ಮ ಸಮಸ್ಯೆಯನ್ನು ಟ್ರಾಫಿಕ್ ಪೊಲೀಸನ ಬಳಿ ಹೇಳಿಕೊಂಡರು. ಆತನು ಗೊರೂರರನ್ನು ತಮ್ಮ ಮನೆಗೆ ಕರೆದುಕೊಂಡು ಹೋದನು. ರಾತ್ರಿ ಊಟವೆಂದು ತಿನ್ನಲು ಬ್ರೆಡ್, ಹಾಲು, ಹಣ್ಣು, ಬಿಸ್ಕತ್ತುಗಳನ್ನು ನೀಡಿದನು. ತನ್ನ ಮನೆಯ ಹಾಸಿಗೆ ಅನೇಕ ದಿನಗಳಿಂದ ಬಳಸದೆ ಧೂಳು ತುಂಬಿದೆ. ಮನೆಯ ಪಕ್ಕದಲ್ಲೇ ತಮ್ಮ ವಶದಲ್ಲಿರುವ ಲಾಕಪ್ ಶುದ್ಧ ಗಾಳಿ ಬೆಳಕುಗಳಿಂದ ಮಲಗಲು ಯೋಗ್ಯವಾಗಿದೆ ಎಂದು ಹೇಳಿ ಅಲ್ಲಿ ಮಲಗಲು ಸೂಚಿಸಿದರು. ಬೆಳಗಾದ ಮೇಲೆ ಮಿತ್ರರು ಸಿಕ್ಕರು. ಈ ರೀತಿ ಗೊರೂರರು ತಮಗೆ ಎದುರಾದ ಸಮಸ್ಯೆಗಳಿಂದ ಪಾರಾದರು. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| X.<br><br>35. | ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)<br><br>ಕಂಚು ಗಾರನ ––––––––––––––––––––––––––––––<br>––––––––––––––––––––––––––––––––––––––––<br>––––––––––––––––––––––––––––––––––––––––<br>–––––––––––––––––––––––––––––––– ಮಾಡುವುದು<br>ಅಥವಾ<br>ನಾನು ––––––––––––––––––––––––––––––––––––<br>––––––––––––––––––––––––––––––––––––––––<br>––––––––––––––––––––––––––––––––––––––––<br>–––––––––––––––––––––––––––––– ಕಾರ್ಯಗಳೆಲ್ಲವು<br><br>ಉತ್ತರ :<br><br>ಕಂಚುಗಾರನ ಬಿಡಾರದಂದದಿ<br>ಕಂಚು ಹಿತ್ತಾಳೆಯ ಪ್ರತಿಮೆಗಳ ನೆರಹಿ<br>ಮಿಂಚಬೇಕೆಂದು ಬಲು ಜ್ಯೋತಿಗಳನು ಹಚ್ಚಿ<br>ವಂಚನೆಯಿಂದಲಿ ಪೂಜೆ ಮಾಡುವುದು<br><br>ಅಥವಾ<br><br>ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ<br>ಎನಾದರು ಹರಿ ಪ್ರೇರಣೆಯೆಂದು<br>ಧ್ಯಾನಿಸಿ ಮೌನದಿ ಪುರಂದರವಿಠಲನ<br>ಕಾಣದೆ ಮಾಡಿದ ಕಾರ್ಯಗಳೆಲ್ಲವು | 1x 4 = 4 |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XI. | ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :<br><br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ 1 ಅಂಕ)<br><br>ಹಿಂದಿನ ಕಾಲದಿಂದಲೂ ಮನುಷ್ಯ ದೇಹದ ಶ್ರಮವನ್ನು ಕಡಿಮೆ ಮಾಡಿಕೊಳ್ಳಲು ಹೊಸಹೊಸ ಯಂತ್ರ ಸಾಧನಗಳನ್ನು ಕಂಡುಹಿಡಿಯುತ್ತಲೇ ಇದ್ದಾನೆ. ಪ್ರಾಚೀನ ಕಾಲದಲ್ಲಿ ನಡಿಗೆಯಿಂದ ಪ್ರಯಾಣ ಮಾಡಬೇಕಿತ್ತು. ನಾಗರೀಕತೆ ಬೆಳೆದಂತೆ ಬಗೆಬಗೆಯ ಬಂಡಿಗಳು ರೂಢಿಗೆ ಬಂದವು. ಬಂಡಿಗಳನ್ನು ಗಾಡಿಗಳನ್ನು ಎಳೆಯಲು ಎತ್ತು, ಕುದುರೆ ಮೊದಲಾದ ಪ್ರಾಣಿಗಳನ್ನು ಬಳಸಲಾಗುತ್ತಿತ್ತು. ಗಾಡಿಯ ಚಕ್ರಗಳು ಹಳ್ಳಗಳಲ್ಲಿ ಕೆಸರಿನಲ್ಲಿ ಹೂತು ಹೋಗುತ್ತಿದ್ದರಿಂದ ಮರದ ಹಳಿಗಳನ್ನು ದಾರಿಯಲ್ಲಿ ಹಾಸಿ ಗಾಡಿಯ ಚಕ್ರಗಳು ಸುಲಭವಾಗಿ ಉರುಳುವಂತಹ ಏರ್ಪಾಟನ್ನು ಪಾಶ್ಚಾತ್ಯ ದೇಶಗಳಲ್ಲಿ ಮಾಡಲಾಯಿತು. ಕುದುರಗಳೇ ಅವುಗಳ ಮೇಲೆ ಗಾಡಿಗಳನ್ನು ಎಳೆಯುತ್ತಿದ್ದವು. ಕಾಲಕ್ರಮೇಣ ಕಬ್ಬಿಣದ ಹಳಿಗಳು ರೂಢಿಗೆ ಬಂದವು. ಈ ಹಳಿಗಳನ್ನೇ 'ರೈಲು ಎನ್ನುತ್ತಾರೆ. ಇವುಗಳನ್ನು ಹಾಸಿರುವ ದಾರಿಯೇ ರೈಲುಮಾರ್ಗ. 19ನೆಯ ಶತಮಾನದ ಆರಂಭದಲ್ಲಿ ಉಗಿಯ ಶಕ್ತಿಯಿಂದ ನಡೆಯುವ ಗಾಡಿಗಳು ಬಂದವು.<br><br>ಪ್ರಶ್ನೆಗಳು : | 4x 1 = 4 |
| 36. | ಎ. ಪ್ರಾಚೀನ ಕಾಲದಲ್ಲಿ ಪ್ರಾಣಿಗಳನ್ನು ಏಕೆ ಬಳಸಲಾಗುತ್ತಿತ್ತು?<br><br>ಉತ್ತರ : ಪ್ರಾಚೀನ ಕಾಲದಲ್ಲಿ ಪ್ರಾಣಿಗಳನ್ನು ಬಂಡಿಗಳನ್ನು, ಗಾಡಿಗಳನ್ನು ಎಳೆಯಲು ಬಳಸಲಾಗುತ್ತಿತ್ತು.<br><br>ಬಿ. ಗಾಡಿಯ ಚಕ್ರಗಳು ಸುಲಭವಾಗಿ ಉರುಳಲು ಮನುಷ್ಯನು ಏನು ಮಾಡುತ್ತಿದ್ದನು?<br><br>ಉತ್ತರ : ಗಾಡಿಯ ಚಕ್ರಗಳು ಸುಲಭವಾಗಿ ಉರುಳಲು ಮನುಷ್ಯನು ಮರದ ಹಳಿಗಳನ್ನು ದಾರಿಯಲ್ಲಿ ಹಾಸುತ್ತಿದ್ದನು.<br><br>ಸಿ. ಮಾನವನು ದೇಹದ ಶ್ರಮವನ್ನು ಹೇಗೆ ಕಡಿಮೆ ಮಾಡಿಕೊಳ್ಳುತ್ತಿದ್ದಾನೆ?<br><br>ಉತ್ತರ : ಮಾನವನು ದೇಹದ ಶ್ರಮವನ್ನು ಹೊಸಹೊಸ ಯಂತ್ರ ಸಾಧನಗಳನ್ನು ಕಂಡುಹಿಡಿಯುತ್ತ ಕಡಿಮೆ ಮಾಡಿಕೊಳ್ಳುತ್ತಿದ್ದಾನೆ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಡಿ. ಬಗೆಬಗೆಯ ಬಂಡಿಗಳು ಯಾವಾಗ ರೂಢಿಗೆ ಬಂದವು?<br>ಉತ್ತರ : ನಾಗರೀಕತೆ ಬೆಳೆದಂತೆ ಬಗೆಬಗೆಯ ಬಂಡಿಗಳು ರೂಢಿಗೆ ಬಂದವು. | |
| XI. | ಪ್ರಬಂಧ ಬರವಣಿಗೆ : | 1x 4 = 4 |
| 37. | ಸಂಪರ್ಕ ಮಾಧ್ಯಮಗಳ ಒಳಿತು ಮತ್ತು ಕೆಡುಕುಗಳು<br>ಅಥವಾ<br>ಜಲ ಸಂರಕ್ಷಣೆ | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| | **ಸಂಪರ್ಕ ಮಾಧ್ಯಮಗಳ ಒಳಿತು ಮತ್ತು ಕೆಡುಕುಗಳು :**<br><br>**ಉತ್ತರ :**<br><br>**ಪೀಠಿಕೆ: ಹಿಂದೆ ಒಬ್ಬರನ್ನು ಮತ್ತೊಬ್ಬರು ಸಂಪರ್ಕಿಸಬೇಕಾದರೆ ಬಹಳ ಕಷ್ಟವಾಗುತ್ತಿತ್ತು. ಒಳ್ಳೆಯದಾಗಲಿ, ಕೆಟ್ಟದ್ದಾಗಲಿ ಸುದ್ದಿ ಕಳುಹಿಸಬೇಕಾದರೆ ಯಾರ ಮೂಲಕವಾದರು ಹೇಳಿ ಕಳುಹಿಸಬೇಕಿತ್ತು. ಸ್ವಲ್ಪ ಕಾಲದ ನಂತರ ಅಂಚೆ ಇಲಾಖೆ ಅಸ್ತಿತ್ವಕ್ಕೆ ಬಂತು. ಟೆಲಿಗ್ರಾಂ ಮೂಲಕ ಜನರಿಗೆ ಸುದ್ದಿ ತಲುಪುತ್ತಿತ್ತು.**<br><br>**ವಿಷಯ ನಿರೂಪಣೆ: ಟಿ.ವಿ, ಮೊಬೈಲ್, ಇಮೇಲ್, ಟೆಲಿಫೋನ್, ದಿನಪತ್ರಿಕೆಗಳು, ರೇಡಿಯೋ ಮೊದಲಾದ ಸಂಪರ್ಕ ಸಾಧನಗಳು ಕ್ಷಣಮಾತ್ರದಲ್ಲಿ ಸುದ್ದಿ ಹರಡುತ್ತವೆ. ದೇಶದಿಂದ ದೇಶಕ್ಕೆ ಸುದ್ದಿ ಕಳುಹಿಸುವ ಮತ್ತು ಪಡೆಯುವ ವ್ಯವಸ್ಥೆ ಇವುಗಳಿಂದ ಸಾಧ್ಯವಾಗಿದೆ. ಮೊಬೈಲ್‌ನಿಂದ ಕ್ಷಣಾರ್ಧದಲ್ಲಿ ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಫೋಟೋ ಕೂಡ ತೆಗೆದುಕೊಳ್ಳಬಹುದು. ಪ್ರತಿಯೊಂದು ವಸ್ತುವಿನಲ್ಲಿ ಕೆಟ್ಟದ್ದು ಒಳ್ಳೆಯದು ಎರಡು ಇರುತ್ತದೆ. ಮೊಬೈಲ್ ಎಷ್ಟು ಉಪಯುಕ್ತವೋ ಅಷ್ಟೆ ಕೆಟ್ಟದ್ದು. ಅಶ್ಲೀಲ ಚಿತ್ರಗಳು, ಅಸಭ್ಯ ಸುದ್ದಿ, ಅಶ್ಲೀಲ ನಗೆಹನಿಗಳು ಇತ್ಯಾದಿ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಜನರಲ್ಲಿ ವಿರಸ, ದ್ವೇಷ ಬೆಳೆಯಲು ಕಾರಣವಾಗಿದೆ. ಹಾಗಾಗಿ ದುಷ್ಟರಿಂದ ಹೇಗೆ ದೂರವಿರಬೇಕೋ ಹಾಗೆಯೇ ಕೆಟ್ಟ ಆಲೋಚನೆ ಬೆಳೆಸುವ ವಸ್ತುಗಳಿಂದ ನಾವು ದೂರವಿರಬೇಕು.**<br><br>**ಉಪಸಂಹಾರ: ಮೊಬೈಲ್ ಸಂಪರ್ಕ ಸಾಧನಗಳಲ್ಲಿ ಜನಪ್ರಿಯವೂ, ಅಗತ್ಯವೂ ಆಗಿದೆ. ಆದರೆ ಅದನ್ನು ಒಳ್ಳೆಯ ಕೆಲಸಗಳಿಗೆ ಮಾತ್ರ ಬಳಸಿ ನೆಮ್ಮದಿಯಿಂದ ಬಾಳಬೇಕು. ಈ ಕುರಿತು ಯುವಜನತೆಗೆ ತಿಳಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ ಎಂಬುದನ್ನು ನಾವು ಮರೆಯುವಂತಿಲ್ಲ.**<br><br>**ಅಥವಾ** | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಜಲ ಸಂರಕ್ಷಣೆ :<br><br>ಉತ್ತರ :<br><br>ಪೀಠಿಕೆ : ಪೀಠಿಕೆ: ಗಿಡ, ಮರ, ಬೆಟ್ಟ–ಗುಡ್ಡ, ಭೂಮಿ–ಆಕಾಶ, ನದಿ–ಸಮುದ್ರ, ಗಾಳಿ–ನೀರು, ಕಾಡುಗಳಂತಹ ಸನ್ನಿವೇಶವನ್ನು 'ಪರಿಸರ' ಎನ್ನುತ್ತೇವೆ. ಪರಿಸರದ ಒಂದು ಪ್ರಧಾನ ಭಾಗವೇ ಜಲ. ಇದು ಮನುಷ್ಯನು ಒಳಗೊಂಡಂತೆ ಎಲ್ಲಾ ಜೀವಿಗಳಿಗೂ ಅಮೃತಕ್ಕೆ ಸಮಾನ. ಇಂದಿನ ದಿನಗಳಲ್ಲಿ ಮಲಿನರಹಿತ ನೀರು ಕನಸಾಗುತ್ತಿದೆ. ನಮ್ಮ ದೈನಂದಿನ ಕೆಲಸ ಕಾರ್ಯಗಳಿಗೆ ಮತ್ತು ಕುಡಿಯಲು ನೀರು ಅತೀ ಅಗತ್ಯ.<br><br>ವಿಷಯ ನಿರೂಪಣೆ : ಕಾರ್ಖಾನೆಗಳನ್ನು ನಗರದಿಂದ ಆಚೆ ಸ್ಥಾಪಿಸಬೇಕು. ಜನರಿಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸಬೇಕು. ಜೈವಿಕ ತಂತ್ರಜ್ಞಾನವನ್ನು ಹೆಚ್ಚು ಹೆಚ್ಚು ಬಳಸುವಂತಾಗಬೇಕು. ಗ್ರಾಮ ಮತ್ತು ನಗರಗಳ ಸ್ವಚ್ಛತೆಯ ಕಡೆಗೆ ಹೆಚ್ಚು ಗಮನ ನೀಡಬೇಕು. ಪ್ಲಾಸ್ಟಿಕ್ ಮತ್ತು ರಾಸಾಯನಿಕ ವಸ್ತುಗಳು ಜಲಮೂಲಗಳಿಗೆ ಸೇರದಂತೆ ಎಚ್ಚರ ವಹಿಸಬೇಕು. ಮಳೆಕೊಯ್ಲು ಕ್ರಮಗಳನ್ನು ಅನುಸರಿಸಬೇಕು. ಮರಗಿಡಗಳನ್ನು ಹೆಚ್ಚು ಹೆಚ್ಚು ಬೆಳೆಸಿ ರಕ್ಷಿಸುವಂತಾಗಬೇಕು. ನೀರನ್ನು ಮಿತವಾಗಿ ಬಳಸುವ ಪ್ರಾತ್ಯಕ್ಷಿಕೆಗಳ ಮೂಲಕ ಜಲಸಂರಕ್ಷಣೆ ಅಗತ್ಯತೆ ಕುರಿತು ಜನರಿಗೆ ತಿಳುವಳಿಕೆ ಮೂಡಿಸಬೇಕು.<br><br>ಉಪಸಂಹಾರ : ಮಾರ್ಚ್ 22 ರ ಜಲ ಸಂರಕ್ಷಣಾ ದಿನವನ್ನು ಅರ್ಥಪೂರ್ಣವಾಗಿ ಆಚರಿಸಿ ಜನರಲ್ಲಿ ಜಾಗೃತಿ ಮೂಡಿಸಬೇಕು. ಜಲಸಂರಕ್ಷಣೆ ಸರಕಾರದ ಕರ್ತವ್ಯವೆಂಬ ಭಾವನೆಯನ್ನು ಬಿಟ್ಟು ನಮ್ಮೆಲ್ಲರ ಕರ್ತವ್ಯವಾಗಬೇಕು. ಆಗ ಮಾತ್ರ ಜಲಸಂರಕ್ಷಣೆಗೆ ದಿಟ್ಟ ಹೆಜ್ಜೆಯನ್ನು ಇಟ್ಟಂತಾಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ. | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XII. | ಪತ್ರಲೇಖನ ಬರೆಯುವುದು : | 1x 5 = 5 |
| 38. | ನಿಮ್ಮನ್ನು ಸೊರಬದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿ ವಿಕಾಸ್ ಎಂದು ಭಾವಿಸಿಕೊಂಡು, ಅಕ್ಕನ ಮದುವೆಯ ಕಾರಣವನ್ನು ನೀಡುತ್ತಾ ಐದು ದಿನಗಳ ರಜೆಯನ್ನು ಕೋರಿ ಮುಖ್ಯೋಪಾಧ್ಯಾಯರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | ಅಥವಾ | |
| | ನಿಮ್ಮನ್ನು ಮಂಡ್ಯ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಧುಮಿತ ಎಂದು ಭಾವಿಸಿಕೊಂಡು, ನಿಮ್ಮ ಶಾಲಾ ಶೈಕ್ಷಣಿಕ ಪ್ರವಾಸದ ಬಗ್ಗೆ ಉಡುಪಿಯಲ್ಲಿರುವ ಆರತಿ ಎಂಬ ಹೆಸರಿನ ನಿಮ್ಮ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ. | |
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| | ಉತ್ತರ : ವಾವಹಾರಿಕ ಪತ್ರ :<br><br>ಇವರಿಂದ, ದಿನಾಂಕ : 06/06/2022<br>ವಿಕಾಸ್, ಸ್ಥಳ : ಸೊರಬ.<br>10ನೆಯ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ಸೊರಬ.<br><br>ಇವರಿಗೆ,<br>ಮಾನ್ಯ ಮುಖ್ಯೋಪಾಧ್ಯಾಯರು,<br>ಸರ್ಕಾರಿ ಪ್ರೌಢಶಾಲೆ,<br>ಸೊರಬ.<br><br>ಮಾನ್ಯರೇ,<br><br>ವಿಷಯ : ಐದು ದಿನಗಳ ರಜೆಯನ್ನು ಕೋರಿ.<br>* * *<br>ವಿಕಾಸ್ ಆದ ನಾನು 10ನೆಯ ತರಗತಿ ವಿದ್ಯಾರ್ಥಿ. ಜೂನ್ 12 ರಂದು ರಂದು ನನ್ನ ಅಕ್ಕನ ಮದುವೆಯು ಹುಬ್ಬಳ್ಳಿಯಲ್ಲಿ ನಡೆಯಲಿದೆ. ಮದುವೆ ಸಮಾರಂಭಕ್ಕೆ ನಾನು ಕುಟುಂಬದವರ ಜೊತೆಯಲ್ಲಿ ಹೋಗಲೇ ಬೇಕಾಗಿರುವುದರಿಂದ ಶಾಲೆಗೆ ಬರಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ನನಗೆ ದಿನಾಂಕ 08/06/2022 ರಿಂದ 12/06/2022 ರವರೆಗೆ ಐದು ದಿನಗಳ ರಜೆಯನ್ನು ನೀಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಆ ದಿನಗಳ ಎಲ್ಲಾ ಕೆಲಸಕಾರ್ಯಗಳನ್ನು ಶಾಲೆಗೆ ಬಂದ ನಂತರ ತಪ್ಪದೆ ಮಾಡಿ ಮುಗಿಸುತ್ತೇನೆ ಎಂಬ ಭರವಸೆಯನ್ನು ನಾನು ತಮಗೆ ನೀಡುತ್ತೇನೆ. ಇದರಲ್ಲಿ ನಮ್ಮ ಪೋಷಕರ ಸಹಿಯೂ ಇದೆ.<br><br>ವಂದನೆಗಳೊಂದಿಗೆ,<br><br>ತಮ್ಮ ವಿಶ್ವಾಸಿ<br>ಸಹಿ/–<br>(ವಿಕಾಸ) | |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವೈಯಕ್ತಿಕ ಪತ್ರ : | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2ಅಂಕಗಳು |
| | ಗೆ, ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5ಅಂಕಗಳು |

| ಕ್ರಮ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಉತ್ತರ : ವೈಯಕ್ತಿಕ ಪತ್ರ :<br><br>ಕ್ಷೇಮ ಶ್ರೀ<br><br>ಇವರಿಂದ,<br>ಮಧುಮಿತ,<br>10ನೇ ತರಗತಿ,<br>ಸರ್ಕಾರಿ ಪ್ರೌಢಶಾಲೆ,<br>ಮಂಡ್ಯ.<br>ದಿನಾಂಕ : 15/10/2021<br><br>ಪ್ರೀತಿಯ ಗೆಳತಿ ಆರತಿ,<br><br>ಇಲ್ಲಿ ನಾನು ಕ್ಷೇಮವಾಗಿದ್ದೇನೆ. ಅಲ್ಲಿ ನೀನೂ ಕೂಡ ಕುಟುಂಬದೊಂದಿಗೆ ಕ್ಷೇಮವಾಗಿದ್ದೀಯಾ ಎಂದು ನಂಬಿರುತ್ತೇನೆ.<br><br>ನನ್ನ ವಿದ್ಯಾಭ್ಯಾಸ ಇಲ್ಲಿ ಚೆನ್ನಾಗಿ ನಡೆಯುತ್ತಿದೆ. ನಿನ್ನ ವಿದ್ಯಾಭ್ಯಾಸವು ಚೆನ್ನಾಗಿ ನಡೆಯುತ್ತಿದೆ ಎಂದು ಭಾವಿಸುತ್ತೇನೆ. ಅಂದ ಹಾಗೆ ಈ ಪತ್ರ ಬರೆದ ಕಾರಣವೇನೆಂದರೆ ನಮ್ಮ ಶಾಲೆಯ ಶೈಕ್ಷಣಿಕ ಪ್ರವಾಸದ ಅನುಭವವನ್ನು ನಿನ್ನೊಂದಿಗೆ ಹಂಚಿಕೊಳ್ಳುತ್ತಿದ್ದೇನೆ. ನಮ್ಮ ಶಾಲೆಯಿಂದ ದಸರಾ ರಜೆಯಲ್ಲಿ ಶೈಕ್ಷಣಿಕ ಪ್ರವಾಸವನ್ನು ದಿನಾಂಕ 03–010–2021 ರಿಂದ 5/10/2021 ರವರೆಗೆ ಮೂರುದಿನಗಳು ಮೈಸೂರಿಗೆ ಕರೆದುಕೊಂಡು ಹೋಗಿದ್ದರು. ಮೊದಲು ಶಕ್ತಿದೇವತೆಯಾದ ಚಾಮುಂಡಿ ದೇವಿಯ ದರ್ಶನ ಮಾಡಿ ಮೈಸೂರು ಅರಮನೆಗೆ ಹೋದೆವು. ಸರತಿ ಸಾಲಿನಲ್ಲಿ ನಿಂತು ಅರಮನೆಯನ್ನು ವೀಕ್ಷಿಸಿದೆವು. ಅದರ ಸೊಬಗನ್ನು ವರ್ಣಿಸಲು ಅಸಾಧ್ಯ. ಅದನ್ನು ನೋಡಿಯೇ ಕಣ್ತುಂಬಿಕೊಳ್ಳಬೇಕು. ಮಾರನೆಯ ದಿನ ದಸರಾ ಉತ್ಸವವನ್ನು ನೋಡಿದೆವು. ಅಂದು ರಾತ್ರಿ ಕೆ.ಆರ್.ಎಸ್. ಭೇಟಿ ನೀಡಿದೆವು. ವರ್ಣಮಯವಾದ ನೀರಿನ ಬುಗ್ಗೆಯನ್ನು ನೋಡುತ್ತಾ ಕುಣಿದು ಕುಪ್ಪಳಿಸಿದೆವು. ಮಾರನೆಯ ದಿನ ಮೃಗಾಲಯ ನೋಡಿಕೊಂಡು ಊರಿಗೆ ವಾಪಸಾದೆವು. ನೀನು ಜೊತೆಗಿದ್ದರೆ ಚೆನ್ನಾಗಿರುತ್ತಿತ್ತು ಎಂಬ ನೆನಪು ಕಾಡಿದ್ದಂತೂ ಸತ್ಯ. ಇನ್ನೇನು ವಿಷಯವಿಲ್ಲ.<br><br>ಮನೆಯಯವರಿಗೆಲ್ಲರಿಗೂ ನನ್ನ ನಮಸ್ಕಾರವನ್ನು ತಿಳಿಸಿ<br><br>ಇಂತಿ ನಿನ್ನ ಪ್ರೀತಿಯ ಗೆಳತಿ<br>ಸಹಿ/–<br>(ಮಧುಮಿತ)<br><br>ಇವರಿಗೆ,<br>ಆರತಿ,<br>ದೇವಸ್ಥಾನ ರಸ್ತೆ<br>ಉಡುಪಿ. | |